ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಡಿಸೆಂಬರ್ 09, 2024

ಸಂಪುಟ : 51 ಸಂಚಿಕೆ : 206 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



ದಾವಣಗೆರೆ ಕುವೆಂಪು ಕನ್ನಡ ಭವನದಲ್ಲಿ ಆರೋಹಿ ಸಂಗೀತ ಕಲಾ ಶಾಲೆ ವತಿಯಿಂದ ಪಂ. ಪುಟ್ಟರಾಜ ಕವಿ ಗವಾಯಿಗಳ ಗುರುವಂದನೆ ಪ್ರಯುಕ್ತ 'ಉದಯ ರಾಗದಿಂದ ಸಂಧ್ಯಾರಾಗ' ಸಂಗೀತ ಮಹೋತ್ಸವ ಹಾಗೂ ವಾರ್ಷಿಕ ಸಂಭ್ರಮ ಕಾರ್ಯಕ್ರಮವನ್ನು ಡಿವೈಎಸ್ಪಿ ರುದ್ರೇಶ್ ಉಜ್ಜಿನಿಕೊಪ್ಪ ಉದ್ಘಾಟಿಸಿದರು.

## ಕನ್ನಡ ಭಾಷೆಗೆ ಶಕ್ತಿ ತುಂಬಿದ ಸಾಹಿತ್ಯ, ಸಂಗೀತ, ಲಲಿತ ಕಲೆ

**'ಉದಯ ರಾಗದಿಂದ ಸಂಧ್ಯಾರಾಗ' ಕಾರ್ಯಕ್ರಮದಲ್ಲಿ ಆವರಗೊಳ್ಳ ಶ್ರೀ ಅಭಿಮತ**

ದಾವಣಗೆರೆ, ಡಿ. 8- ಸಾಹಿತ್ಯ, ಸಂಗೀತ, ಲಲಿತ ಕಲೆಗಳಿಂದ ಕನ್ನಡ ಭಾಷೆ ಗಟ್ಟಿಯಾಗಿ ಉಳಿಯಲು ಸಾಧ್ಯವಾಗಿದೆ. ಇಂತಹ ನೆಲೆಗಟ್ಟಿಗೆ ಶಕ್ತಿ ತುಂಬಿದವರು ತ್ರಿಭಾಷಾ ಪಂಡಿತರಾದ ಲಿ. ಪಂಡಿತ್ ಪುಟ್ಟರಾಜ್ ಕವಿ ಗವಾಯಿಗಳು ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಗವಾಯಿಗಳ ಸಂಗೀತ ಸೇವೆಯನ್ನು ಸ್ಮರಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಆರೋಹಿ ಸಂಗೀತ ಕಲಾ ಶಾಲೆ ವತಿಯಿಂದ ಪಂ. ಪುಟ್ಟರಾಜ ಕವಿ ಗವಾಯಿಗಳ ಗುರುವಂದನೆ ಪ್ರಯುಕ್ತ ಹಮ್ಮಿಕೊಂಡಿದ್ದ 'ಉದಯ ರಾಗದಿಂದ ಸಂಧ್ಯಾರಾಗ' ಸಂಗೀತ ಮಹೋತ್ಸವ ಹಾಗೂ ವಾರ್ಷಿಕ ಸಂಭ್ರಮ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಮಕ್ಕಳನ್ನು ಕೇವಲ ಅಂಕ ಗಳಿಕೆಗೆ ಸೀಮಿತಗೊಳಿಸಿ ಅವರನ್ನು ಪೋಷಿಸುವ ಒಂದು ವರ್ಗ ಇದ್ದರೆ ಸಂಗೀತ, ಸಂಸ್ಕೃತಿ, ಸಾಹಿತ್ಯವನ್ನು ಪರಿಚಯಿಸುವ ಮತ್ತೊಂದು ವರ್ಗ ಕೂಡ ಇಲ್ಲಿದೆ. ಇಂತಹ ಕಾರ್ಯಕ್ರಮಗಳ ಮೂಲಕ ಸನಾತನ ಭಾರತೀಯ ಸಂಸ್ಕೃತಿಯನ್ನು ಉಳಿಸಲು ಪ್ರಯತ್ನಿಸುತ್ತಿರುವುದು ಸ್ತುತ್ಯಾರ್ಹ ಎಂದರು.

ವ್ಯಕ್ತಿಯ ಮಾನಸಿಕ ತೊಂದರೆ, ವೇದನೆಗಳನ್ನು ನಿವಾರಿಸಿಕೊಳ್ಳಲು ಸಂಗೀತ ದಿವ್ಯೌಷಧಿಯಾಗಿದೆ. ಮಕ್ಕಳಿಗೆ ಕೇವಲ ಓದು ಅಷ್ಟೇ ಮುಖ್ಯವಲ್ಲ. ಅದರೊಟ್ಟಿಗೆ ಸಾಹಿತ್ಯ, ಸಂಗೀತ, ಲಲಿತ ಕಲೆಗಳನ್ನು ಕಲಿಸುವ ಮೂಲಕ ಪ್ರೋತ್ಸಾಹಿಸುತ್ತಿರುವವರು ಪ್ರಜ್ಞಾವಂತ ಪೋಷಕರು ಎಂದು ಪ್ರಶಂಸಿಸಿದರು.

ಸನಾತನ ಭಾರತೀಯ ಸಂಸ್ಕೃತಿಯಲ್ಲಿ ಸಾಹಿತ್ಯ ಮತ್ತು ಸಂಗೀತ ಎರಡು ಶಕ್ತಿಗಳಿದ್ದಂತೆ. ಇವುಗಳು ಕನ್ನಡ ಭಾಷೆಯನ್ನು ಅತ್ಯಂತ ಎತ್ತರಕ್ಕೆ ಬೆಳೆಸುವಲ್ಲಿ ಪ್ರಮುಖ ಪಾತ್ರ (2ನೇ ಪುಟಕ್ಕೆ)

## ದೆಹಲಿಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ



ನವದೆಹಲಿ, ಡಿ.8- ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಭಾನುವಾರ ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಕಿಡಿ ಕಾರಿದ ಮಾಜಿ ಮುಖ್ಯಮಂತ್ರಿ, ಒಂದು ವೇಳೆ ದೆಹಲಿ ಪೊಲೀಸ್ ಮೇಲೆ ನಮ್ಮ ಸರ್ಕಾರದ ನಿಯಂತ್ರಣ (2ನೇ ಪುಟಕ್ಕೆ)

## ಮಹಾಕುಂಭ ಮೇಳಕ್ಕೆ 13 ಸಾವಿರ ರೈಲುಗಳು

ಪ್ರಯಾಗ್‌ರಾಜ್, ಡಿ.8- ಮಹಾಕುಂಭ ಮೇಳದ ವೇಳೆ ಭಕ್ತರ ಅನುಕೂಲಕ್ಕಾಗಿ ರೈಲ್ವೆ ಇಲಾಖೆಯು 3,000 ವಿಶೇಷ ರೈಲುಗಳು ಸೇರಿದಂತೆ ಸುಮಾರು 13,000 ರೈಲುಗಳನ್ನು ಓಡಿಸಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಭಾನುವಾರ ತಿಳಿಸಿದ್ದಾರೆ. ವಾರಣಾಸಿಯಿಂದ ರೈಲಿನಲ್ಲಿ (2ನೇ ಪುಟಕ್ಕೆ)

## ಉತ್ತರ ಕರ್ನಾಟಕ ಚರ್ಚೆಗೆ ಪ್ರಾಶಸ್ತ್ಯ

### ಇಂದಿನಿಂದ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶ ಆರಂಭ

ಬೆಳಗಾವಿ, ಡಿ.8- ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಚರ್ಚೆಗೆ ಪ್ರಾಶಸ್ತ್ಯ ಕೊಡಲಾಗುವುದು ಎಂದು ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಅಂತಿಮ ಸಿದ್ಧತೆಗಳನ್ನು ಪರಿಶೀಲಿಸಿದ ನಂತರ, ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಲದ ವಿಧಾನಮಂಡಲ ಚಳಿಗಾಲದ ಅಧಿವೇಶನಕ್ಕೆ 25 ಕೋಟಿ ರೂ. ಖರ್ಚಾಗಲಿದೆ ಎಂದರು.

ಡಿ.9ರಂದು ಬೆಳಗ್ಗೆ 11ಕ್ಕೆ ಅಧಿವೇಶನಕ್ಕೆ ಚಾಲನೆ ಸಿಗಲಿದೆ. ಇದಕ್ಕೂ ಮೊದಲು, ಬಸವಣ್ಣನವರು ಸ್ಥಾಪಿಸಿದ 'ಅನುಭವ ಮಂಟಪ'ದ ಬೃಹತ್ ತೈಲವರ್ಣ ಚಿತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆ ಮಾಡುವರು' ಎಂದರು.

**ಈ ಸಲದ ಅಧಿವೇಶನಕ್ಕೆ 25 ಕೋಟಿ ರೂ. ಖರ್ಚು**

ಈ ಬಾರಿಯ ಅಧಿವೇಶನದಲ್ಲಿ ಐದು ವಿಧೇಯಕಗಳ ಮೇಲೆ ಸುದೀರ್ಘವಾಗಿ ಚರ್ಚಿಸುತ್ತೇವೆ. ವಿಧಾನಸಭೆ ಕಲಾಪಗಳಿಗೆ ಈವರೆಗೆ 3,004 ಪ್ರಶ್ನೆ, 205 ಗಮನ ಸೆಳೆಯುವ ಸೂಚನೆ ಸ್ವೀಕೃತವಾಗಿವೆ. ನಿಯಮ 96ರಡಿ 351 ಸೂಚನೆಗಳು ಮತ್ತು 3 ಖಾಸಗಿ ವಿಧೇಯಕಗಳನ್ನು ಸ್ವೀಕರಿಸಲಾಗಿದೆ. ರಾಜ್ಯದಲ್ಲಿ ಇತ್ತೀಚೆಗೆ ನಡೆದ ಮೂರು ವಿಧಾನಸಭೆ ಕ್ಷೇತ್ರಗಳ ಉಪಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಲಿದ್ದೇವೆ ಎಂದು ತಿಳಿಸಿದರು.

ಅಧಿವೇಶನದ ಆರಂಭದಲ್ಲೇ ಉತ್ತರ ಕರ್ನಾಟಕದ ಬಗ್ಗೆ ಚರ್ಚಿಸಬೇಕೆಂಬ ಬೇಡಿಕೆಗೆ ಪ್ರತಿಕ್ರಿಯಿಸಿದ ಖಾದರ್, ಅಧಿವೇಶನದ ಆರಂಭ ಅಥವಾ ಅಂತ್ಯಕ್ಕೆ ಈ ಭಾಗದ ಬಗ್ಗೆ ಚರ್ಚಿಸಿದರೆ ಹೆಚ್ಚಿನ ವ್ಯತ್ಯಾಸವಾಗದು. ಡಿ.9ರಂದು ನಡೆಯಲಿರುವ ಕಲಾಪ ಸಲಹಾ ಸಮಿತಿ (5ನೇ ಪುಟಕ್ಕೆ)

**ಬೆಂಗಳೂರಿನ ವಿಧಾನಸೌಧದ ಮಾದರಿಯಲ್ಲೇ, ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸಭಾಧ್ಯಕ್ಷರ ಪೀಠ ಸಿದ್ಧಪಡಿಸಿದ್ದೇವೆ. ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮ ಇದಕ್ಕೆ 45 ಲಕ್ಷ ರೂ. ಖರ್ಚು ಮಾಡಿದೆ.**

**- ಯು.ಟಿ. ಖಾದರ್, ವಿಧಾನಸಭಾಧ್ಯಕ್ಷ**

## ಭ್ರಷ್ಟ ಸರ್ಕಾರದ ಚಳಿ ಬಿಡಿಸುವೆ

### ಹೊನ್ನಾಳಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ



ಹೊನ್ನಾಳಿ, ಡಿ.8- ಅಭಿವೃದ್ಧಿ ಶೂನ್ಯ ಕಾಂಗ್ರೆಸ್ ಸರ್ಕಾರವು ರೈತರ, ಬಡ ವರ್ಗದ ಮತ್ತು ರಾಜ್ಯದ ಎಲ್ಲಾ ವರ್ಗದ ಜನರಿಗೆ ಶಾಪವಾಗಿ ಪರಿಣಮಿಸಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹರಿಹಾಯ್ದರು.

ಶಿಕಾರಿಪುರದಿಂದ ನಂದಿಗುಡಿಯ ಖಾಸಗಿ ಕಾರ್ಯಕ್ರಮಕ್ಕೆ ಹೋಗುವ ಮಾರ್ಗ ಮಧ್ಯೆ ಪಟ್ಟಣದ ವೀರ ಸಂಗೊಳ್ಳಿ ರಾಯಣ್ಣ ಮತ್ತು ಟಿ.ಬಿ.ವೃತ್ತದಲ್ಲಿರುವ ಭಕ್ತ ಕನಕದಾಸರ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ ಕಾರ್ಯಕರ್ತರನ್ನುದ್ದೇಶಿಸಿ ಅವರು ಮಾತನಾಡಿದರು.

ರಾಜ್ಯದ ಅಭಿವೃದ್ಧಿ ಮತ್ತು ಎಲ್ಲಾ ಸಮುದಾಯಗಳ ಹಿತ ಕಾಯುತ್ತೇವೆಂದು ಹೇಳಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು, ಅಧಿಕಾರಕ್ಕೆ ಬಂದಾಗಿನಿಂದಲೂ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿಲ್ಲ. ಈ ಜನ ವಿರೋಧಿ ಸರ್ಕಾರಕ್ಕೆ ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದ ಒಳಗೆ ಮತ್ತು ಹೊರಗೆ ಚಳಿ ಬಿಡಿಸುತ್ತೇವೆ ಎಂದರು.

ಬಿ.ಎಸ್. ಯಡ್ಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಅನುಷ್ಠಾನಕ್ಕೆ ತಂದಿದ್ದ ಭಾಗ್ಯ ಲಕ್ಷ್ಮಿ ಮತ್ತು ಕಿಸಾನ್ ಸಮ್ಮಾನ್ ಯೋಜನೆಗಳಿಗೆ ಈ ಸರ್ಕಾರವು ತಡೆ ಹಾಕಿದ್ದು ಎಷ್ಟರ ಮಟ್ಟಿಗೆ ಸರಿ ? ಎಂದು ಪ್ರಶ್ನಿಸಿದ ಅವರು, ನೆರೆ ಮತ್ತು ಬರಗಾಲದಿಂದ ತತ್ತರಿಸಿರುವ ರೈತ ಸಮುದಾಯಕ್ಕೆ ಸೂಕ್ತ ಪರಿಹಾರ ಬಿಡುಗಡೆ ಮಾಡಿಲ್ಲ ಎಂದರು.

**ಎಂ.ಪಿ.ಆರ್. ಎಂದರೆ ಅಭಿವೃದ್ಧಿ:** ಎಂ.ಪಿ.ರೇಣುಕಾಚಾರ್ಯ ಅವರು ಅಂದಿನ ಮುಖ್ಯಮಂತ್ರಿ ಬಿ.ಎಸ್.ವೈ. ಅವರಿಂದ ತಾಲ್ಲೂಕಿನ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಮಂಜೂರು ಮಾಡಿಸಿಕೊಂಡು ಇದುವರೆಗೂ ಸುಮಾರು 5000 ಕೋಟಿ (2ನೇ ಪುಟಕ್ಕೆ)

## ನಾನೇಕೆ ಸಿಎಂ ಆಗಬಾರದು?

### ಶಾಮನೂರು ಶಿವಶಂಕರಪ್ಪನವರ ಡೇಟ್ ಎಕ್ಸ್‌ಪೈರಿ ಆಗಿದೆ ಎಂದ ಯತ್ನಾಳ್



ಬಾಗಲಕೋಟೆ, ಡಿ.8- ಶಾಮನೂರು ಶಿವಶಂಕರಪ್ಪನವರ ಡೇಟ್ ಎಕ್ಸ್‌ಪೈರಿ ಆಗಿದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ.

ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಸವಣ್ಣನ ಬಗ್ಗೆ ಹೇಳಿಕೆ ನೀಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಕುರಿತು ಮಾಧ್ಯದವರು ಕೇಳಿದ ಪ್ರಶ್ನೆಗೆ ಮೇಲಿನಂತೆ ಉತ್ತರಿಸಿದ್ದಾರೆ.

ಶಿವಶಂಕರಪ್ಪ ಮಾತನಾಡುತ್ತಾರೆ. ಮಾತಾಡಲಿ ಬಿಡಿ. ಅವರಿಗೆ ಬೇರೆ ಕೆಲಸ ಏನಿದೆ ? ಅವರದ್ದು ಎಕ್ಸ್‌ಪೈರಿ ಡೇಟ್ ಎಂದು ಟೀಕಿಸಿದರು.

ನಾನೇಕೆ ಮುಖ್ಯಮಂತ್ರಿ ಆಗಬಾರದು. ನನ್ನಲ್ಲಿ ಏನು ಕೊರತೆ ಇದೆ. ಪ್ರಾಮಾಣಿಕರನ್ನು ಆಯ್ಕೆ ಮಾಡಲು ಮುಂದಾದರೆ ಅಥವಾ ಒಳ್ಳೆಯ ಮನುಷ್ಯ ಬೇಕೆಂದು ದೇವರು ಆದೇಶಿಸಿದರೆ, ನನ್ನ ಹೆಸರು ಮೊದಲು ಬರುತ್ತದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿದ್ದಾರೆ.

ಭ್ರಷ್ಟಾಚಾರ ಅಥವಾ ಏನಾದರೂ ಹಗರಣ ಇದ್ದಿದ್ದರೆ ನನ್ನನ್ನ ಬಿಡ್ತಿದ್ರಾ? ಈ ಹಿಂದೆ ನನ್ನ ಮೇಲೂ ದಾಳಿ ಮಾಡಿಸಿದ್ದಾರೆ, ಗುಪ್ತಚರ ಇಲಾಖೆಯನ್ನೂ ಬಿಟ್ಟಿದ್ದರು. (5ನೇ ಪುಟಕ್ಕೆ)

## ಕೋಟ್ಯಾಂತರ ರೂ. ಮೌಲ್ಯದ ಉದ್ಯಾನವನವನ್ನು ಉಳಿಸುವಲ್ಲಿ ಯಶಸ್ವಿಯಾದ ಆವರಗೆರೆ ಗ್ರಾಮಸ್ಥರು

- ▲ ಆವರಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ವಂಚನೆ ಆರೋಪ
- ▲ ತನಗೆ ಸಂಬಂಧವಿಲ್ಲದ ಉದ್ಯಾನವನವನ್ನು ಧ್ವಂಸಗೊಳಿಸಿ, ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲು ಮುಂದಾಗಿದ್ದ ವಿಎಸ್‌ಎಸ್‌ಎನ್
- ▲ ಗ್ರಾಮಸ್ಥರ ದೂರಿಗೆ ಸ್ಪಂದಿಸಿ ಖುದ್ದು ಸ್ಥಳ ಪರಿಶೀಲಿಸಿದ ಡಿಸಿ ಡಾ. ಗಂಗಾಧರಸ್ವಾಮಿ
- ▲ ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಉದ್ಯಾನವನದ ಇ-ಸ್ವತ್ತು ಪ್ರಕಟಿಸಿದ ಪಾಲಿಕೆ ಆಯುಕ್ತರಾದ ರೇಣುಕಾ
- ▲ ವಿಎಸ್‌ಎಸ್‌ಎನ್ ಆಡಳಿತ ಮಂಡಳಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಗ್ರಾಮಸ್ಥರ ಆಗ್ರಹ

ದಾವಣಗೆರೆ, ಡಿ. 8- ಸಾರ್ವಜನಿಕರಿಗೆ ಮೀಸಲಾಗಿದ್ದ ಉದ್ಯಾನವನವನ್ನು ಒಡೆದು ಹಾಕಿದ್ದಲ್ಲದೇ, ಅಲ್ಲಿ ಅನಧಿಕೃತವಾಗಿ ನಿರ್ಮಿಸಲಾಗುತ್ತಿದ್ದ ವಾಣಿಜ್ಯ ಮಳಿಗೆಗಳ ಕಾಮಗಾರಿಯನ್ನು ಸ್ಥಗಿತಗೊಳಿಸುವಲ್ಲಿ ತಾವು ನಡೆಸಿದ ಹೋರಾಟಕ್ಕೆ ಜಯ ತಂದುಕೊಳ್ಳುವುದರ ಮೂಲಕ ಸರ್ಕಾರದ ಆಸ್ತಿಯನ್ನು ಉಳಿಸುವಲ್ಲಿ ಗ್ರಾಮಸ್ಥರು ಯಶಸ್ವಿಯಾಗಿದ್ದಾರೆ.

ನಗರಕ್ಕೆ ಹೊಂದಿಕೊಂಡಂತಿರುವ ಆವರಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಕೈಗೊಂಡಿದ್ದ ಕ್ರಮವನ್ನು ಪ್ರಶ್ನಿಸಿ, ಅನೇಕ ದಿನಗಳಿಂದ ಗ್ರಾಮಸ್ಥರು ನಡೆಸಿದ ಹೋರಾಟದ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆಯು 'ಇ-ಸ್ವತ್ತು'ಅನ್ನು ಪ್ರಕಟಿಸುವುದರ ಮೂಲಕ ಸರ್ಕಾರದ ಆಸ್ತಿಯನ್ನಾಗಿ ಉಳಿಸಿದೆ.

ಗ್ರಾಮದ ಅನೇಕ ಮುಖಂಡರು ಮಾಡಿಕೊಂಡ ಮನವಿಯ ಅನ್ವಯ ಜಿಲ್ಲಾಧಿಕಾರಿ ಡಾ. ಗಂಗಾಧರಸ್ವಾಮಿ ಅವರು ಕಳೆದ ಹದಿನೈದು ದಿನಗಳ ಹಿಂದೆ ಸ್ಥಳ ಪರಿಶೀಲನೆ ನಡೆಸಿ ನೀಡಿದ ನಿರ್ದೇಶನದ ಮೇರೆಗೆ ನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಅವರು, 'ಈ ನಿವೇಶನ ಸರ್ಕಾರಕ್ಕೆ ಸೇರಿದ್ದು' ಎನ್ನುವುದರ ಕುರಿತಂತೆ 2024, ನವೆಂಬರ್ 16ರಂದು ಇ-ಸ್ವತ್ತು ಪ್ರಕಟಿಸಿದರು.

**ಹಿನ್ನೆಲೆ :** ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಆವರಗೆರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಪಿಬಿ ರಸ್ತೆಗೆ ಹೊಂದಿಕೊಂಡಂತಿರುವ ಉದ್ಯಾನವನವನ್ನು ರಾತ್ರೋ ರಾತ್ರಿ ಒಡೆದು ಹಾಕಿ ಅಲ್ಲಿ ಪಾಲಿಕೆಯಿಂದ ಅನುಮತಿಯನ್ನೂ ಪಡೆಯದೇ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುತ್ತಿದೆ ಎಂದು ಗ್ರಾಮಸ್ಥರು ದೂರಿದ್ದರು.

ಸಹಕಾರ ಸಂಘವು ತನಗೆ ಸೇರಿದ ಡೋರ್ ನಂಬರ್ 103ರಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸುವುದಾಗಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮೂಲಕ ನಬಾರ್ಡ್‌ನಿಂದ 99.73 ಲಕ್ಷ ರೂ. ಸಾಲ ಮಂಜೂರು ಮಾಡಿಸಿಕೊಂಡಿತ್ತು. ಆದರೆ, ಮಳಿಗೆಗಳನ್ನು ಬೇರೊಂದು ಕಡೆ ಅಂದರೆ ಸದರಿ 103 ಡೋರ್ ನಂಬರ್‌ನಿಂದ ಸುಮಾರು 500 ಅಡಿ ದೂರದಲ್ಲಿರುವ ಉದ್ಯಾನವನವನ್ನು ಒಡೆದು ಅಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುತ್ತಿದೆ ಎಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದ ದೂರಿನಲ್ಲಿ ಗ್ರಾಮಸ್ಥರು ಆರೋಪಿಸಿದ್ದರು.

**ವಿವರ :** ಆವರಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಆವರಗೆರೆ ಗ್ರಾಮದಲ್ಲಿರುವ ಡೋರ್ ನಂಬರ್ 103ರಲ್ಲಿ ತುಂಬಾ ವರ್ಷಗಳಿಂದ ಗೋಡೌನ್ ಹೊಂದಿದೆ. (2ನೇ ಪುಟಕ್ಕೆ)



## ದುಗ್ಗಮ್ಮ ದೇವಿಗೆ ವಿಶೇಷ ಅಲಂಕಾರ

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿಗೆ ಭಾನುವಾರ ಹೂ ಮತ್ತು ವಿವಿಧ ಹಣ್ಣುಗಳಿಂದ ಮಾಡಲಾಗಿದ್ದ ವಿಶೇಷ ಅಲಂಕಾರವು ಭಕ್ತರ ಕಣ್ಮನ ಸೆಳೆಯಿತು. ಪೂಜಾರ್ ವಂಶಸ್ಥರು ವಿಶೇಷ ಅಲಂಕಾರದ ಸೇವೆ ನೆರವೇರಿಸಿದರು.




## ನೊಳಂಬ ವೀರಶೈವ ಸಮಾಜ ಸ್ವಾಭಿಮಾನದ ಸಂಕೇತ

### ನಂದಿಗುಡಿ ಬೃಹನ್ಮಠದ ಕಾರ್ಯಕ್ರಮದಲ್ಲಿ ಬಿ.ವೈ.ವಿಜಯೇಂದ್ರ ಮೆಚ್ಚುಗೆ



ಮಲೇಬೆನ್ನೂರು, ಡಿ. 8- ನೊಳಂಬ ವೀರಶೈವ ಸಮಾಜ ಸ್ವಾಭಿಮಾನಕ್ಕೆ ಹೆಸರಾಗಿದ್ದು, ಯಾರ ಹಂಗಿಲ್ಲದೆ ಬದುಕುತ್ತಿರುವ ಸಮಾಜವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ನಂದಿಗುಡಿ ಬೃಹನ್ಮಠದಲ್ಲಿ ಹಮ್ಮಿಕೊಂಡಿದ್ದ ಶ್ರೀ ಗುರು ಕೆಂಚವೀರೇಶ್ವರ ಮಹಾ ಶಿವಯೋಗಿಗಳವರ ಪುಣ್ಯ ಸಂಸ್ಮರಣೆ ಮಹೋತ್ಸವ ಮತ್ತು ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿಯವರ 15 ನೇ ವರ್ಷದ ಸೂರ್ಯ ಸಿಂಹಾಸನಾರೋಹಣ ಸಮಾರಂಭ ಹಾಗೂ ಶ್ರೀ ನಂದಿ ನೊಳಂಬ ಸ್ತ್ರೀ ಶಕ್ತಿ ಸಂಘಗಳ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ದೀಪ ಬೆಳಗಿಸಿ, ಉದ್ಘಾಟಿಸಿ ಮಾತನಾಡಿದರು.

ಈ ಸಮಾಜದಲ್ಲಿ ಬಡವರಿದ್ದರೂ ಶ್ರೀಮಂತ ಹೃದಯ ಹೊಂದಿದ್ದಾರೆ. ರಾಜಕೀಯದಲ್ಲಿ ನಂಬಿದವರಿಗೆ ಶಕ್ತಿ ತುಂಬುವ ಈ ಸಮಾಜಕ್ಕೆ ಸರ್ಕಾರದ ಅಗತ್ಯ ಸೌಲಭ್ಯಗಳು ಇದುವರೆಗೂ ಸಿಕ್ಕಿಲ್ಲ ಎಂಬ ವಿಷಯ ತಿಳಿದು ಬೇಸರವಾಯಿತು. ಸಮ ಸಮಾಜದ ಕನಸು ಕಂಡ ಬಸವಣ್ಣನವರ ಹಾದಿಯಲ್ಲಿ ಮಠದ ಶ್ರೀಗಳು ಎಲ್ಲಾ ಸಮಾಜಗಳ ಧ್ವನಿಯಾಗಿ ಕೆಲಸ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಈ ಸಮಾಜ ಹಾಗೂ ನಂದಿಗುಡಿ ಮಠದ ಅಭಿವೃದ್ಧಿಗೆ ಗಮನಹರಿಸುವುದಾಗಿ ಭರವಸೆ ನೀಡಿದ ವಿಜಯೇಂದ್ರ ಅವರು, ಈ ನಾಡಿನಲ್ಲಿ ಎಲ್ಲಾ ವರ್ಗಗಳ ಜನರ ಪರವಾಗಿ ನಿರಂತರ ಕೆಲಸ ಮಾಡಿದ್ದ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾದ ನಂತರ ಎಲ್ಲಾ ವರ್ಗಗಳ ಏಳಿಗೆಗೆ ಸ್ಪಂದಿಸುವುದರ ಜೊತೆಗೆ ವೀರಶೈವ ಮಠಗಳಲ್ಲದೇ ಹಿಂದುಳಿದ, ದಲಿತ ಮಠಗಳ ಅಭಿವೃದ್ಧಿಗೂ ಸರ್ಕಾರದಿಂದ ಸಾಕಷ್ಟು ನೆರವು ನೀಡಿದ್ದನ್ನು ರಾಜ್ಯದ ಜನ ಮರೆತಿಲ್ಲ ಎಂದರು.

ಮಠ-ಮಾನ್ಯಗಳಿಂದ ಸಮಾಜವನ್ನು ತಿದ್ದುವ ಕೆಲಸ ಆದಿ ಕಾಲದಿಂದಲೂ ನಡೆದುಕೊಂಡು ಬಂದಿದ್ದು, ಆ ಕಾರಣಕ್ಕೆ ಜನರು ಮಠಗಳಿಗೆ ವಿಶೇಷ ಗೌರವ ಕೊಡುತ್ತಾ ಬಂದಿದ್ದಾರೆ. ಸ್ವಾರ್ಥಕ್ಕಾಗಿ ಸಮಾಜ ಸಮಾಜಗಳ ನಡುವೆ ಕಲಹ ಉಂಟು ಮಾಡುವವರ ಬಗ್ಗೆ ಜನ ಜಾಗೃತರಾಗಿರಬೇಕು. ಮಕ್ಕಳಿಗೆ ಶಿಕ್ಷಣದ ಜೊತೆಗೆ ಗುರು-ಹಿರಿಯರ ಬಗ್ಗೆ ಮತ್ತು ದೇಶಾಭಿಮಾನ ಬೆಳೆಸುವ ಸಂಸ್ಕಾರ ಬೆಳೆಸಬೇಕೆಂದು ವಿಜಯೇಂದ್ರ ಮನವಿ ಮಾಡಿದರು.

ಇದಕ್ಕೂ ಮುನ್ನ ಮಾತನಾಡಿದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು, (2ನೇ ಪುಟಕ್ಕೆ)

## ನಿಖಿಲ್‌ಗೆ ಜೆಡಿಎಸ್ ಮುನ್ನಡೆಸುವ ಜವಾಬ್ದಾರಿ ಸಾಧ್ಯತೆ

ಬೆಂಗಳೂರು, ಡಿ.8- ಇತ್ತೀಚೆಗಷ್ಟೇ ಚನ್ನಪಟ್ಟಣ ವಿಧಾನಸಭಾ ಉಪಚುನಾವಣೆಯಲ್ಲಿ ಸೋತಿರುವ



ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು 2025ರಲ್ಲಿ ನಡೆಯಲಿರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಿಂದ ಕರ್ನಾಟಕದಲ್ಲಿ ಮುಂದಿನ ದಿನಗಳಲ್ಲಿ ಪ್ರಾದೇಶಿಕ ಪಕ್ಷವನ್ನು ಮುನ್ನಡೆಸುವ ಸಾಧ್ಯತೆ ಇದೆ.

ಸದ್ಯ ಕುಮಾರಸ್ವಾಮಿ ರಾಜ್ಯ ಜೆಡಿಎಸ್ ಅಧ್ಯಕ್ಷರಾಗಿದ್ದಾರೆ. ಈಗ ಕುಮಾರಸ್ವಾಮಿ ಕೇಂದ್ರ ಸಚಿವರಾಗಿರುವ ಕಾರಣ ನಿಖಿಲ್‌ಗೆ ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನ ಹಸ್ತಾಂತರವಾಗುವ ಸಾಧ್ಯತೆಯಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ.

# ವೀರಶೈವ ಸಮಾಜದ ಎಲ್ಲಾ ಒಳ ಪಂಗಡಗಳಿಗೆ 2ಎ ಮೀಸಲಾತಿ ಸಿಗಬೇಕು

ಮಲೇಬೆನ್ನೂರು, ಡಿ.8- ಪಂಚಮಸಾಲಿ ಸಮಾಜಕ್ಕೆ ಅಷ್ಟೇ ಅಲ್ಲ, ವೀರಶೈವ ಸಮಾಜದ ಎಲ್ಲಾ ಒಳಪಂಡಗಳಿಗೆ 2ಎ ಮೀಸಲಾತಿ ಸಿಗಬೇಕೆಂಬುದು ನಮ್ಮ ಆಶಯವಾಗಿದೆ ಎಂದು ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಹೇಳಿದರು.

ಅವರು, ಭಾನುವಾರ ನಂದಿಗುಡಿ ಬೃಹನ್ಮಠದಲ್ಲಿ ಹಮ್ಮಿಕೊಂಡಿದ್ದ ಶ್ರೀ ಕೆಂಚವೀರೇಶ್ವರ ಶಿವಯೋಗಿಗಳ ಪುಣ್ಯಸಂಸ್ಮರಣೆ ಮತ್ತು ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಶ್ರೀಗಳವರ 15ನೇ ವರ್ಷದ ಸೂರ್ಯ ಸಿಂಹಾಸನಾರೋಹಣ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

ಸಂವಿಧಾನದಡಿಯಲ್ಲಿ ಎಲ್ಲಾ ಸಮಾಜಗಳಿಗೆ ಸಮಾನ ಹಕ್ಕು ಸಿಗಬೇಕು. ಒಂದು ಸಮಾಜಕ್ಕೆ ಸುಣ್ಣ, ಒಂದು ಸಮಾಜಕ್ಕೆ ಬೆಣ್ಣೆ ಕೊಡುವ ಈ ಸರ್ಕಾರದ ವಿರುದ್ಧ ಎಲ್ಲರೂ ಒಂದಾಗಿ ಹೋರಾಟ ಮಾಡಬೇಕು. ವ್ಯತ್ಯಾಸಗಳು ನಮ್ಮ ಸಮಾಜದಲ್ಲಿ ಮಾತ್ರ ಇವೆ ಎಂದು ಕೊಳ್ಳಬೇಡಿ. ಎಲ್ಲಾ ಸಮಾಜಗಳಲ್ಲೂ ವ್ಯತ್ಯಾಸಗಳಿದ್ದು, ಅವುಗಳನ್ನು ಸರಿಪಡಿಸಿಕೊಂಡು ಒಂದಾಗಿ ಹೋದರೆ ಮಾತ್ರ ಪ್ರಗತಿ ಸಾಧ್ಯ ಎಂದು ಶಿವಶಂಕರ್ ಹೇಳಿದರು.

ನಂದಿಗುಡಿ ಮಠ ಎಂದರೆ, ಶಿವಶಂಕರ್ ಎನ್ನುವ ಭಾವನೆ ಜನರಲ್ಲಿದೆ. ಅದು ಸತ್ಯವೂ ಹೌದು. ನಮ್ಮ ತಂದೆ ಹೆಚ್. ಶಿವಪ್ಪನವರಿಗೆ ಮತ್ತು ನನಗೆ ಈ ಸಮಾಜ ಮತ್ತು ಮಠ ಶಕ್ತಿ ತುಂಬಿದ್ದರಿಂದ ಶಾಸಕರಾಗಲು ಸಾಧ್ಯವಾಯಿತು. ನಾವೂ ಕೂಡಾ ನೊಳಂಬ ಸಮಾಜ ನಮ್ಮ ಸಮಾಜ ಎನ್ನುವ ಭಾವನೆಯನ್ನು ಹೊಂದಿದ್ದೇವೆ.

ನನ್ನ ಉಸಿರು ಇರುವವರೆಗೂ ಈ ಸಮಾಜದವನಾಗಿ ಕೆಲಸ ಮಾಡುತ್ತೇನೆ. ಮಠಗಳಿಗೆ ಸರ್ಕಾರದ ಅನುದಾನಕ್ಕಿಂತ ಭಕ್ತರ ಸಹಕಾರ, ಬೆಂಬಲ ದೊಡ್ಡದು. ಅಂತಹ ಸಹಕಾರ, ಬೆಂಬಲವನ್ನು ಸಮಾಜದ ಬಂಧುಗಳು ಶ್ರೀಗಳಿಗೆ ನೀಡಬೇಕೆಂದು ಶಿವಶಂಕರ್ ಮನವಿ ಮಾಡಿದರು.

ಹೊನ್ನಾಳಿಯ ಶಾಂತರಾಜ್ ಪಾಟೀಲ್ ಅವರು ವಿಶೇಷ ಉಪನ್ಯಾಸ ನೀಡಿ, ಈ ಸಮಾಜಕ್ಕೆ ಬೆಳಕು ತುಂಬಿದ ಕೆಂಚವೀರೇಶ್ವರ ಶಿವಯೋಗಿ ಗಳವರನ್ನು ನಾವು ಸದಾ ಸ್ಮರಿಸಬೇಕು. ಸಮಾಜ ಧರ್ಮದ ಹಾದಿಯಲ್ಲಿ ನಡೆದಾಗ ಮಾತ್ರ ಸಂಸ್ಕಾರ ಯುತವಾಗಿರಲು ಸಾಧ್ಯ ಎಂದು ಪ್ರತಿಪಾದಿಸಿದರು.



## ನಂದಿಗುಡಿ ಮಠದಲ್ಲಿ ಮಾಜಿ ಶಾಸಕ ಶಿವಶಂಕರ್ ಆಶಯ

ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ನೊಳಂಬ ಸಮಾಜ ಸಣ್ಣ ಸಮಾಜವಾಗಿದ್ದರೂ ಚುನಾವಣೆಗಳಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ. ಹಾಗಾಗಿ ಈ ಸಮಾಜದ ಬಗ್ಗೆ ರಾಜಕಾರಣಿಗಳಿಗೆ ನಿಗಾ ಇದೆ. ಆದರೆ ನಮ್ಮಲ್ಲಿನ ಒಗ್ಗಟ್ಟಿನ ಕೊರತೆ ಯಿಂದಾಗಿ ಅಭಿವೃದ್ಧಿಯಲ್ಲಿ ಹಿಂದೆ ಉಳಿದಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಸಮಾಜದಲ್ಲಿ ಒಬ್ಬ ಮುಂದೆ ಹೋಗುತ್ತಾನೆಂದರೆ ಕಾಲು ಹಿಡಿದು ಎಳೆಯುವವರೇ ಹೆಚ್ಚು ಎಂದ ಶ್ರೀಗಳು, ನಾವು ಯಾವಾಗಲೂ ರೂಂ ಬಾಗಿಲು ಹಾಕಿರುತ್ತೇವೆ. ಯಾರನ್ನೂ ಮಾತನಾಡಿಸುವುದಿಲ್ಲ ಎಂದು ಕೆಲವರು ನಮ್ಮ ಮೇಲೆ ವಿನಾಕರಣ ಸುಳ್ಳು ಆರೋಪ ಮಾಡುತ್ತಾ ಬಂದಿದ್ದಾರೆ. ನಾವು ಇಲ್ಲಿಗೆ ಬಂದು 16 ವರ್ಷಗಳಾದರೂ ಇನ್ನೂ ಸಮಸ್ಯೆಗಳ ಸುಳ್ಳಿಯಲ್ಲಿದ್ದೇವೆ. ನಮ್ಮನ್ನು ತಿದ್ದುವ ಶಕ್ತಿ ನಮ್ಮಲ್ಲಿ ಉಳಿದಿಲ್ಲ. ನಾವು ಬಹಳ ಸೋತು ಹೋಗಿದ್ದೇವೆ. ಮಠಕ್ಕೆ ಕಾಣಿಕೆ ಕೊಡುವವರಿಗಿಂತ ಲೆಕ್ಕ ಕೇಳುವವರೇ ಹೆಚ್ಚಾಗಿದ್ದಾರೆ. ಹೀಗಾದರೆ ನಾವು ಹೇಗೆ ತಾನೇ ಮಠ ಹಾಗೂ ಸಮಾಜ ಮುನ್ನಡೆಸಲು ಸಾಧ್ಯ ಎಂದು ಶ್ರೀಗಳು ನೊಂದು ಹೇಳಿದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಶಿವಮೊಗ್ಗದ ನಂದಿ ವಿದ್ಯಾಸಂಸ್ಥೆ ಅಧ್ಯಕ್ಷ ಬಿ.ವಿ.ಶಂಕ್ರಪ್ಪ, ಸಹಕಾರಿ ಧುರೀಣ ಶಿಕಾರಿಪುರದ ಭೂಕಾಂತ್, ಉದ್ಯಮಿ ಕಾಗಿನೆಲೆ ಪರಮೇಶ್ವರಪ್ಪ, ವೈದ್ಯ ಜಿಗಳಿ ಡಾ. ಎನ್.ನಾಗರಾಜ್ ಮಾತನಾಡಿದರು.

> **ಖಾವಿ ಹಾಕಿದ ಮೇಲೆ ಸಮಸ್ಯೆ ಎದುರಿಸುವ ಶಕ್ತಿಯನ್ನು ಬೆಳೆಸಿಕೊಂಡಿದ್ದೇವೆ. ನೀವು ಬೇಕೆಂದರೆ ಇಲ್ಲಿರುತ್ತೇವೆ, ಬೇಡ ಎಂದರೆ ಹೋಗುತ್ತೇವೆ ಎಂದ ಶ್ರೀಗಳು, ನೀವು ಈಗಲಾದರೂ ಈ ಹಿಂದಿನ ವೈಮನಸ್ಸು ಬಿಟ್ಟು ಮಠದ ಅಭಿವೃದ್ಧಿಗೆ ಕೈ ಜೋಡಿಸಲು ಭಕ್ತರಿಗೆ ಶ್ರೀಗಳ ಮನವಿ**

ಮಲೇಬೆನ್ನೂರಿನ ನಂದಿ ಸೌಹಾರ್ದ ಸಹಕಾರಿ ಅಧ್ಯಕ್ಷ ಜಿಗಳಿಯ ಗೌಡ್ರ ಬಸವರಾಜಪ್ಪ, ಮುಖಂಡರಾದ ಹಿಂಡಸಘಟ್ಟೆ ಮುರುಗೇಶ್, ಮೂಗಿನಗೊಂದಿ ಲೋಕೇಶ್ವರಪ್ಪ, ಪಿ.ಮಹಾಲಿಂಗಪ್ಪ, ವಾಸನ ಭೋಜರಾಜ್, ಎಸ್.ಎ.ಹುಡೇದ್, ನಂದಿತಾವರೆಯ ಎನ್.ಪಿ. ಬಸವಲಿಂಗಪ್ಪ, ಮುರುಗೇಂದ್ರಯ್ಯ, ರಾಜು, ಗೋವಿನಹಾಳ್ ರಾಜಣ್ಣ, ಉಕ್ಕಡಗಾತ್ರಿ ಸುರೇಶ್, ಕೆ.ಪಿ.ಆಂಜನೇಯ ಪಾಟೀಲ್, ನಿವೃತ್ತ ಪ್ರಾಚಾರ್ಯ ಹಿಂಡಸಘಟ್ಟೆ ಸಿದ್ದನಗೌಡ, ಹಳ್ಳಿಹಾಳ್ ಶಾಂತನಗೌಡ್ರು, ಕೆ.ಎನ್.ಹಳ್ಳಿ ಬಸವನಗೌಡ, ರುದ್ರಗೌಡ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಕಲಾವಿದರಾದ ಉಕ್ಕಡಗಾತ್ರಿ ಅಜಯ್ ಗೌಡ, ಮಹಾಂತೇಶ್, ಗದಿಗೆಯ್ಯ ಸಂಗಡಿಗರು ಭಕ್ತಿಗೀತೆ ಹಾಡಿದರು.

# ಮಹಾಕುಂಭ ಮೇಳಕ್ಕೆ 13 ಸಾವಿರ ರೈಲುಗಳು

(1ನೇ ಪುಟದಿಂದ) ಪ್ರಯಾಗ್‌ರಾಜ್‌ಗೆ ಆಗಮಿಸಿದ ಕೇಂದ್ರ ಸಚಿವರು, ಈ ಮಹಾ ಮೇಳದ ಹಿನ್ನೆಲೆಯಲ್ಲಿ ರೈಲ್ವೆಯ ಸಿದ್ಧತೆಗಳನ್ನು ಪರಿಶೀಲಿಸಿದರು, ಮೇಳದ ಸಮಯದಲ್ಲಿ ಸುಮಾರು 1.5 ರಿಂದ 2 ಕೋಟಿ ಪ್ರಯಾಣಿಕರು ರೈಲಿನಲ್ಲಿ ನಗರವನ್ನು ತಲುಪುವ ನಿರೀಕ್ಷೆಯಿದೆ.

ಮಹಾ ಕುಂಭ ಮೇಳವು ಬರುವ ಜನವರಿ 13 ರಂದು ಪೌಷ್ ಪೂರ್ಣಿಮೆಯ ಸಂದರ್ಭದಲ್ಲಿ ಪ್ರಾರಂಭವಾಗಿ ಫೆಬ್ರವರಿ 26 ರಂದು ಮಹಾಶಿವರಾತ್ರಿಯಂದು ಮುಕ್ತಾಯಗೊಳ್ಳುತ್ತದೆ.

ಪ್ರಯಾಗ್‌ರಾಜ್‌ನಲ್ಲಿ ಈಶಾನ್ಯ ರೈಲ್ವೆ, ಉತ್ತರ ರೈಲ್ವೆ ಮತ್ತು ಉತ್ತರ-ಮಧ್ಯ ರೈಲ್ವೆ ವ್ಯಾಪ್ತಿಯ ಹಲವಾರು ನಿಲ್ದಾಣಗಳನ್ನು ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, 'ಗಂಗೆಯ ಮೇಲೆ ನಿರ್ಮಿಸಲಾದ ಹೊಸ ಸೇತುವೆಯನ್ನು ನಾನು ಪರಿಶೀಲಿಸಿದ್ದೇನೆ, ಇದನ್ನು ಶೀಘ್ರದಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ. ಹೊಸ ಸೇತುವೆ 100 ವರ್ಷಗಳ ನಂತರ ಇಲ್ಲಿ ಗಂಗೆಯ ಮೇಲೆ ನಿರ್ಮಿಸಲಾಗಿದೆ ಎಂದು ಹೇಳಿದರು.

# ದೆಹಲಿಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ

(1ನೇ ಪುಟದಿಂದ) ಇರುತ್ತಿದ್ದರೆ ಪರಿಸ್ಥಿತಿ ಭಿನ್ನವಾಗಿರುತ್ತಿತ್ತು ಎಂದು ಹೇಳಿದರು. ದೆಹಲಿ ಪೊಲೀಸ್ ನಮ್ಮ ನಿಯಂತ್ರಣ ದಲ್ಲಿಲ್ಲ. ಇಲ್ಲವಾದಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಪರಿಸ್ಥಿತಿ ಇಷ್ಟೊಂದು ಹದಗೆಡುತ್ತಿರಲಿಲ್ಲ. ಶಾಲೆ, ಆಸ್ಪತ್ರೆ, ನೀರು ಹಾಗೂ ವಿದ್ಯುತ್ ಸಮಸ್ಯೆ ಬಗೆಹರಿಸಿದಂತೆ ಕಾನೂನು ಸುವ್ಯವಸ್ಥೆಯ ಸಮಸ್ಯೆಯನ್ನು ಬಗೆಹರಿಸುತ್ತಿದ್ದೆ ಎಂದು ಅವರು ಹೇಳಿದರು.

# ಉಕ್ಕಡಗಾತ್ರಿಯಲ್ಲಿ ತುಂಗಭದ್ರಾ ನದಿಗೆ ಸಂಭ್ರಮದ ಮಹಾಮಂಗಳಾರತಿ



ಮಲೇಬೆನ್ನೂರು, ಡಿ.8- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಭಾನುವಾರ ಸಂಜೆ ತುಂಗಭದ್ರಾ ನದಿಗೆ ಮಹಾಮಂಗಳಾರತಿ ಪೂಜೆಯನ್ನು 2ನೇ ಬಾರಿಗೆ ಸಂಭ್ರಮದಿಂದ ಮಾಡಲಾಯಿತು.

ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಮತ್ತು ಪುಣ್ಯಕೋಟಿ ಮಠದ ಬಾಲಯೋಗಿ ಶ್ರೀ ಜಗದೀಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಪವಾಡ ಪುರುಷ ಶ್ರೀಗುರು ಕರಿಬಸವೇಶ್ವರ ಅಜ್ಜಯ್ಯನ ಉತ್ಸವ ಮೂರ್ತಿಯನ್ನು ಮೆರವಣಿಗೆ ಮೂಲಕ ತಂದು ನದಿ ದಡದಲ್ಲಿ ನಿರ್ಮಿಸಿದ್ದ ಹೂವಿನಮಂಟಪದಲ್ಲಿ ಪ್ರತಿಷ್ಠಾಪಿಸಿದ ನಂತರ ತುಂಗ ಮತ್ತು ಭದ್ರಾ ಮೂರ್ತಿಗಳಿಗೆ ಪೂಜೆ ಸಲ್ಲಿಸಿ, ತುಂಗಭದ್ರಾ ನದಿಗೆ ಮಹಾಮಂಗಳಾರತಿ ಪೂಜೆ ನೆರವೇರಿಸಲಾಯಿತು.

ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಸ್. ಸುರೇಶ್, ಸದಸ್ಯರಾದ ಜಿಗಳಿ ಇಂದೂಧರ್ ಪ್ರಕಾಶ್ ಕೊಟೇರ್, ಬಸವನಗೌಡ್ರು, ಗದಿಗೆಯ್ಯ ಪಾಟೀಲ್, ಮುಖಂಡರಾದ ಹಳ್ಳಿಹಾಳ್ ವೀರನಗೌಡ, ಹುಲ್ಲತ್ತಿ ರುದ್ರಗೌಡ, ಜಿಗಳೇರ ಹಾಲೇಶಪ್ಪ, ವಕೀಲ ನಂದಿತಾವರೆ ತಿಮ್ಮನಗೌಡ ಮತ್ತಿತರರು ಈ ವೇಳೆ ಹಾಜರಿದ್ದರು.

**ಬೆಳ್ಳಿ ರಥೋತ್ಸವ :** ಉಕ್ಕಡಗಾತ್ರಿಯಲ್ಲಿ ನಾಳೆ ಸೋಮವಾರ ಬೆಳಿಗ್ಗೆ 10 ಗಂಟೆಗೆ ರಾಜ್ಯಮಟ್ಟದ ಭಜನಾ ಸ್ಪರ್ಧೆಯನ್ನು ಏರ್ಪಡಿಸಿದ್ದು, 11 ಗಂಟೆಗೆ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಬೆಳ್ಳಿ ರಥೋತ್ಸವ ಜರುಗಲಿದೆ.

ರಾತ್ರಿ 8 ಗಂಟೆಗೆ ಅಜ್ಜಯ್ಯನ ಗದ್ದುಗೆಗೆ ಮಹಾಪೂಜೆ, ಮಹಾಮಂಗಳಾರತಿ ನಂತರ ಅಜ್ಜಯ್ಯನ ಉತ್ಸವ ಮೂರ್ತಿಯ ಪಾಲಿಕೋತ್ಸವ ಮತ್ತು ಕಾರ್ತಿಕೋತ್ಸವ ವಿವಿಧ ವಾದ್ಯಗಳೊಂದಿಗೆ ನಡೆಯಲಿದೆ.

# ಉದ್ಯಾನವನವನ್ನು ಉಳಿಸುವಲ್ಲಿ ಯಶಸ್ವಿಯಾದ ಗ್ರಾಮಸ್ಥರು

(1ನೇ ಪುಟದಿಂದ) ಗೋಡೌನ್ ಶಿಥಲಾವಸ್ಥೆ ಯಲ್ಲಿದ್ದು, ಇದನ್ನು ನೆಲಸಮ ಮಾಡಿ ಬೃಹತ್ತಾದ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಬೇಕೆನ್ನುವ ಸದುದ್ದೇಶದಿಂದ ಈ ಗೋಡೌನ್‌ಗೆ ಹತ್ತಿರವಿರುವ ಡೋರ್ ನಂಬರ್ 292 ರಿಂದ 321 ಸಾರ್ವಜನಿಕರಿಗೆ ಮೀಸಲಾದ ಉದ್ಯಾನವನ ಇದ್ದು, ಈ ಉದ್ಯಾನವನದ ಜಾಗವೇ ಡೋರ್ ನಂಬರ್ 103 ತನಗೆ ಸಂಬಂಧಿಸಿದ್ದು ಎಂದು ಸಹಕಾರ ಸಂಘವು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿತು. ಸೃಷ್ಟಿ ಮಾಡಿದ ದಾಖಲೆಗಳನ್ನು ಪಾಲಿಕೆಗೆ ಸಲ್ಲಿಸಿ, ಇ-ಸ್ವತ್ತು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಲ್ಲದೇ, ಇದರ ಆಧಾರದ ಮೇಲೆ ಬೆಂಗಳೂರಿನ ಸಹಕಾರ ಇಲಾಖೆಯಿಂದ ಆಡಳಿತಾತ್ಮಕ ಅನುಮೋದನೆ ಮೂಲಕ ನಬಾರ್ಡ್‌ನಿಂದ ಹಣವನ್ನು ಮಂಜೂರು ಮಾಡಿಸಿಕೊಳ್ಳುವಲ್ಲಿಯೂ ಯಶಸ್ವಿಯಾಗಿತ್ತು. ತಡಮಾಡದ ಸಹಕಾರ ಸಂಘವು ರಾತ್ರೋ-ರಾತ್ರಿ ಉದ್ಯಾನವನವನ್ನು ಒಡೆದು ಹಾಕಿದ್ದಲ್ಲದೇ ನಗರಪಾಲಿಕೆಯಿಂದ ಅನುಮತಿಯನ್ನೂ ಪಡೆಯದೆ ವಾಣಿಜ್ಯ ಮಳಿಗೆ ನಿರ್ಮಾಣಕ್ಕೆ ಕಾಮಗಾರಿಯನ್ನು ಆರಂಭಿಸಿತ್ತು.

ಈ ಎಲ್ಲಾ ವಿಷಯ ತಿಳಿದ ಗ್ರಾಮಸ್ಥರು ನೀಡಿದ ದೂರಿನ ಮೇರೆಗೆ ಸ್ಥಳ ಪರಿಶೀಲನೆ ಮಾಡಿದ ಮಹಾನಗರ ಪಾಲಿಕೆ ಆಯುಕ್ತರು, ತಾವು ನೀಡಿದ ಇ-ಸ್ವತ್ತನ್ನು ಅನೂರ್ಜಿತಗೊಳಿಸಿದ್ದಲ್ಲದೇ, ಕಾಮಗಾರಿಯನ್ನು ತಕ್ಷಣ ನಿಲ್ಲಿಸುವಂತೆ ಸಹಕಾರ ಸಂಘಕ್ಕೆ ಆದೇಶಿಸಿದ್ದರು.

ಆಯುಕ್ತರ ಕ್ರಮ ಕೈಗೊಂಡ ನಂತರವೂ ಮಳಿಗೆ ನಿರ್ಮಾಣದ ಕಾಮಗಾರಿಯನ್ನು ಮುಂದುವರಿಸಿದ್ದನ್ನು ಖಂಡಿಸಿ ಗ್ರಾಮಸ್ಥರು ಮತ್ತೆ ಆಯುಕ್ತರನ್ನು ಭೇಟಿ ಮಾಡಿ ಲಿಖಿತವಾಗಿ ಮನವಿ ಸಲ್ಲಿಸಿದ್ದಲ್ಲದೇ, ಜಿಲ್ಲಾಧಿಕಾರಿಗಳನ್ನೂ ಭೇಟಿ ಮಾಡಿ ಸೂಕ್ತ ಕ್ರಮಕ್ಕೆ ಆಗ್ರಹಿಸಿದ್ದರು.


ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು, ಖುದ್ದು ತಾವೇ ಸ್ಥಳ ಪರಿಶೀಲನೆ ನಡೆಸಿ, ಉದ್ಯಾನವನಕ್ಕೆ ಸಂಬಂಧಿಸಿದ ಮೂಲ ಡೋರ್ ನಂಬರ್‌ಗೆ ಇ-ಸ್ವತ್ತು ಮಾಡುವಂತೆ ನೀಡಿದ ನಿರ್ದೇಶನದ ಮೇರೆಗೆ ಆಯುಕ್ತರು ಸೂಕ್ತ ಕ್ರಮ ಕೈಗೊಂಡಿದ್ದಾರೆ.

**ಶಿಕ್ಷೆಗೆ ಆಗ್ರಹ :** ಸಾರ್ವಜನಿಕರಿಗೆ ಮೀಸಲಾದ ಉದ್ಯಾನವನಕ್ಕೆ ಸಂಬಂಧಿಸಿದಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡುವುದರೊಂದಿಗೆ ವಂಚಿಸಿದ ಆರೋಪದಲ್ಲಿ ಆವರಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕು. ಉದ್ಯಾನವನವನ್ನು ಧ್ವಂಸಗೊಳಿಸುವುದರೊಂದಿಗೆ ಸರ್ಕಾರದ ಹಣವನ್ನು ನಷ್ಟ ಮಾಡಿದ ಆರೋಪದಲ್ಲಿ ಅವರಿಂದ ಅಷ್ಟೂ ಹಣವನ್ನು ವಸೂಲಿ ಮಾಡಬೇಕು. ಪಾಲಿಕೆಯ ಅನುಮತಿಯನ್ನು ಪಡೆಯದೇ, ವಾಣಿಜ್ಯ ಮಳಿಗೆಗಳ ನಿರ್ಮಾಣಕ್ಕೆ ಮುಂದಾದ ಆರೋಪದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಗ್ರಾಮದ ಹಿರಿಯ ಮುಖಂಡರೂ ಆಗಿರುವ ನ್ಯಾಯವಾದಿ ಆರ್. ಪರಮೇಶ್ ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

## ನಗರದ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಕಾರ್ತಿಕ

ವಿನೋಬನಗರ 1 ನೇ ಮುಖ್ಯರಸ್ತೆ, 2 ನೇ ಕ್ರಾಸ್‌ನಲ್ಲಿರುವ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 6 ಗಂಟೆಯಿಂದ ರುದ್ರಾಭಿಷೇಕ ಮತ್ತು ಪಂಚಾಮೃತ ಅಭಿಷೇಕ ಕಾರ್ಯಕ್ರಮ ಮತ್ತು ಸಂಜೆ 6 ಗಂಟೆಗೆ ಕಾರ್ತಿಕೋತ್ಸವ ಜರುಗಲಿದೆ.

## ಗುರು ಕರಿಬಸವೇಶ್ವರ ಕಾರ್ತಿಕ



ದಾವಣಗೆರೆ : ಲೇಬರ್ ಕಾಲೋನಿ 6ನೇ ಕ್ರಾಸ್‌ನಲ್ಲಿನ ಶ್ರೀ ಗುರು ಕರಿಬಸವೇಶ್ವರ ದೇವಸ್ಥಾನದಲ್ಲಿ ಇಂದು ಸಂಜೆ 6.30ಕ್ಕೆ ಸ್ವಾಮಿಯ ಕಾರ್ತಿಕ ದೀಪೋತ್ಸವ ನಡೆಯಲಿದೆ.

# ಕನ್ನಡ ಭಾಷೆಗೆ ಶಕ್ತಿ ತುಂಬಿದ ಸಾಹಿತ್ಯ, ಸಂಗೀತ, ಲಲಿತ ಕಲೆ

(1ನೇ ಪುಟದಿಂದ) ವಹಿಸಿವೆ. ಕನ್ನಡಕ್ಕೆ ಗಟ್ಟಿತನ ತಂದ ಕನ್ನಡದ ರಸಋಷಿಗಳೆಂದರೆ ಪಂ.ಪುಟ್ಟರಾಜ ಕವಿ ಗವಾಯಿ ಮತ್ತು ಪಂಚಾಕ್ಷರಿ ಗವಾಯಿಗಳು. ಈ ಇಬ್ಬರು ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆ ಅನನ್ಯವಾದುದು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಡಿವೈಎಸ್ಪಿ ರುದ್ರೇಶ್ ಉಜ್ಜಿನಿಕೊಪ್ಪ ಮಾತನಾಡಿ, ಅರಮನೆಯಲ್ಲಿದ್ದ ಸಂಗೀತವನ್ನು ಸಾರ್ವಜನಿಕ ಪಡಸಾಲೆಗೆ ತಂದವರು ಪಂಚಾಕ್ಷರಿ ಗವಾಯಿ ಮತ್ತು ಪುಟ್ಟರಾಜ ಕವಿ ಗವಾಯಿಗಳು. ಅವರಿಂದ ಸಂಗೀತ ಕಲಿತ ಶಿಷ್ಯಂದಿರು ದೇಶ- ವಿದೇಶಗಳಲ್ಲಿ ತಮ್ಮ ಕಲಾ ಸೇವೆಯನ್ನು ಮಾಡುತ್ತಿದ್ದಾರೆ. ಇಂದಿನ ತಾಂತ್ರಿಕ ಯುಗದಲ್ಲಿ ನಾವುಗಳೆಲ್ಲರೂ ಸಂಗೀತ, ಸಾಹಿತ್ಯ, ಕಲೆ, ಸಂಸ್ಕೃತಿಯನ್ನು ಮರೆಯುತ್ತಿದ್ದೇವೆ ಎಂಬ ಆತಂಕ ವ್ಯಕ್ತಪಡಿಸಿದರು.

ಮಕ್ಕಳಿಗೆ ಓದಿನ ಜೊತೆಗೆ ಸಂಗೀತವನ್ನು ಕಲಿಸುವ ಅಗತ್ಯವಿದೆ. ಸಂಗೀತ, ಸಾಹಿತ್ಯ, ಕಲೆ, ಸಂಸ್ಕೃತಿ ಉಳಿಸುವಂತಹ ಕಾರ್ಯಕ್ರಮಗಳಿಗೆ ಸಹಕಾರ ನೀಡಬೇಕಾದ ಅವಶ್ಯವಿದೆ ಎಂದರು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತನಾಡಿ, ಸಂಗೀತ ಮನಸ್ಸಿಗೆ ಮುದ ನೀಡುತ್ತದೆ. ಒತ್ತಡದ ಬದುಕಿಗೆ ಶಾಂತಿ, ನೆಮ್ಮದಿಯನ್ನು ತಂದು ಕೊಡುತ್ತದೆ. ಸಂಗೀತ ಹಾಡುವುದು ಎಷ್ಟು ಮುಖ್ಯವೋ ಅದಕ್ಕಿಂತ ಸಹೃದಯ ಕೇಳುಗರ ಮನಸ್ಸು ಮುಖ್ಯ ಎಂದು ಹೇಳಿದರು.

ಸಂಗೀತ ಔಷಧಿ ಇದ್ದಂತೆ. ಸಂಗೀತ ಕಲಿತ ಮಕ್ಕಳು ಯಾರೂ ಕೂಡ ಸಮಾಜಕ್ಕೆ ಕಂಟಕವಾಗುವುದಿಲ್ಲ. ಸಂಗೀತ ಕೇವಲ ಮನುಷ್ಯರಿಗಷ್ಟೇ ಅಲ್ಲದೇ ಪಶು, ಪಕ್ಷಿ, ಪ್ರಾಣಿಗಳು, ಗಿಡ-ಮರಗಳಿಗೂ ಅವಶ್ಯ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ರಂಗಕರ್ಮಿ ಬಾ.ಮ. ಬಸವರಾಜಯ್ಯ, ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯ ಸಂಪನ್ನ ವಿ. ಮುತಾಲಿಕ್, ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಜಾಲಿಮರದ ಕರಿಬಸಪ್ಪ, ಸಹಾಯಕ ಪ್ರಾಧ್ಯಾಪಕ ಡಿ. ಆರ್.ನಟರಾಜ್ ಹಿರೇಮಳಲಿ, ಕಲಾವಿದರಾದ ಭೀಮಾಶಂಕರ್ ಬಿದನೂರು, ಶಿವಬಸಯ್ಯ ಚರಂತಿಮಠ, ವೆಂಕಟೇಶ್ ಹಾಲಕೊಡು, ಆರೋಹಿ ಸಂಗೀತ ಕಲಾ ಶಾಲೆ ಅಧ್ಯಕ್ಷ ಆನಂದ ಆರ್.ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

ಇದೇ ವೇಳೆ ಶಿವಬಸಯ್ಯಸ್ವಾಮಿ, ಅಮರಯ್ಯಸ್ವಾಮಿ, ಚನ್ನವೀರಸ್ವಾಮಿ, ಅಕ್ಕಮ್ಮ ಹಿರೇಮಠ ಮತ್ತಿತರರನ್ನು ಗೌರವಿಸಲಾಯಿತು.

# ನೊಳಂಬ ವೀರಶೈವ ಸಮಾಜ ಸ್ವಾಭಿಮಾನದ ಸಂಕೇತ

(1ನೇ ಪುಟದಿಂದ) ನಮ್ಮ ಸಮಾಜದವರು ಸ್ವತಂತ್ರ ಜೀವಿಗಳಾಗಿದ್ದು, ಯಾರ ಹಂಗಿನಲ್ಲೂ ನಾವಿಲ್ಲ. ನಮ್ಮ ಜನ ರೈತಾಪಿಗಳಾಗಿದ್ದು, ಸ್ವಾಭಿಮಾನದ ಸಂಕೇತವಾಗಿದ್ದಾರೆ.

ನಿಮ್ಮ ತಂದೆ ಯಡಿಯೂರಪ್ಪ ಅವರು ಸಿಎಂ ಆಗಿದ್ದಾಗ ನಮ್ಮ ಮಠಕ್ಕೆ ಒಂದು ನಯಾಪೈಸೆ ಅನುದಾನ ಕೊಟ್ಟಿಲ್ಲ. ಆ ಬಗ್ಗೆ ನಮಗೆ ಬೇಸರವೂ ಇಲ್ಲ ಎಂದ ಸ್ವಾಮೀಜಿ ಅವರು, ನೀವು ಕೊಟ್ಟ ಸಮಯಕ್ಕಿಂತ ಬಹಳ ತಡವಾಗಿ ಬಂದಿರುವುದಕ್ಕೆ ಭಕ್ತರು, ಅಭಿಮಾನಿಗಳು ಬೇಸರಗೊಂಡಿದ್ದಾರೆ. ಕಾಯುವುದು ಮತ್ತು ಕಾಯುಸುವುದು ಎಷ್ಟು ಸರಿ ಎಂಬುದನ್ನು ನೀವೇ ಅರ್ಥಮಾಡಿಕೊಳ್ಳಬೇಕು. ನೀವು ಕೂಡ ಮುಂದೊಂದು ದಿನ ಈ ರಾಜ್ಯ ದ ಚುಕ್ಕಾಣಿ ಹಿಡಿಯಲಿದ್ದು, ಈ ಸಮಾಜವನ್ನು ಮರೆಯ ಬೇಡಿ. ಈ ಸಮಾಜ ರಾಜ್ಯದ 5-6 ಜಿಲ್ಲೆಗಳಲ್ಲಿ ಹರಿದು ಹಂಚಿ ಹೋಗಿದ್ದು, ಬೇರೆಯವರ ಹಿತ ಬಯಸುತ್ತಾ ಬಂದಿದೆ. ಅಷ್ಟೇ ಅಲ್ಲ ಬೇರೆಯವರು ಅಧಿಕಾರ ಹಿಡಿಯಲು ಈ ಸಮಾಜ ಶಕ್ತಿ ತುಂಬಿದೆ ಎಂದು ಸ್ವಾಮೀಜಿ ಹೇಳಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ನಂದಿಗುಡಿ ಮಠ ಮತ್ತು ನೊಳಂಬ ಸಮಾಜ ಶಕ್ತಿ ಕೇಂದ್ರವಾಗಿದ್ದು, ಅನೇಕರಿಗೆ ಅಧಿಕಾರ ಸಿಗಲು ಸಹಕಾರಿಯಾಗಿದೆ ಎಂದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮಾಡಾಳು ಮಲ್ಲಿಕಾರ್ಜುನ್, ಲೋಕಿಕೆರೆ ನಾಗರಾಜ್, ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ ನಾಗಪ್ಪ, ಶಿಕಾರಿಪುರದ ಬಿ.ಡಿ. ಭೂಕಾಂತ್, ಎಸ್.ಎ. ಹುಡೇದ್, ಅಭಿ ಪಾಟೀಲ್, ಜಿಗಳಿಯ ಡಾ. ನಾಗರಾಜ್, ಪಿ.ಮಹಾಲಿಂಗಪ್ಪ, ಡಿ.ಜಿ. ಕೆಂಚವೀರಯ್ಯ, ಚಂದ್ರೇಗೌಡ ಮತ್ತಿತರರಿದ್ದರು.

## ಶ್ರೀಗಳ ಕ್ಷಮೆ ಕೇಳಿದ ವಿಜಯೇಂದ್ರ

ನಂದಿಗುಡಿ ಮಠದ ಕಾರ್ಯಕ್ರಮಕ್ಕೆ 2 ಗಂಟೆಗೆ ಬರುವುದಾಗಿ ಹೇಳಿದ್ದೆ, ಆದರೆ ಶಿಕಾರಿಪುರದಲ್ಲಿ ಕೊಪ್ಪಳ ಶ್ರೀಗಳ ಕಾರ್ಯಕ್ರಮ ಇದ್ದ ಕಾರಣ ಅದನ್ನು ಮುಗಿಸಿಕೊಂಡು ಬರುವ ಮಾರ್ಗ ಮಧ್ಯೆ ಅಲ್ಲಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಸ್ವಾಗತ, ಬೈಕ್ ರ್‍ಯಾಲಿ ಮಾಡಿದ್ದರಿಂದ ತಡವಾಗಿ ಬಂದಿದ್ದೇನೆ ಎಂದು ವಿಜಯೇಂದ್ರ ಅವರು ಶ್ರೀಗಳಲ್ಲಿ ಮತ್ತು ಭಕ್ತರಲ್ಲಿ ಕ್ಷಮೆ ಕೇಳಿದರು. 2-3 ತಾಸು ತಡವಾಗಿ ಬಂದಿದ್ದರೂ ನನ್ನ ಹಾಗೂ ಯಡಿಯೂರಪ್ಪ ಅವರ ಮೇಲಿನ ಅಭಿಮಾನಕ್ಕಾಗಿ ನೀವು ತಾಳ್ಮೆಯಿಂದ ಕಾದು ಕುಳಿತಿರುವುದಕ್ಕೆ ನಾವು ಸದಾ ಆಭಾರಿಯಾಗಿದ್ದೇನೆಂದು ವಿಜಯೇಂದ್ರ ಅವರು ಭಾವನಾತ್ಮಕವಾಗಿ ಮಾತನಾಡಿ, ಅಭಿಮಾನಿಗಳನ್ನು ಸಮಾಧಾನಪಡಿಸಿದರು. ಸಮಯ ಪರಿಪಾಲನೆ ನಮ್ಮ ಆದ್ಯ ಕರ್ತವ್ಯವಾಗಿದ್ದು, ಇನ್ನೆಂದೂ ಈ ರೀತಿ ಆಗದಂತೆ ನಡೆದುಕೊಳ್ಳುತ್ತೇನೆಂದು ವಿಜಯೇಂದ್ರ ಶ್ರೀಗಳಿಗೆ ಮಾತುಕೊಟ್ಟರು.

# ಸಿರಿಯಾ ರಾಜಧಾನಿ ಬಂಡುಕೋರರ ವಶ

## ಸಿರಿಯಾ ಅಧ್ಯಕ್ಷ ಬಶರ್ ಪಲಾಯನ, ಜಾಗತಿಕ ಮಟ್ಟದಲ್ಲಿ ಸಂಚಲನ





ಸಿರಿಯಾ, ಡಿ.8- ಸಿರಿಯಾದ ಬಂಡುಕೋರರ ಪಡೆಗಳು ಸರ್ಕಾರದ ವಿರುದ್ಧ ದೊಡ್ಡ ಸಮರ ಸಾರಿದ್ದು, ಅಂತಿಮವಾಗಿ ಬಂಡುಕೋರರು ಸಿರಿಯಾದ ರಾಜಧಾನಿ ಡಮಾಸ್ಕಸ್ ಅನ್ನು ಇಂದು ತಮ್ಮ ಸ್ವಾಧೀನಕ್ಕೆ ಪಡೆದುಕೊಂಡಿದ್ದಾರೆ.

ಈ ಎಲ್ಲಾ ಬೆಳವಣಿಗೆಗೂ ಮುನ್ನವೇ ಸಿ ರಿಯಾ ಅಧ್ಯಕ್ಷ ಬಶರ್ ಅಲ್-ಅಸ್ಸಾದ್ ದೇಶದಿಂದ ಪ ಲಾ ಯನ ಮಾಡಿರುವುದು ಸದ್ಯ ಜಾಗತಿಕ ಮಟ್ಟದಲ್ಲಿ ಸಂಚಲನ ಮೂಡಿಸಿದೆ.

ವಿಮಾನದಲ್ಲಿ ದೇಶದಿಂದ ಪಲಾಯನ ಮಾಡಿರುವುದು ಖಚಿತವಾಗಿದ್ದೇ ಆದರೂ ಎಲ್ಲಿಗೆ ತೆರಳಿದ್ದಾರೆ? ಎಂಬುದರ ಬಗ್ಗೆ ಯಾವುದೇ ಖಚಿತ ಮಾಹಿತಿ ಇಲ್ಲಿಯವರೆಗೂ ಲಭಿಸಿಲ್ಲ.

ಕಳೆದ 24 ವರ್ಷಗಳ ಕಾಲ ದೇಶವನ್ನು ಆಳಿದ್ದ ಅಸ್ಸಾದ್, ಅಜ್ಞಾತ ಸ್ಥಳಕ್ಕೆ ವಿಮಾನದ ಮೂಲಕ ತೆರಳಿದ್ದಾರೆ ಎಂದು ಸಿರಿಯಾ ಮಿಲಿಟರಿಯ ಹಿರಿಯ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಅಸ್ಸಾದ್ ಪಲಾಯನ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿರುವ ರಷ್ಯಾ, ಸುಮಾರು 14 ವರ್ಷಗಳ ಅಂತರ್ಯುದ್ಧದ ನಂತರ ಬಂಡು ಕೋರರಿಂದ ಉರುಳಿಸಲ್ಪಟ್ಟ ಸಿರಿಯಾದ ಅಧ್ಯಕ್ಷ ಬಶರ್ ಅಲ್-ಅಸ್ಸಾದ್, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಅಜ್ಞಾತ ಸ್ಥಳಕ್ಕೆ ತೆರಳಿದ್ದಾರೆ ಎಂದು ರಷ್ಯಾ ಹೇಳಿದೆ.

ಬಶರ್ ಅಲ್-ಅಸ್ಸಾದ್ ರಾಜೀ ನಾಮೆ ನೀಡುವ ಮೊದಲು ಸಂಘರ್ಷದಲ್ಲಿ ಭಾಗವಹಿಸಿದ ಅನೇಕರೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದು ರಷ್ಯಾದ ವಿದೇಶಾಂಗ ಸಚಿವಾಲಯ ತಿಳಿಸಿದೆ. ಶಾಂತಿಯುತ ಅಧಿಕಾರ ಹಸ್ತಾಂತರದ ಬಗ್ಗೆ ಆಡಳಿತಕ್ಕೆ ಸೂಚನೆ ನೀಡಿದ ಬೆನ್ನಲ್ಲೇ ಅವರು ದೇಶವನ್ನು ತೊರೆದಿದ್ದಾರೆ. ಈ ಚರ್ಚೆಯಲ್ಲಿ ಮಾಸ್ಕೋ ಭಾಗವಹಿಸಲಿಲ್ಲ ಎಂದು ರಷ್ಯಾ ಉಲ್ಲೇಖಿಸಿದೆ.

**ಹೊಸ ಯುಗದ ಆರಂಭ:** ಇನ್ನು ನಿರಂಕುಶಾಧಿಕಾರಿ ಬಶರ್ ಅಲ್-ಅಸ್ಸಾದ್ ದೇಶದಿಂದಲೇ ಪಲಾಯನ ಮಾಡಿದ್ದಾನೆ. ನಾವು ರಾಜಧಾನಿ ಡಮಾಸ್ಕಸ್ ಅನ್ನು ನಿರಂಕುಶಾಧಿಕಾರಿ ಅಸ್ಸಾದ್‌ನಿಂದ ಮುಕ್ತಗೊಳಿಸಿದ್ದೇವೆ ಎಂದು ಬಂಡುಕೋರರು ಘೋಷಿಸಿ ದ್ದಾರೆಂದು ಅಲ್ ಜಜೀರಾ ತನ್ನ ವರದಿಯಲ್ಲಿ ತಿಳಿಸಿದೆ.

ನಾವು ಇಂದು 8-12–2024 ಈ ಕರಾಳ ಯುಗದ ಅಂತ್ಯ ಮತ್ತು ಸಿರಿಯಾದ ಹೊಸ ಯುಗದ ಆರಂಭವನ್ನು ಘೋಷಿಸುತ್ತೇವೆ ಎಂದು ಹಯಾತ್ ತಹ್ರೀರ್ ಅಲ್-ಶಾಮ್ ಬಂಡಾಯ ಬಣವು ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಇದರ ಬೆನ್ನಲ್ಲೇ ಯಾವುದೇ ಅಧಿಕಾರ ಹಸ್ತಾಂತರಕ್ಕೆ ಸರ್ಕಾರ ಸಿದ್ಧವಾಗಿದೆ ಎಂದು ಸಿರಿಯಾದ ಪ್ರಧಾನಿ ಮೊಹಮ್ಮದ್ ಗಾಜಿ ಅಲ್-ಜಲಾಲಿ ಹೇಳಿದ್ದಾರೆ.

ಅಸ್ಸಾದ್ ಆಳ್ವಿಕೆ ಅಂತ್ಯಗೊಂಡ ಬೆನ್ನಲ್ಲೇ ಡಮಾಸ್ಕಸ್‌ನಲ್ಲಿ ಭಾರತೀಯ ರಾಯಭಾರ ಕಚೇರಿ ಕಾರ್ಯನಿರ್ವಹಿಸುವುದನ್ನು ಮುಂದುವರೆಸಿದ್ದು, ಇಲ್ಲಿನ ಪರಿಸ್ಥಿತಿಯಲ್ಲಿ ಎಲ್ಲಾ ಭಾರತೀಯ ಪ್ರಜೆಗಳು ಸುರಕ್ಷಿತವಾಗಿದ್ದಾರೆ ಎಂದು ತಿಳಿಸಿದೆ.

॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಹರಿಹರ ನಗರದ
ನಡುವಲಪೇಟೆ ವಾಸಿ
**ಶ್ರೀಮತಿ ಲೀಲಾವತಿ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ನಮ್ಮ ಪೂಜ್ಯ ಪತಿಯವರಾದ
**ಶ್ರೀ ಮುರುಗೇಂದ್ರಪ್ಪ ಎಂ.ಎಸ್.**
ಇವರು ತಾ. 05.12.2024ನೇ
ಗುರುವಾರ ಬೆಳಗಿನ ಜಾವ 02.20ಕ್ಕೆ
ದೈವಾಧೀನರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 09.12.2024ನೇ ಸೋಮವಾರ ಬೆಳಿಗ್ಗೆ 11.00 ಕ್ಕೆ
ಹರಿಹರದ ನಡುವಲಪೇಟೆಯಲ್ಲಿರುವ ಶ್ರೀ ಮುರುಘರಾಜೇಂದ್ರ
ಕಲ್ಯಾಣ ಮಂಟಪದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕೆಂದು ಕೋರುವ,

**ದುಃಖತಪ್ತರಾದ : ಮೃತರ ಪತ್ನಿ : ಶ್ರೀಮತಿ ಲೀಲಾವತಿ**
**ಮತ್ತು ಮಕ್ಕಳು, ಬಂಧುಗಳು ಹಾಗೂ ಆಪ್ತ ಮಿತ್ರರು.**
**ಮೊ. : 81477 99518, 99865 20540**

ವಿ.ಸೂ. : ಆತ್ಮೀಯರೇ, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

# ಭ್ರಷ್ಟ ಸರ್ಕಾರದ ಚಳಿ ಬಿಡಿಸುವೆ

(1ನೇ ಪುಟದಿಂದ) ಹಣ ತಂದು ಹೊನ್ನಾಳಿ-ನ್ಯಾಮತಿ ತಾಲ್ಲೂಕಿನ ಸಮಗ್ರ ಅಭಿವೃದ್ಧಿ ಮಾಡಿಸಿದ್ದಾರೆ ಎಂದು ಅವರ ಕಾರ್ಯವೈಖರಿಯನ್ನು ವಿಜಯೇಂದ್ರ ಕೊಂಡಾಡಿದರು.

**ಶಾಸಕರು ತಲೆ ಎತ್ತುತ್ತಿಲ್ಲ;** ಹೊನ್ನಾಳಿಯ ಶಾಸಕರು ಸೇರಿದಂತೆ ರಾಜ್ಯದ ಎಲ್ಲಾ ಶಾಸಕರಿಗೆ ಅವರವರ ತಾಲ್ಲೂಕಿನ ಅಭಿವೃದ್ಧಿಗೆ ಇದುವರೆಗೂ ಅನುದಾನ ಬಿಡುಗಡೆಯಾಗದೇ ಮತದಾರರ ಎದುರು ತಲೆ ಎತ್ತಿ ಓಡಾಡುವುದಕ್ಕೂ ಮುಜುಗರ ಪಡುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಮಾತನಾಡಿ, ಬಿ.ವೈ.ವಿಜಯೇಂದ್ರ ಅವರು ಪಕ್ಷದ ರಾಜ್ಯಾಧ್ಯಕ್ಷರಾದ ಮೇಲೆ ಕಾಂಗ್ರೆಸ್ ಸರ್ಕಾರದ ಹಲವಾರು ಭ್ರಷ್ಟಾಚಾರಗಳ ವಿರುದ್ಧ ಹೋರಾಟ ಮಾಡಿ ಸರ್ಕಾರದ ಮುಖಭಂಗವಾಗುವಂತೆ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಾಡಿನ ಮತದಾರರು, ಕಾರ್ಯಕರ್ತರು ಮತ್ತು ಮುಖಂಡರುಗಳು ಮುಂದಿನ ಮುಖ್ಯಮಂತ್ರಿಯಾಗಿ ಬಿ.ವೈ.ವಿಜಯೇಂದ್ರ ಅವರನ್ನೇ ಆಯ್ಕೆ ಮಾಡಬೇಕು ಎಂದು ಈಗಾಗಲೇ ತೀರ್ಮಾನಿಸಿದ್ದಾರೆ. ಬಿಎಸ್‌ವೈ ಅವರ ಕೊಡುಗೆಗಳನ್ನು ಬಿ.ವೈ.ವಿಜಯೇಂದ್ರ ಅವರು ಮುಂದುವರೆಸುತ್ತಾರೆ. ಈ ನಿಟ್ಟಿನಲ್ಲಿ ಅವರ ಹೋರಾಟಗಳಿಗೆ ಜೊತೆಯಾಗಿ ನಿಲ್ಲಬೇಕೆಂದು ರಾಜ್ಯದ ಎಲ್ಲಾ ಪಕ್ಷಗಳ ಕಾರ್ಯಕರ್ತರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಚನ್ನಗಿರಿಯ ಮಾಡಾಳ್ ಮಲ್ಲಿಕಾರ್ಜುನ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ.ಸುರೇಶ್, ಪುರಸಭಾ ಸದಸ್ಯರಾದ ಬಾಬು ಹೋಬಳಿದಾರ್, ರಂಗನಾಥ್, ಮುಖಂಡರಾದ ಲೋಕಿಕೆರೆ ನಾಗರಾಜ್,ಅರಕೆರೆ

ನಾಗರಾಜ್, ನೆಲಹೊನ್ನೆ ಮಂಜುನಾಥ್, ಕೆ.ಪಿ.ಕುಬೇಂದ್ರಪ್ಪ, ಎ.ಜಿ.ಮಹೇಂದ್ರಗೌಡ, ಮಾರುತಿ ನಾಯ್ಕ್, ಸಿ.ಆರ್.ಶಿವಾನಂದ್ ಸೇರಿದಂತೆ ಅವಳಿ ತಾಲ್ಲೂಕಿನ ಕಾರ್ಯಕರ್ತರು -ಮುಖಂಡರುಗಳು ಉಪಸ್ಥಿತರಿದ್ದರು.

# ಹೊನ್ನಾಳಿ : ಇಂದು ಬೀರಪ್ಪ ದೇವರ ಪವಾಡ ಕಾರ್ಯಕ್ರಮ

## ನಾಡಿದ್ದು ರಾಜ್ಯಮಟ್ಟದ ಬಯಲು ಖಾಟಾ ಜಂಗೀ ಕುಸ್ತಿ ಪಂದ್ಯಾವಳಿಗಳು



ಹೊನ್ನಾಳಿ, ಡಿ.8- ಪಟ್ಟಣದ ದೊಡ್ಡಕೇರಿಯಲ್ಲಿ ಬೀರಲಿಂಗೇಶ್ವರ ಕಾರ್ತಿಕೋತ್ಸವ ನಿಮಿತ್ತ ನಾಳೆ ದಿನಾಂಕ 9ರಿಂದ 13ರ ವರೆಗೆ ವಿವಿಧ ಕಾರ್ಯಕ್ರಮಗಳು ಅದ್ದೂರಿಯಾಗಿ ಜರುಗಲಿವೆ ಎಂದು ಯಜಮಾನ್ ಎಚ್.ಬಿ. ಗಿಡ್ಡಪ್ಪ ಹಾಗೂ ತೆಂಗಿನಮರದ ಮಾದಪ್ಪ ತಿಳಿಸಿದರು.

ದೇವಸ್ಥಾನದ ಆವರಣದಲ್ಲಿ ಕಾರ್ಯಕ್ರಮದ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಇಂದು ಬೀರಪ್ಪ ದೇವರ ಪವಾಡ ಕಾರ್ಯಕ್ರಮ ನಡೆಯಲಿದೆ ಎಂದರು.

ನಾಡಿದ್ದು ದಿನಾಂಕ 10ರ ಬೆಳಗ್ಗೆ ಬೀರಪ್ಪ ದೇವರ ಮುಳ್ಳುಗದ್ದುಗೆ ಉತ್ಸವ ಹಾಗೂ ಮೊಳೆ ಪಲ್ಲಕ್ಕಿ ಉತ್ಸವ ತುಂಗಭದ್ರಾ ನದಿಯಿಂದ ಹೊರಟು ದುರ್ಗಮ್ಮ ದೇವಸ್ಥಾನದ ಆವರಣ ಸೇರಲಿದೆ. ನಂತರ ಕೆಂಡ ಹಾಯುವ ಕಾರ್ಯಕ್ರಮ ನಡೆದು ತದನಂತರ ದೇವರ ಮೆರವಣಿಗೆ ಜರುಗಲಿದೆ ಎಂದರು.

ಮಧ್ಯಾಹ್ನ 1ಕ್ಕೆ ದೊಡ್ಡಕೇರಿಯ ದೇವಸ್ಥಾನದ ಆವರಣದಲ್ಲಿ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದರು.

**ರಾಜ್ಯಮಟ್ಟದ ಬಯಲು ಖಾಟಾ ಜಂಗೀ ಕುಸ್ತಿ :** ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಲಭಾಗದ ಅಖಾಡದಲ್ಲಿ ಇದೇ ದಿನಾಂಕ 11ರಿಂದ 13ರ ವರೆಗೆ ರಾಜ್ಯ ಮಟ್ಟದ ಬಯಲು ಖಾಟಾ ಜಂಗೀ ಕುಸ್ತಿ ಪಂದ್ಯಾವಳಿ ಜರುಗಲಿದ್ದು, ರಾಜ್ಯ ಹಾಗೂ ರಾಷ್ಟ್ರಮಟ್ಟದ ಪೈಲ್ವಾನರು ಕುಸ್ತಿಯಲ್ಲಿ ಭಾಗವಹಿಸಲಿದ್ದಾರೆ ಎಂದರು.

ಉತ್ತಮ ಕುಸ್ತಿ ಪಟುಗಳಿಗೆ ಬೆಳ್ಳಿ ಗದೆ, 15ರಿಂದ 25 ಸಾವಿರದ ವರೆಗೆ ನಗದು ಹಾಗೂ ರಾಜ್ಯಮಟ್ಟದ ಕುಸ್ತಿ ಪೈಲ್ವಾನರಿಗೆ ಇನ್ನೂ ಹೆಚ್ಚಿನ ಮೊತ್ತ ನಿಗದಿ ಪಡಿಸಲಾಗಿದೆ ಎಂದರು.

1ನೇ ದಿನದ ಕುಸ್ತಿ ಪಂದ್ಯಾವಳಿಗಳು ಎಚ್.ಬಿ. ಗಿಡ್ಡಪ್ಪ ಅಧ್ಯಕ್ಷತೆಯಲ್ಲಿ, 2ನೇ ದಿನದ ಕುಸ್ತಿ ಪಂದ್ಯಾವಳಿಗಳು ತೆಂಗಿನಮರದ ಮಾದಪ್ಪ ಅಧ್ಯಕ್ಷತೆಯಲ್ಲಿ, 3ನೇ ದಿನದ ಕುಸ್ತಿ ಪಂದ್ಯಾವಳಿಗಳು ಬೀರಲಿಂಗೇಶ್ವರ ದೇವರ ಟ್ರಸ್ಟ್ ಕಮಿಟಿವತಿಯಿಂದ ಜರುಗಲಿವೆ ಎಂದರು.

3 ದಿನಗಳ ಕುಸ್ತಿ ಪಂದ್ಯಾವಳಿಗಳಿಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಶಾಸಕ ಡಿ.ಜಿ. ಶಾಂತನಗೌಡ, ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಸೇರಿದಂತೆ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಈ ವೇಳೆ ಅಣ್ಣಪ್ಪ ಸ್ವಾಮಿ, ಪ್ರಭುಸ್ವಾಮಿ, ಬುದ್ಧಿವಂತ ಪರಸಣ್ಣಾರ ನರಸಿಂಹಪ್ಪ, ಗೌಡ್ರು ನರಸಪ್ಪ, ಮುಖಂಡರಾದ ಹೆಚ್.ಡಿ ವಿಜೇಂದ್ರಪ್ಪ, ಬಿಸಾಟಿ ನಾಗರಾಜಪ್ಪ, ಇಟ್ಟಿಗೆ ಬಸಣ್ಣ, ಬೂದ್ಯಪ್ಪ, ಪೈಲ್ವಾನ್ ಸಿದ್ದಪ್ಪ, ಕಾಳಿಂಗಪ್ಪ, ಸತ್ತಿಗೆ ಮಂಜಪ್ಪ, ಸುರೇಶ್, ಕುಸ್ತಿ ಕಮಿಟಿ ಅಧ್ಯಕ್ಷ ಹೆಚ್.ಬಿ ಅಣ್ಣಪ್ಪ, ಗೌರವಾಧ್ಯಕ್ಷ ಎನ್.ಕೆ ಆಂಜನೇಯ ಇದ್ದರು.

# ತಂತ್ರಜ್ಞಾನಕ್ಕೆ ತಕ್ಕಂತೆ ತ್ವರಿತ ಚಿಂತನೆಗಳ ಅಗತ್ಯವಿದೆ : ಡಾ. ಸುಧೀರ್ ಕಾಮತ್




ದಾವಣಗೆರೆ, ಡಿ.8- ಜಿಎಂ ವಿಶ್ವವಿದ್ಯಾಲಯದ ವಿದ್ಯಾರ್ಥಿ ವ್ಯವಹಾರಗಳ ನಿರ್ದೇಶನಾಲಯ ಮತ್ತು ತಾಂತ್ರಿಕ ಸಮುದಾಯ ವಿಭಾಗದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಎರಡು ದಿನಗಳ ಇಗ್ನಿಟ್ರಾನ್ 2k24 ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯವಾಯಿತು.

ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಾಮನ್ ಸೆಂಟರ್ ಆಫ್ ಎಕ್ಸಲೆನ್ಸ್ ಫಾರ್ ಇಂಡಸ್ಟ್ರಿ ಅಕಾಡೆಮಿಯ ಡಿಆರ್ ಡಿ ಒ ಡಾ. ಸುಧೀರ್ ಕಾಮತ್ ಮಾತನಾಡಿ, ವೇಗವಾಗಿ ಚಲಿಸುವ ಜಗತ್ತು. ತಂತ್ರಜ್ಞಾನಗಳು ವೇಗವಾಗಿ ಮುಂದುವರಿಯುತ್ತಿವೆ. ಹಾಗಾಗಿ ಪ್ರಸ್ತುತ ಜಗತ್ತಿನಲ್ಲಿ ತುಂಬಾ ತ್ವರಿತವಾದ ಚಿಂತನೆಗಳ ಪ್ರಕ್ರಿಯೆ ಅಗತ್ಯವಿದೆ ಎಂದು ತಿಳಿಸಿದರು.

ಜಿಎಂ ವಿಶ್ವವಿದ್ಯಾಲಯದ ಸಹ ಕುಲಪತಿ ಡಾ. ಹೆಚ್. ಡಿ. ಮಹೇಶಪ್ಪ ಅಧ್ಯಕ್ಷೀಯ ಭಾಷಣ ಮಾಡಿದರು. ಜಿಎಂ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಜಿ.ಎಂ. ಲಿಂಗರಾಜು, ಜಿಎಂ ಗ್ರೂಪ್ ನ ಸಲಹೆಗಾರರಾದ ಡಾ. ಕೆ. ದಿವ್ಯಾನಂದ, ರಫೀಕ್ ರಾಜ್, ಜಿಎಂ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್.ಆರ್. ಶಂಕಪಾಲ್, ಕುಲಸಚಿವರಾದ ಡಾ. ಬಿ.ಎಸ್. ಸುನಿಲ್ ಕುಮಾರ್, ವಿದ್ಯಾರ್ಥಿ ವ್ಯವಹಾರಗಳ ನಿರ್ದೇಶನಾಲಯದ ಉಪ ನಿರ್ದೇಶಕರಾದ ಎಸ್.ಟಿ. ಮಾರುತಿ ಸೇರಿದಂತೆ ಪ್ರಾಂಶುಪಾಲರು, ಡೀನ್ ಗಳು, ನಿರ್ದೇಶಕರು, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಿವಿಲ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಬಿ. ಸ್ಫೂರ್ತಿ ನಿರೂಪಿಸಿದರು. ವಿದ್ಯಾರ್ಥಿನಿ ಎಸ್. ಮೋನಿಕಾ ಸ್ವಾಗತಿಸಿದರು. ವಿದ್ಯಾರ್ಥಿನಿ ಎಂ. ಶ್ರೀಲಕ್ಷ್ಮಿ ವಂದಿಸಿದರು.

ಸತತ 24 ಗಂಟೆಗಳ ಕಾಲ ನಡೆದ "ಹ್ಯಾಕಥಾನ್" ನಲ್ಲಿನ ಎರಡು ವಿಷಯಗಳಲ್ಲಿ ಒಟ್ಟು 42 ತಂಡಗಳು, 168 ಸ್ಪರ್ಧಿಗಳು ಭಾಗವಹಿಸಿದ್ದರು.

# ಕಳಪೆ ದುರಸ್ತಿ ಕಾಮಗಾರಿ : ಶಾಸಕ ಬಸವಂತಪ್ಪ ಗರಂ



ದಾವಣಗೆರೆ, ಡಿ.8- ತಾಲ್ಲೂಕಿನ ಹೆಮ್ಮನ ಬೇತೂರು ಕ್ರಾಸ್‌ನಿಂದ ದಾವಣಗೆರೆ ನಗರ ಪ್ರವೇಶಿಸುವ ರಸ್ತೆಯವರೆಗೆ ಕೈಗೊಂಡಿರುವ ತಾತ್ಕಾಲಿಕ ಡಾಂಬರ್ ರಸ್ತೆ ದುರಸ್ತಿ ಕಾಮಗಾರಿ ನಡೆಯುವ ಸ್ಥಳಕ್ಕೆ ಶಾಸಕ ಕೆ.ಎಸ್. ಬಸವಂತಪ್ಪ ಭೇಟಿ ನೀಡಿ ಪರಿಶೀಲಿಸಿದರು.

ರಸ್ತೆಯಲ್ಲಿನ ಗುಂಡಿಗಳಿಗೆ ಸರಿಯಾದ ಪ್ರಮಾಣದಲ್ಲಿ ಡಾಂಬರ್ ಹಾಕದೇ ಇರುವುದನ್ನು ಕಂಡ ಶಾಸಕರು ಕಳಪೆ ದುರಸ್ತಿ ಕಾಮಗಾರಿಯ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಗುತ್ತಿಗೆದಾರ ಮತ್ತು ಇಂಜಿನಿಯರ್ ಎಲ್ಲಿಗೆ ಹೋಗಿದ್ದಾರೆ ? ಎಂದು ಕೆಲಸಗಾರರಿಗೆ ಪ್ರಶ್ನಿಸಿದ ಅವರು, ಮನಬಂದಂತೆ ಡಾಂಬರ್ ಹಾಕಿದರೆ ಎರಡ್ಮೂರು ವಾಹನ ಓಡಾಡಿದರೆ ಸಾಕು, ಗುಂಡಿಗಳು ಪುನರ್ ನಿರ್ಮಾಣವಾಗಲಿವೆ ಎಂದು ಕಿಡಿಕಾರಿದರು.

ಸ್ಥಳದಲ್ಲಿ ಗುತ್ತಿಗೆದಾರ ಹಾಗೂ ಸಂಬಂಧ ಪಟ್ಟ ಇಂಜಿನಿಯರ್ ಇಬ್ಬರೂ ಇರಲಿಲ್ಲ. ಹಾಗಾಗಿ ಕೆಲಸಗಾರರು ರಸ್ತೆ ಗುಂಡಿಗಳಿಗೆ ತಮಗೆ ತಿಳಿದಷ್ಟು ಡಾಂಬರು ಸವರುತ್ತಿದ್ದರು. ಇದನ್ನು ಮನಗಂಡ ಶಾಸಕರು ಕೆಲಸಗಾರರನ್ನು ತರಾಟೆಗೆ ತೆಗೆದುಕೊಂಡರು.

ಮಾಡುವ ಕೆಲಸ ಶಾಶ್ವತವಾಗಿ ಉಳಿಯಬೇಕು. ಹಾಗಾಗಿ ನಿಗದಿ ಪಡಿಸಿದ ಪ್ರಮಾಣದಲ್ಲಿ ರಸ್ತೆ ಗುಂಡಿಗೆ ಡಾಂಬರ್ ತುಂಬಬೇಕು. ಈ ನಿಟ್ಟಿನಲ್ಲಿ ಗುಣಮಟ್ಟದ ರಸ್ತೆ ದುರಸ್ತಿ ಮಾಡಬೇಕು ಎಂದು ತಾಕೀತು ಮಾಡಿದರು.

'ಸ್ಥಳದಲ್ಲೇ ಇದ್ದು ದುರಸ್ತಿ ಕಾಮಗಾರಿ ಮಾಡಬೇಕು. ಗುತ್ತಿಗೆದಾರರಿಗೆ ಹೇಳಿ ನೀವು ಸ್ಥಳಕ್ಕೆ ಬರದಿದ್ದರೆ ಅವರು ಕಳಪೆ ದುರಸ್ತಿ ಮಾಡುತ್ತಾರೆ, ಪದೇ ಪದೇ ರಸ್ತೆ ದುರಸ್ತಿಗೆ ಎಲ್ಲಿಂದ ಹಣ ತರಬೇಕು ಎಂದು ಫೋನ್ ಕರೆ ಮೂಲಕ ಸಂಬಂಧಿಸಿದ ಇಂಜಿನಿಯರ್‌ಗೆ ತರಾಟೆಗೆ ತೆಗೆದುಕೊಂಡರು.

# ರೈಲು ಪ್ರಯಾಣಕ್ಕೆ ಅಡ್ಡಿಯಾದ 'ಕೋತಿ ಜಗಳ'

ಸಮಸ್ತಿಪುರ, ಡಿ.8 - ಬಿಹಾರದ ಸಮಷ್ಟಿಪುರ್ ನಿಲ್ದಾಣದಲ್ಲಿ ಬಾಳೆಹಣ್ಣಿನ ವಿಷಯದಲ್ಲಿ ಎರಡು ಕೋತಿಗಳ ನಡುವಿನ ಕಾದಾಟವು ರೈಲು ಸಂಚಾರಕ್ಕೆ ಅಡ್ಡಿಪಡಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಶನಿವಾರ ಮಧ್ಯಾಹ್ನ ಎರಡು ಕೋತಿಗಳು ನಾಲ್ಕನೇ ಪ್ಲಾಟ್‌ಫಾರ್ಮ್‌ನಲ್ಲಿ ಜಗಳವಾಡುತ್ತಿದ್ದಾಗ ಈ ಘಟನೆ ಸಂಭವಿಸಿದೆ ಎಂದು ಅವರು ಹೇಳಿದರು.

"ಹೋರಾಟದ ವೇಳೆ ಒಂದು ಕೋತಿ ಮತ್ತೊಂದರ ಮೇಲೆ ಬಾಳೇಹಣ್ಣು ಎಸೆಯುತ್ತಿತ್ತು. ಅದು ಓವರ್ ಹೆಡ್ ತಂತಿಗೆ ತಗುಲಿ, ವಿದ್ಯುತ್ ತಂತಿ ತುಂಡಾಯಿತು. ಘಟನೆಯಿಂದಾಗಿ ರೈಲು ಸಂಚಾರದಲ್ಲಿ ಸ್ವಲ್ಪ ಸಮಯ ವ್ಯತ್ಯಯವಾಯಿತು ಎಂದು ಪೂರ್ವ ಮಧ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಸರಸ್ವತಿ ಚಂದ್ರ ಹೇಳಿದ್ದಾರೆ.

ಕೂಡಲೇ ಅದನ್ನು ಸರಿಪಡಿಸಿದ ರೈಲ್ವೇ ಸಿಬ್ಬಂದಿ, ರೈಲು ಸಂಚಾರವನ್ನು ಪುನರಾರಂಭಿಸಲಾಯಿತು ಎಂದು ಅವರು ಹೇಳಿದರು.

# ಮುಂದುವರೆದ ರೈತರ ದೆಹಲಿ ಪಾದಯಾತ್ರೆಗೆ ಮತ್ತೆ ತಡೆ

ಶಂಭು, ಡಿ.8- ಪಂಜಾಬ್-ಹರಿಯಾಣ ಗಡಿಯಲ್ಲಿರುವ ಶಂಭು ಪ್ರತಿಭಟನಾ ಸ್ಥಳದಿಂದ 101 ಮಂದಿ ರೈತರ ಗುಂಪು ಭಾನುವಾರ ಮಧ್ಯಾಹ್ನ ದೆಹಲಿಗೆ ತನ್ನ ಪಾದಯಾತ್ರೆಯನ್ನು ಪುನರಾರಂಭಿಸಿತು. ಆದರೆ ಹರಿಯಾಣ ಭದ್ರತಾ ಸಿಬ್ಬಂದಿಗಳು ಬಹುಪದರದ ಬ್ಯಾರಿಕೇಡಿಂಗ್ ನಿರ್ಮಿಸಿದ್ದರಿಂದ ಮಾರ್ಗ ಮಧ್ಯೆ ಅರ್ಧದಲ್ಲಿಯೇ ತಡೆದರು.

ಬ್ಯಾರಿಕೇಡ್‌ಗಳನ್ನು ತಲುಪಿದ ಪ್ರತಿಭಟನಾಕಾರರನ್ನು ಚದುರಿಸಲು ಅಶ್ರುವಾಯು ಶೆಲ್‌ಗಳನ್ನು ಬಳಸಲಾಯಿತು. ಫಿರಂಗಿಗಳ ಮೂಲಕ ವಾಟರ್ ಜೆಟ್‌ಗಳನ್ನು ಹೊಡೆದರು. ದೆಹಲಿ ಸರ್ಕಾರದಿಂದ ಅನುಮತಿ ಪಡೆದ ನಂತರವೇ ರೈತ ಸಂಘಟನೆಗಳು ದೆಹಲಿಗೆ ಮೆರವಣಿಗೆ ನಡೆಸಬಹುದು ಎಂದು ಅಂಬಾಲಾ ಪೊಲೀಸರು ಈ ಹಿಂದೆ ಹೇಳಿದ್ದರು. ತಮ್ಮ ಪ್ರತಿಭಟನೆ ಭಾನುವಾರ 300 ದಿನಗಳನ್ನು ತಲುಪಿದೆ ಎಂದು ಪಂಜಾಬ್ ರೈತ ನಾಯಕ ಸರ್ವಾನ್ ಸಿಂಗ್ ಪಂಧೇರ್ ಹೇಳಿದ್ದಾರೆ.

# ಜಿಲ್ಲೆಯಲ್ಲಿ ಪಿಡಿಓ ಪರೀಕ್ಷೆ ಯಶಸ್ವಿ

ದಾವಣಗೆರೆ, ಡಿ.8- ಕರ್ನಾಟಕ ಲೋಕಸೇವಾ ಆಯೋಗದಿಂದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಗ್ರೂಪ್ ಸಿ ಹುದ್ದೆಗಳಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ 150 ಹುದ್ದೆಗಳ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ ಭಾನುವಾರವೂ ನಗರದಲ್ಲಿ ಸುಗಮವಾಗಿ ನಡೆಯಿತು.

ಇಂದು 27 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಪರೀಕ್ಷೆಗೆ 12029 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದರು. ಮೊದಲ ಪತ್ರಿಕೆಗೆ 6267 ಹಾಜರಾಗಿ 5762 ಅಭ್ಯರ್ಥಿಗಳು ಹಾಗೂ ಮಧ್ಯಾಹ್ನ ನಡೆದ ಎರಡನೇ ಪತ್ರಿಕೆಗೆ 6234ರ ಪೈಕಿ 5795 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು. ಬೆಳಿಗ್ಗೆ 10 ರಿಂದ 11.30 ರವರೆಗೆ ಪತ್ರಿಕೆ-1 ಸಾಮಾನ್ಯ ಜ್ಞಾನ, ಮಧ್ಯಾಹ್ನ 2 ರಿಂದ 4 ಗಂಟೆಯವರೆಗೆ ಪತ್ರಿಕೆ-2, ಸಾಮಾನ್ಯ ಕನ್ನಡ, ಸಾಮಾನ್ಯ ಇಂಗ್ಲೀಷ್, ಕಂಪ್ಯೂಟರ್ ಜ್ಞಾನ ವಿಷಯದ ಕುರಿತು ಪರೀಕ್ಷೆ ನಡೆಯಿತು.

# ಬಳ್ಳಾರಿಯಲ್ಲಿ ಮೃತ ಬಾಣಂತಿಯರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ

ಬಳ್ಳಾರಿ, ಡಿ.8- ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಮೃತಪಟ್ಟ ಬಾಣಂತಿಯರ ಕುಟುಂಬಗಳಿಗೆ ಸರ್ಕಾರದಿಂದ ತಲಾ 5 ಲಕ್ಷ ರೂಪಾಯಿ ಪರಿಹಾರ ಘೋಷಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಭಾನುವಾರ ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ನಡೆದ ಅಭಿನಂದನಾ ಸಮಾವೇಶದಲ್ಲಿ ಮಾತನಾಡಿ, ಈಗಾಗಲೇ 2 ಲಕ್ಷ ರೂಪಾಯಿ ಪರಿಹಾರ ಘೋಷಣೆ ಆಗಿದೆ. ಇನ್ನೂ 3 ಲಕ್ಷ ರೂಪಾಯಿ ನೀಡಲಾಗುವುದು ಎಂದು ಹೇಳಿದರು.

ಬಳ್ಳಾರಿ ಬಿಮ್ಸ್ ನಲ್ಲಿ ಐವರು ಬಾಣಂತಿಯರು ಮೃತಪಟ್ಟಿರು ವ ಘಟನೆ ದುರದೃಷ್ಟಕರ. ಮೃತ ಬಾಣಂತಿಯ ರೆಲ್ಲರೂ ಬಡ ಕುಟುಂಬದವರು. ಹೀಗಾಗಿ, ಮೃತ ಬಾಣಂತಿಯರ ಕುಟುಂಬಕ್ಕೆ 5 ಲಕ್ಷ ರೂಪಾಯಿ ಪರಿಹಾರ ನೀಡುತ್ತೇವೆ ಎಂದು ಹೇಳಿದರು.

ಹೆರಿಗೆಗೆಂದು ಬಿಮ್ಸ್‌ಗೆ ದಾಖಲಾಗಿದ್ದ ಒಂಬತ್ತು ಮಂದಿ ಗರ್ಭಿಣಿಯರಾ ದ ನಂದಿನಿ, ಲಲಿತಮ್ಮ, ಸುಮಯಾ, ರೋಜಾ , ಮುಸ್ಕಾನ್, ಅಮೃತಾ, ಮಹಾಲಕ್ಷ್ಮೀ, ರಾಜೇಶ್ವರಿ, ಸುಮಲತಾ ಎಂಬುವರಿಗೆ ನವೆಂಬರ್ 9ರಂ ದು ಸಿಸೇರಿಯನ್ ಮೂಲಕ ಹೆರಿಗೆ ಮಾಡಲಾಗಿತ್ತು. ಇವರಲ್ಲಿ ನಂದಿನಿ, ಲಲಿತಮ್ಮ ರೋಜಾ, ಮುಸ್ಕಾ ನ್ ಹಾಗೂ ಸುಮಯಾ ಮೃತಪಟ್ಟಿದ್ದಾರೆ. ಇನ್ನು ಳಿ ದ ನಾಲ್ವರು ಬಾಣಂತಿಯರು ಚಿಕಿತ್ಸೆ ಪಡೆದು ಬಿಡುಗಡೆಯಾಗಿದ್ದರು.



**327 ಬಾ ಣಂತಿಯರ ಸಾವು:** ರಾಜ್ಯದಲ್ಲಿ ಕಳೆದ ಏ ಪ್ರಿ ಲ್ ತಿಂಗಳಿನಿಂದ ಇಲ್ಲಿಯವರೆಗೆ ಖಾಸಗಿ ಮತ್ತು ಸ ರ್ಕಾರಿ ಆಸ್ಪತ್ರೆಗಳಲ್ಲಿ 327 ಬಾಣಂತಿಯರ ಸಾವು ಸಂಭವಿಸಿದ್ದು, ಪ್ರತಿಯೊಂದು ಕೂಡ ತಪಾಸಣೆ ಮಾಡಲಿದ್ದೇವೆ. ಲೆಕ್ಕಪರಿಶೋಧನೆ ವರದಿ ಸಲ್ಲಿಸಲು ಹೇಳಿದ್ದೇವೆ. ಉನ್ನತ ತಜ್ಞರನ್ನು ಕರೆಸಿ ಮತ್ತೊಮ್ಮೆ ತಪಾಸಣೆ ಮಾಡಲು ಹೇಳಿದ್ದೇವೆ. ಏಕೆಂದರೆ ಕೋರ್ಟ್ ಗಳಲ್ಲಿ ಕಾನೂನು ಹೋರಾಟ ಮಾಡಬೇಕಾಗಿದೆ. ಸರಿಯಾದ ಸಾಕ್ಷಿ ಸಂಗ್ರಹಿಸಬೇಕಾಗಿದೆ ಎಂದು ಸಚಿವರು ಹೇಳಿದ್ದಾರೆ.

# ಸಂಸ್ಕಾರದಿಂದ ಸಂತನಾಗಿ ಜ್ಞಾನದ ಬೆಳಕು ನೀಡಿದ ಶ್ರೀ ವಿಶ್ವಬಂಧು ಮರುಳಸಿದ್ಧರು

**- ಕೊಂಡಜ್ಜಿ ಬಣಕಾರ್ ಶಿವಕುಮಾರ್,**
ವಕೀಲರು, ದಾವಣಗೆರೆ.








**ನಗರದಲ್ಲಿ ಇಂದು ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರರ ಸಹಸ್ರ ದೀಪೋತ್ಸವ ಮತ್ತು ಸಾಂಸ್ಕೃತಿಕ ವೈಭವ**

12ನೇ ಶತಮಾನ ಕನ್ನಡದ ನಾನಾ ಧಾರ್ಮಿಕ, ಅಧ್ಯಾತ್ಮಿಕ ಹಾಗೂ ಸಾಮಾಜಿಕ, ವೈಚಾರಿಕ ಕ್ರಾಂತಿಯ ಯುಗ. ಈ ಕ್ರಾಂತಿಗೆ, ಪ್ರಗತಿಗೆ ಕಾರಣ ಅಂದು ಬೆಳಗಿದ ಶರಣ ಸಂಕುಲ. ಶ್ರೀ ತರಬಾಳು ಪೀಠದ ಮೂಲ ಪುರುಷನಾದ ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರರು ಜಗಜ್ಯೋತಿ ವಿಶ್ವಗುರು ಬಸವಣ್ಣನ ಹಿರಿಯ ಸಮಕಾಲೀನರು ಎಂದೇ ಹೇಳಬಹುದು. ಹಾಗಾಗಿ ಅಂದು ಮರುಳಸಿದ್ದರ ನಡೆಯನ್ನು ನೋಡಿ ಬಸವಣ್ಣನವರು ನುಡಿದರೋ ಅಥವಾ ಬಸವಣ್ಣನವರ ನುಡಿಯನ್ನು ಕೇಳಿ ಮರುಳಸಿದ್ದರು ನಡೆದರೋ ಎನ್ನುವಷ್ಟು ಇವರಿಬ್ಬರ ವ್ಯಕ್ತಿತ್ವದಲ್ಲಿ ಸಾಮ್ಯತೆ ಕಂಡುಬರುವುದನ್ನು ನೋಡಬಹುದು.

ಕಗ್ಗಲ್ಲುಪುರದ ಶಿವಭಕ್ತರಾಗಿದ್ದ ಮಚ್ಚೆ ಕಾಯಕದ ಕೂಚಿಮಾರ ಮತ್ತು ಸುಪ್ರಭೆ ಎಂಬ ದಂಪತಿಗಳಿಗೆ ಮಕ್ಕಳಾಗಿರಲಿಲ್ಲ. ಆಗ ಒಂದು ದಿನ ತಮ್ಮೂರಿಗೆ ಬಂದಿದ್ದ ಒಬ್ಬ ಜಂಗಮ ಸನ್ಯಾಸಿಗೆ ಅತ್ಯಂತ ಶಿವಭಕ್ತರಾಗಿದ್ದ ಈ ದಂಪತಿ ಭಕ್ತಿಯಿಂದ ಸೇವೆಯನ್ನು ಸಲ್ಲಿಸುತ್ತಾರೆ. ಇಂತಹ ಭಾವಪೂರಿತ ಸೇವೆಯನ್ನು ಸಲ್ಲಿಸಿದ ಆ ದಂಪತಿ ಆ ಜಂಗಮ ಸನ್ಯಾಸಿಯು ವರ ಕೊಡಲು ಬಯಸಿದಾಗ, ಈ ದಂಪತಿ ತನು, ಮನ, ಧನದಾಸೆಗೆ ನಿಮ್ಮ ಸೇವೆಗೈದಿಲ್ಲ, ಲಿಂಗ ಪೂಜೆ ಮಾಡಿಲ್ಲ ಅಲ್ಲದೆ ನಮಗಿನ್ನಾವ ಆಸೆಯೂ ಇಲ್ಲ. ಆದರೆ ನಮ್ಮ ಜ್ಯೋತಿಯು ನಂದಿ ಹೋಗುವ ಮುನ್ನ ನಮಗೆ ಒಬ್ಬ ವಂಶ ಜ್ಯೋತಿ ಕಂದನನ್ನು ಕರುಣಿಸು ಗುರುವೇ ಎಂದು ಪ್ರಾರ್ಥಿಸಿಕೊಳ್ಳುತ್ತಾರೆ. ಆಗ ಆ ಜಂಗಮ ಸನ್ಯಾಸಿಯು ನಿಮಗೆ ವಂಶ ಜ್ಯೋತಿಯು ಹುಟ್ಟಿದರೆ ನಿಮ್ಮ ಜ್ಯೋತಿ ನಂದುತ್ತದೆ ಎಂದು ಹೇಳಿದಾಗ ಆ ಶಿವಭಕ್ತರಾದ ದಂಪತಿಗಳು ಹಾಗೇ ಆಗಲಿ ಎಂದು ನಮಗೆ ಸಂತಾನವನ್ನು ಕರುಣಿಸಿ, ಆಶೀರ್ವದಿಸಿ ಎಂದು ಆ ಜಂಗಮ ಸನ್ಯಾಸಿಯಲ್ಲಿ ಸಂಕಲ್ಪ ಮಾಡಿಕೊಳ್ಳುತ್ತಾರೆ. ನಂತರ ಶಿವಭಕ್ತೆಯಾದ ಸುಪ್ರಭೆಯು ಗರ್ಭ ಧರಿಸುತ್ತಾಳೆ. ನಂತರ ತುಂಬು ಗರ್ಭಿಣಿಯಾದ ಸುಪ್ರಭೆಯು ಹೆರಿಗೆ ನೋವನ್ನು ಅನುಭವಿಸುತ್ತಿರುವಾಗ ಜಂಗಮ ಹೇಳಿದ ಹಾಗೆ ನಾವು ಸತ್ತರೆ ನಮ್ಮ ಕುವರನಿಗೆ ದಿಕ್ಕಿಲ್ಲದಂತಾಗಬಾರದೆಂದು ಆ ಊರಿನ ಗೌಡನಾಗಿದ್ದ ಬಾಚಣ್ಣಗೌಡ ಮತ್ತು ಮಲ್ಲಮ್ಮ ದಂಪತಿಯ ಕಾಲಿಗೆ ಬಿದ್ದು ನೀವು ನಮ್ಮ ಮಗನನ್ನು ಸಾಕಬೇಕೆಂದು ಬೇಡುತ್ತಾ, ಗಂಡು ಮಗುವಿಗೆ ಜನ್ಮ ನೀಡಿ ತನ್ನ ಪ್ರಾಣ ಬಿಡುತ್ತಾಳೆ. ಆನಂತರ ತನ್ನ ಗಂಡ ಕೂಚಿಮಾರನು ಮರಣ ಹೊಂದುತ್ತಾನೆ. ಆಗ ಮಕ್ಕಳಿಲ್ಲದೆ ಸಂಕಟ ಅನುಭವಿಸುತ್ತಿದ್ದ ಬಾಚಣ್ಣಗೌಡ ಮತ್ತು ಮಲ್ಲಮ್ಮ ದಂಪತಿಗಳು ಇದು ನಮಗೆ ದೇವರು ಕೊಟ್ಟ ವರ ಪ್ರಸಾದವೆಂದು ತಿಳಿದು ಸಂತೋಷ, ಸಂಭ್ರಮದಿಂದ ಆ ಮಗುವನ್ನು ಮಗನಂತೆ ಸಾಕುತ್ತಾರೆ.

ಹೀಗೆ ಕಗ್ಗಲ್ಲುಪುರದ ಬಾಚಣ್ಣಗೌಡ-ಮಲ್ಲಮ್ಮ ದಂಪತಿ ಪಾಲನೆ ಪೋಷಣೆಯಲ್ಲಿ ಬೆಳೆದ ಮರುಳಸಿದ್ದನು ಬಾಲಕನಾಗಿದ್ದಾಗ ತನ್ನ ಊರಿನಲ್ಲಿ ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಪ್ರಾಣಿ ಬಲಿಯನ್ನು ತನ್ನ ಪ್ರಕರವಾದ ವೈಚಾರಿಕ ಮಾತುಗಳಿಂದ ವಿರೋಧಿಸಿ, ಧಾರ್ಮಿಕ ಶೋಷಿತರ ಕುತಂತ್ರವನ್ನು ಬಯಲು ಮಾಡುತ್ತಾನೆ. ಮುಂದೊಂದು ದಿನ ವಿಶ್ವವೆಲ್ಲಾ ತನಗೆ ಬಂಧು, ವಿಶ್ವದಲ್ಲಿ ತಾನೊಬ್ಬ, ಸಕಲರ ಹಿತವನ್ನು ಕಾಣವುದೇ ಮಾನವ ಜೀವನದ ಅತ್ಯಂತಿಕ ಧ್ಯೇಯ ಎಂದುಕೊಂಡು ಜಗತ್ತಿನ ಸಮಸ್ಯೆಗಳ ಅಧ್ಯಯನಕ್ಕಾಗಿ ಕಗ್ಗಲ್ಲುಪುರ ಬಿಟ್ಟು ಲೋಕ ಕಲ್ಯಾಣಕ್ಕಾಗಿ ದೇಶ ಸಂಚಾರಕ್ಕೆ ಹೋಗುತ್ತಾನೆ. ಆ ಸಮಯದಲ್ಲಿ ಚಿನ್ಮೂಲಾದ್ರಿಯ ಗುರು ಸಾರ್ವಭೌಮ, ಆದಿ ಗುರು ರೇವಣಸಿದ್ದರ ಪರಿಚಯವಾಗಿ, ಅವರಿಂದ ಲೋಕ ಸೇವೆಗೆ ಶಿವದೀಕ್ಷೆ ಪಡೆಯುವುದರೊಂದಿಗೆ ಶಿಷ್ಯತ್ವ ಪಡೆದುಕೊಂಡು, ಅವರ ಮಾರ್ಗದರ್ಶನದಲ್ಲಿ ಸಕಲ ವಿದ್ಯಾ ಪಾರಂಗತರಾದ ಮರುಳಸಿದ್ದರು ಅಂದು ಸಮಾಜದಲ್ಲಿದ್ದ ಮೌಢ್ಯತೆ, ಧಾರ್ಮಿಕ ಶೋಷಣೆ, ತಂತ್ರ ಕುತಂತ್ರಗಳಿಂದ ಪುರೋಹಿತ ಶಾಹಿಗಳು, ಜಂಗಮರು, ವ್ಯಾಪಾರಿಗಳನ್ನು ವಿರೋಧಿಸಿ ಜನರಲ್ಲಿ ಜಾಗೃತಿಯನ್ನುಂಟು ಮಾಡಲು ಸಾಮಾಜಿಕ ಬದಲಾವಣೆಗೆ ಏಕಾಂಗಿಯಾಗಿ ಹೋರಾಟ ಮಾಡಲು ಹಾಗೂ ಲೋಕದಲ್ಲಿನ ಸಕಲ ಜೀವಿಗಳ ಕಲ್ಯಾಣಕ್ಕಾಗಿ ದೇಶ ಪರ್ಯಟನೆ ಮಾಡುತ್ತಾರೆ. ಮರುಳಸಿದ್ದರು ಬಾಲ್ಯದಲ್ಲಿಯೇ ಪಶುಪಾಲನೆ ಮಾಡುತ್ತಿದ್ದುದರಿಂದ ಪ್ರಾಣಿ ದಯೆಯನ್ನು, ನಿಸರ್ಗ ಪ್ರೀತಿಯನ್ನು ಬೆಳೆಸಿಕೊಂಡಿದ್ದರು. ಅಲ್ಲದೆ ದೇವರ ಹೆಸರಿನಲ್ಲಿನ ಪ್ರಾಣಿ ಬಲಿಯನ್ನು, ಅನಿಷ್ಠ ಪದ್ಧತಿಗಳನ್ನು, ಯಜ್ಞ ಯಾಗಾದಿಗಳಲ್ಲಿನ ಮೌಢ್ಯತೆಯನ್ನು, ಅಂಧಶ್ರದ್ಧೆ – ಕಂದಾಚಾರವನ್ನು ಮತ್ತು ಮದ್ಯ-ಮಾಂಸ ಸೇವನೆಯನ್ನು ಖಂಡಿಸುತ್ತಾ, ಅವುಗಳ ನಿವಾರಣೆಗಾಗಿ ಹೋರಾಟ ನಡೆಸಿ ಅನೇಕ ಸಂಕಷ್ಟಗಳನ್ನು ಎದುರಿಸಿದರು ಹಾಗೂ ಶತ ಶತಮಾನಗಳಿಂದ ಶ್ರೇಣೀಕೃತ ಸಮಾಜದಲ್ಲಿ ಮನೆ

ಮಾಡಿದ್ದ ಮೌಢ್ಯ, ಅಂಧಶ್ರದ್ಧೆ, ಕಂದಾಚಾರ, ವಾಮಾಚಾರ, ಶೋಷಣೆ ಮತ್ತು ವರ್ಣ ಭೇದಗಳನ್ನು ಕಿತ್ತೊಗೆದು ಜ್ಞಾನದ ಕಹಳೆಯೂದಿದರು. ದಯವೇ ಧರ್ಮದ ಮೂಲವೆಂದು ಪ್ರಪಂಚದಲ್ಲಿ ಪ್ರತಿಯೊಂದು ಜೀವಿಗೂ ತನ್ನದೇ ಆದ ಸ್ವಾತಂತ್ರ್ಯ - ಸ್ವಾಭೀಮಾನವಿದೆ ಎಂದು ಸಕಲ ಜೀವರಾಶಿಗಳಿಗೆ ಕಲ್ಯಾಣ ಬಯಸಿದರು.

ಹೀಗೆ ಮರುಳಸಿದ್ದರು ಲೋಕ ಸಂಚಾರ ಮಾಡುತ್ತಾ ಶಿವಭಕ್ತರಾಗಿದ್ದ ರಾಮಿ ತಂದೆಗಳ ಆಶ್ರಯದಲ್ಲಿ ನೆಲೆನಿಂತಾಗ ಆ ಭಾಗದ ಶಿವಭಕ್ತರಾಗಿದ್ದ ಉಡುತಡಿಯ ನಿರ್ಮಲಶೆಟ್ಟಿ ಮತ್ತು ಸುಮತಿ ಎಂಬ ದಂಪತಿ ಸಂತಾನ ಭಾಗ್ಯಕ್ಕಾಗಿ ಮರುಳಸಿದ್ದರಲ್ಲಿ ಬೇಡಿಕೊಳ್ಳುತ್ತಾರೆ. ಆಗ ಮರುಳಸಿದ್ದರು ಈ ದಂಪತಿ ನಿಮ್ಮ ಉದರದಲ್ಲಿ ಈ ಲೋಕ ಕಲ್ಯಾಣಕ್ಕಾಗಿ ಒಬ್ಬ ಪುತ್ರಿಯ ಜನನವಾಗುತ್ತದೆ ಎಂದು ಹರಸಿ ಆಶೀರ್ವದಿಸುತ್ತಾರೆ. ಆನಂತರದಲ್ಲಿ ಈ ದಂಪತಿ ಹೆಣ್ಣು ಮಗು ಜನನವಾಗುತ್ತದೆ. ಆಗ ಈ ದಂಪತಿ ನಮ್ಮ ಮಗಳಿಗೆ ನೀವೇ ಶಿವದಿಕ್ಷೆ ನೀಡಿ ನಾಮಕರಣ ಮಾಡಬೇಕೆಂದು ಭಿನ್ನವಿಸಿಕೊಳ್ಳುತ್ತಾರೆ. ಮರುಳಸಿದ್ದರು ಉಡುತಡಿಯಲ್ಲಿ ಆ ಹೆಣ್ಣು ಮಗುವಿಗೆ ಶಿವದಿಕ್ಷೆ ಕೊಟ್ಟು ಮಹಾದೇವಿ ಎಂದು ನಾಮಕರಣ ಮಾಡುತ್ತಾರೆ. ಮರುಳಸಿದ್ದರು ಈ ಜಗತ್ತಿನಲ್ಲಿ ಪ್ರತಿಯೊಬ್ಬರು ಸಮಾನರು ದೇವನೊಬ್ಬ ಸಂತಾನವೆಂದು ಅವರಲ್ಲಿ ಮೇಲು-ಕೀಳು ತಾರತಮ್ಯ ಬಾರದು ಎಂದು, ವಿಪ್ರರು ದೇವರನ್ನು ಪೂಜಿಸುತ್ತಾರೆಂದರೆ ಆ ಹಕ್ಕು ಇತರರಿಗೇಕಿಲ್ಲ? ಎಂಬ ಉದ್ದೇಶವಿಟ್ಟುಕೊಂಡು ವಿಪ್ರರ ನಡೆ, ನುಡಿಗಳನ್ನು ಸತ್ಯಾಗ್ರಹದ ಮೂಲಕ ಪ್ರತಿಭಟಿಸಿ ಉಡುತಡಿಯ ಮಹಾದೇವಿಯನ್ನೊಳಗೊಂಡು ಹೆಣ್ಣುಮಕ್ಕಳಿಗೆ ಶಿವದಿಕ್ಷೆಯನ್ನು ಕೊಟ್ಟು ಸ್ತ್ರೀ ಸ್ವಾತಂತ್ರ್ಯವನ್ನು ಎತ್ತಿಹಿಡಿದರು ಮರುಳಸಿದ್ದರು. ಮರುಳಸಿದ್ದನಿಂದ ಶಿವದಿಕ್ಷೆ ಪಡೆದುಕೊಂಡ ಉಡತಡಿಯ ಮಹಾದೇವಿಯು ಮುಂದೆ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದಲ್ಲಿದ್ದ ಶರಣೆ ಅಕ್ಕಮಹಾದೇವಿ ಎಂದೇ ಹೇಳಬಹುದು.

ಹೀಗೆ ಲೋಕದಲ್ಲಿನ ಸಕಲ ಜೀವ ರಾಶಿಗಳ ಕಲ್ಯಾಣಕ್ಕಾಗಿ ಲೋಕ ಸಂಚಾರ ಮಾಡುತ್ತಾ ಅಂದು ಪಾಂಡ್ಯ ರಾಜ್ಯದ ಅಧೀನಕ್ಕೊಳಪಟ್ಟಿದ್ದ ವಿಪ್ರರ ಅಗ್ರಹಾರವಾಗಿದ್ದ ಹೆಮ್ಮನಬೇತೂರು ಗ್ರಾಮಕ್ಕೆ ಬರುತ್ತಾರೆ. ಅಲ್ಲಿ ಯಜ್ಞದ ಹೆಸರಿನಲ್ಲಿ ಅಗ್ನಿಗಾಹುತಿಯಾಗುತ್ತಿದ್ದ ವಿವಿಧ ಆಹಾರ ಪದಾರ್ಥಗಳನ್ನು, ದವಸ-ಧಾನ್ಯಗಳನ್ನು ನೋಡಿ ಮರುಗಿದ ಮರುಳಸಿದ್ದ ದೇವರುಗಳಿಗೆ ಹಸಿವು-ತೃಷೆಗಳುಂಟೆ? ಅಗ್ನಿಯಲ್ಲಿ ಬೆಂದು ಬೂದಿಯಾದ ಮೇಲೆ ದೇವಾನುದೇವತೆಗಳಿಗೆ ಹೋಗಿ ಮುಟ್ಟುವ ವಸ್ತುವಾವುದು? ಹೊಗೆ ಹೋಗುತ್ತದೆಯೇ? ಹಾಗಾದರೆ ಹೊಗೆಗೆ ದೇವರುಗಳಿರುವ ಸ್ಥಳ ಗೊತ್ತುಂಟೇ? ಎಂದು ಇಂತಹ ಮೌಢ್ಯವನ್ನು, ಅನಿಷ್ಠ ಪದ್ಧತಿಯನ್ನು ವಿರೋಧಿಸುತ್ತಾನೆ. ಆಗ ಆ ಋತ್ವಿಜರು ಈತನ ಕೈಕಾಲು ಕಟ್ಟಿ ಅಣಜಿ ಕೆರೆಯಲ್ಲಿ ಹಾಕುತ್ತಾರೆ. ಆದರೆ ಮರುಳಸಿದ್ದ ಪವಾಡವೆಂಬಂತೆ ಬದುಕಿ ಬರುತ್ತಾನೆ. ಮತ್ತೆ ಮರುಳಸಿದ್ದನು ಯಜ್ಞ-ಯಾಗಾದಿಗಳನ್ನು ಮಾಡುವುದನ್ನು ವಿರೋಧಿಸುತ್ತಾನೆ. ಆಗ ಅಲ್ಲಿನ ವಿಪ್ರರು ಮರುಳಸಿದ್ದನನ್ನು ಕುರುಡಿ ಗ್ರಾಮದಲ್ಲಿ ಹಗೇವಿಗೆ ಹಾಕಿ ಮೇಲೆ ಬಿಸಿ ಸುಣ್ಣ ಸುರಿಯುತ್ತಾರೆ. ಆಗ ಅಲ್ಲಿದ್ದ ಇತರೆ ಶೂದ್ರ ಜನರು ಮರುಳಸಿದ್ದನನ್ನು ಹಗೇವಿನಿಂದ ಮೇಲಕ್ಕೆ ಎತ್ತಿ ಅವನ ನೆತ್ತಿಗೆ ಎಣ್ಣೆಯನ್ನು ಸುರಿಯುತ್ತಾರೆ. ಆಗ ಮತ್ತೆ ಬದುಕುಳಿಯುತ್ತಾನೆ. ಹೀಗೆ ಕುರುಡಿ ಗ್ರಾಮದಲ್ಲಿ ಸುಣ್ಣದ ಪವಾಡವನ್ನು ಗೆದ್ದಿದ್ದ ಪ್ರಯುಕ್ತ ಮರುಳಸಿದ್ದನ ನೆತ್ತಿ ತಣ್ಣಗಾಗಲಿ ಎಂದು ಪ್ರತೀ ವರ್ಷ ಉಜ್ಜಯಿನಿಯ ಮರುಳಸಿದ್ದನ ದೇವಸ್ಥಾನದ ಶಿಖರಕ್ಕೆ ಇಂದಿಗೂ ಎಣ್ಣೆ ಎರೆಯುತ್ತಿದ್ದಾರೆ. ಮತ್ತೆ ಬದುಕಿ ಬಂದ ಮರುಳಸಿದ್ದನು ಮೌಢ್ಯತೆಯ ಕೇಂದ್ರವಾಗಿದ್ದ ಯಜ್ಞ ಶಾಲೆಗೆ ಪ್ರವೇಶಿಸಿ ಕಟುವಾಗಿ ವಿರೋಧಿಸುತ್ತಾನೆ. ಆಗ ಆ ಭಾಗದ ದೊರೆಯು ಮರುಳಸಿದ್ದನನ್ನು ಆನೆಯ ಕಾಲಿಗೆ ಕಟ್ಟಿ ತುಳಿಸುವಂತೆ ಆಜ್ಞೆ ಮಾಡುತ್ತಾನೆ. ಆಗ ಮರುಳಸಿದ್ದನು ಆನೆಯ ಕೈಗೆ ಸಿಗದಂತೆ ಓಡಿ ಹೋಗಿ ಮುಚ್ಚನೂರಿನಲ್ಲಿ ಮುಚ್ಚಿಕೊಳ್ಳುತ್ತಾನೆ. ಹಾಗಾಗಿ ಈ ಊರಿಗೆ ಮುಚ್ಚನೂರು ಎಂಬ ಹೆಸರು ಬಂದಿದೆ ಎಂದು ಹೇಳಬಹುದು. ನಂತರ ಉಳುಪಿನ ಕಟ್ಟಿಯಲ್ಲಿ ಉಳಿದುಕೊಂಡು ಆನಗೋಡಿನಲ್ಲಿ ಆನೆಯೊಂದಿಗೆ ಸೆಣಸಾಡಿ ಅದರ ಕೋರೆಗಳನ್ನು (ಕೋಡುಗಳನ್ನು) ಕಿತ್ತು ಹಾಕಿ ಗರ್ವಭಂಗ ಮಾಡುತ್ತಾನೆ. ಇದರಿಂದ ಈ ಗ್ರಾಮಕ್ಕೆ ಆನಗೋಡು ಎಂಬ ಹೆಸರು ಬಂದಿದೆ. ನಂತರ ಪಲ್ಲಾಗಟ್ಟೆಯಲ್ಲಿ ಪಲ್ಲಕ್ಕಿ ಏರಿ ಮರುಳಸಿದ್ದನು ತನ್ನ ಮಹಿಮೆಯನ್ನು ತೋರಿಸುತ್ತಾನೆ.

ಆ ನಂತರ ಮರುಳಸಿದ್ದನು ದ್ವಾರ ಸಮುದ್ರಕ್ಕೆ ಹೋಗುವ ದಾರಿಯಲ್ಲಿ ಸಿಗುವ ಕಲ್ಲು ಮರಡಿಯಲ್ಲಿ ಕೆಲಕಾಲ ವಿಶ್ರಾಂತಿ ಪಡೆಯುತ್ತಾನೆ. ಆ ನಂತರ ಮರುಳಸಿದ್ದನು ದ್ವಾರಸಮುದ್ರ ಪ್ರವೇಶಿಸುತ್ತಾನೆ. ಅಲ್ಲಿ ಜನ ಕಲ್ಯಾಣಕ್ಕಾಗಿ ಅಲ್ಲಿನ ದೊರೆ ಬಲ್ಲಾಳರಾಯನ ವಿರುದ್ಧ ಸಿಡಿದೇಳುತ್ತಾನೆ. ಇದರಿಂದ ಸಿಟ್ಟಿಗೆದ್ದ ಬಲ್ಲಾಳ ರಾಯ ದೊರೆಯು ಬೆಂಕಿಯಲ್ಲಿ ಕಾಯಿಸಿದ ಕಬ್ಬಿಣದ ಬಳೆಗಳನ್ನು ಕೈಗೆ ಹಾಕಿಸುತ್ತಾನೆ. ಆ ತಕ್ಷಣವೇ ಮಳೆ ಬಂದು ಕಾದ ಬಳೆಗಳು ತಣ್ಣಗಾಗುತ್ತವೆ. ಮರುಳಸಿದ್ದನ ಈ ಪವಾಡದಿಂದ ಪರಿವರ್ತನೆಯಾದ ಬಲ್ಲಾಳ ದೊರೆಯು ಬಳೆಗೈ ಶರಣ ಎಂಬ ಹೆಸರಿನಿಂದ ಮರುಳಸಿದ್ದನ ಶಿಷ್ಯನಾಗುತ್ತಾನೆ, ನಂತರ ಮರುಳಸಿದ್ದ ಓರಂಗಲ್ಲಿನ ಸಿದ್ದಗಿರಿಯಲ್ಲಿ ಆ ದೇಶದ ರಾಜಪುತ್ರಿಯೊಡನೆ ವಿವಾದಕ್ಕಿಳಿದು ಆಕೆಯನ್ನು ವಾಮಮಾರ್ಗದಿಂದ ನಿವೃತ್ತಿಗೊಳಿಸಿ ತನ್ನ ಶಿಷ್ಯಳನ್ನಾಗಿ ಮಾಡಿಕೊಳ್ಳುತ್ತಾನೆ.

ಅಲ್ಲಿಂದ ಮುಂದೆ ಗುರು ರೇವಣಸಿದ್ದರ ಆಣತಿಯಂತೆ ಮರುಳಸಿದ್ದನು ಶಕ್ತಿಪೂಜೆಯ ಕೇಂದ್ರವಾಗಿದ್ದ ಕೊಲ್ಲಾಪುರದ ಯುವರಾಣಿ ಮಾಯಾದೇವಿಯ ದುರಹಂಕಾರವನ್ನು ಅಡಗಿಸಲು ಕೊಲ್ಲಾಪುರಕ್ಕೆ ಬಂದು, ಆ ಮಾಯಾದೇವಿಯ ಹಾವಭಾವಗಳಿಗೆ ಮನಸೋಲದೆ, ತನ್ನ ಶರೀರ ಸೌಂದರ್ಯದಿಂದ ಸುಲಭವಾಗಿ ಮರುಳಸಿದ್ದನನ್ನು ವಶಪಡಿಸಿಕೊಳ್ಳಬಲ್ಲೆನೆಂಬ ಆಕೆಯ ನಿರೀಕ್ಷೆಯನ್ನು ಹುಸಿಗೊಳಿಸಿ, ಆಕೆಯ ಗರ್ವಭಂಗ ಮಾಡುತ್ತಾನೆ. ಮಾಯಾದೇವಿಯು ಮರುಳಸಿದ್ದನನ್ನು ಹಿಮ್ಮೆಟ್ಟಿಸುವಂತೆ ಮಾಡಲು ನಾನಾ ವಿಧವಾದ ತಂತ್ರಗಳೆಲ್ಲಾ ವಿಫಲವಾದಾಗ ಅವಳೇ ನೇರವಾಗಿ ಮರುಳಸಿದ್ದನೆದುರು ಬರುತ್ತಾಳೆ. ಆಗಲೂ ಮರುಳಸಿದ್ದ ಅವಳ ಹಾವ-ಭಾವ, ವಿಲಾಸ – ವಿಭ್ರಮಗಳಿಗೆ ಮಣಿಯದಿದ್ದಾಗ ಬೆದರಿದ ಅವಳು

**ಬಿಟ್ಟು ನೋಡುವೆ ಕಾಮ ಬಾಣವ**
**ನಿಟ್ಟು ನೋಡಿದೆ ತಾಮಸಾಗ್ನಿಯ**
**ಕಟ್ಟಿ ನೋಡಿದೆ ಮೋಹನಾಸ್ತ್ರದಿ**

ದಿಟ್ಟನಾಗಿರುವಿ ನೀ ಎಂದು ಈ ರೀತಿ ನುಡಿಯುತ್ತಾಳೆ. ಆಗ ಮರುಳಸಿದ್ದನು ನಾನು ಸುಟ್ಟ ಬಟ್ಟೆ ನನ್ನಂತವನನ್ನು ಹಿಡಿಯುವ ಸಾಹಸ ನಿನಗೇಕೆ? ಎಂದು ವಿವಿಧ ರೀತಿಯ ವಿವೇಕದ ಮಾತುಗಳನ್ನು ಹೇಳುತ್ತಾನೆ. ಆಗಲೂ ತನ್ನ ಹಠವನ್ನು ಬಿಡದ ಮಾಯೆ ಮನಬಂದಂತೆ ಹರಟದಿರು, ಈ ನನ್ನ ಕರಹಟನ ರಾಜ್ಯದಲ್ಲಿ ತಲೆಹರಟೆಗೆ ಅವಕಾಶವಿಲ್ಲ. ಹರನ ರೂಪಧರಿಸಿ ಬಂದ ಸಾಧುಸಿದ್ದರನ್ನು ಬಂಧಿಸಿ ಸಿದ್ದಗಿರಿಯಲ್ಲಿ ಸೆರೆಯಲ್ಲಿಡುವೆ ಎಂದು ಉದ್ಧಟತನದ ಮಾತುಗಳನ್ನಾಡುತ್ತಾಳೆ. ಆಗ ಮರುಳಸಿದ್ದ ಅವಳಿಗೆ ವಿಧ ವಿಧವಾಗಿ ವಿವೇಕದ ಮಾತುಗಳನ್ನು ಹೇಳಿ ಅವಳ ಮನ ಪರಿವರ್ತನೆ ಮಾಡುತ್ತಾನ. ಆಗ ಮಾಯಾದೇವಿ ಸಂಪೂರ್ಣವಾಗಿ ಸೋತು ತಾನೇ ಮರುಳಸಿದ್ದನಿಗೆ ಶರಣಾಗತಳಾಗಿ ಶಿಷ್ಯತನ ಪಡೆಯುತ್ತಾಳೆ. ಹೀಗೆ ವಿಪ್ರರ ಕುಟಿಲತೆಗೆ ಒಳಗಾಗಿದ್ದ ಅನೇಕ ಶಿವಭಕ್ತರನ್ನು ಬಂಧಮುಕ್ತರನ್ನಾಗಿ ಮಾಡಿಸುತ್ತಾರೆ. ಯಾವುದೇ ಪ್ರಬಲ ಜಾತಿ, ಧರ್ಮ, ರಾಜಾಶ್ರಯದ ಬೆಂಬಲವಿಲ್ಲದೆ ಅತ್ಯಂತ ಕೆಳವರ್ಗದಿಂದ ಬಂದು ಶ್ರಮಜೀವಿಗಳ ಸಹಕಾರದ ಮೂಲಕ ಜನರ ಪರಿವರ್ತನೆಗೆ ತನ್ನ ಬದುಕನ್ನೇ ಮೀಸಲಿಟ್ಟ ಅದಮ್ಯ ಶಕ್ತಿ ಮರುಳಸಿದ್ದ. ವ್ಯಕ್ತಿತ್ವದ ವಿಕಾಸಕ್ಕೆ ಹುಟ್ಟಾಗಲೀ - ಜಾತಿಯಾಗಲಿ ಸಂಬಂಧವಿಲ್ಲ ಎಂಬುದನ್ನು ಲೋಕಕ್ಕೆ ತೋರಿದ ಮಹಾತ್ಮ ಮರುಳಸಿದ್ದನು. ಅಂತ್ಯಜರಾಗಿ ಹುಟ್ಟಿಯೂ ತಮ್ಮ ಮಾನವೀಯ ಅನುಕಂಪ, ಸಕಲ ಜೀವಿಗಳ ಕಲ್ಯಾಣಕ್ಕಾಗಿ ಮಾಡಿದ ಹೋರಾಟ, ಸಾಮಾಜಿಕ ಕಳಕಳಿ ಮತ್ತು ಇವರ ವೈಯಕ್ತಿಕ ಸಾಧನೆಯ ಮೂಲಕ ವಿಶ್ವಬಂಧುವಾಗಿ ಇವರ ತತ್ವಗಳಿಂದ ಪ್ರಭಾವಿತರಾದ ಜನತೆ ಮರುಳಸಿದ್ದರನ್ನು ವಿಶ್ವಬಂಧು ಮರುಳಸಿದ್ದ ಎಂದು ಭಕ್ತಿಯಿಂದ ಆರಾಧಿಸುವುದರ ಮೂಲಕ ಜನಮನದ ಹೃದಯ ಸಿಂಹಾಸನದಲ್ಲಿ ನೆಲೆಗೊಂಡರು.

ಹೀಗೆ ಮಾದಿಗರ ಮಗನಾಗಿ ಹುಟ್ಟಿ, ಸಾದಿಗರ ಮಗನಾಗಿ ಬೆಳೆದ ವಿಶ್ವಬಂಧು ಮರುಳಸಿದ್ದ ವೇದ ಸಾರುವ ದಿಗ್ಗಜರನ್ನು ಸೋಲಿಸಿ, ಮಾಯೆಯ ಮದವನ್ನು ಮರ್ಧಿಸಿ, ವಿಪ್ರರ ಉಪಟಳವನ್ನು ಬೇಧಿಸಿ, ಈ (4ನೇ ಪುಟಕ್ಕೆ)

# ಗಡಿಯಲ್ಲಿ ಪಾಕ್ ಐಎಸ್ಐ ಹುಚ್ಚಾಟ

## ಜೈಲಲ್ಲಿರುವ ಉಗ್ರರಿಗೆ ಮಾಹಿತಿ ನೀಡಲು ಹುಚ್ಚರಂತೆ ಬರುವ ಪಾಕಿಗಳು

ನವದೆಹಲಿ, ಡಿ.8- ಭಾರತದ ಜೈಲುಗಳಲ್ಲಿರುವ ಉಗ್ರರಿಗೆ ಮಾಹಿತಿ ತಲುಪಿಸಲು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್ಐ, ಡ್ರಗ್ಸ್ ವ್ಯಸನಿಗಳು ಅಥವಾ ಮಾನಸಿಕ ಅಸ್ವಸ್ಥರ ರೀತಿ ಬಿಂಬಿಸಿ ಕೆಲವರನ್ನು ದೇಶಕ್ಕೆ ಒಳನುಸುಳುವಂತೆ ಮಾಡುತ್ತಿದೆ.

ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಪಾಕಿಸ್ತಾನದಿಂದ ಒಳನುಸುಳುತ್ತಿದ್ದಾರೆ. ಈ ಪೈಕಿ ಹಲವರನ್ನು ಜಮ್ಮು, ಪಂಜಾಬ್ ಮತ್ತು ರಾಜಸ್ಥಾನದ ಜೈಲುಗಳಿಗೆ ಕಳುಹಿಸಲಾಗಿದೆ. ಈ ವರ್ಷದ ಜುಲೈನಿಂದ ಆ ರೀತಿಯ 10 ಪ್ರಕರಣಗಳು ವರದಿಯಾಗಿವೆ ಎಂದು ಭದ್ರತಾ ಸಂಸ್ಥೆಯ ಅಧಿಕಾರಿಗಳು ಹೇಳಿದ್ದಾರೆ.

ಈ ವ್ಯಕ್ತಿಗಳು ಇಂಟರ್-ಸರ್ವೀಸಸ್ ಇಂಟೆಲಿಜೆನ್ಸ್‌ನ (ಐಎಸ್ಐ) ಕೋರಿಯರ್ ರೀತಿ ಕೆಲಸ ಮಾಡುತ್ತಿದ್ದರು. ಈ ವ್ಯಕ್ತಿಗಳು ಭದ್ರತಾ ಸಿಬ್ಬಂದಿಯ ಪ್ರಶ್ನೆಗಳಿಗೆ ಉತ್ತರ ಕೊಡದೇ ಪ್ರತಿರೋಧ ಒಡ್ಡುವ ತಂತ್ರಗಳಲ್ಲಿ ತರಬೇತಿ ಪಡೆದಿರುವುದು ವಿಚಾರಣೆ ವೇಳೆ ತಿಳಿದುಬಂದಿದೆ ಎಂದು ಅವರು ಹೇಳಿದ್ದಾರೆ.

ಬಂಧಿತರ ನಡವಳಿಕೆಗಳು, ಪ್ರಶ್ನೆಗೆ ಸೂಕ್ತ ಉತ್ತರ ನೀಡದೆ ವಿಚಿತ್ರವಾಗಿ ವರ್ತಿಸುತ್ತಿರುವುದನ್ನು ಗಮನಿಸಿದರೆ ಅವರ ಒಳನುಸುಳುವಿಕೆ ಹಿಂದೆ ಬೇರೆಯದ್ದೇ ಯೋಜನೆ ಇರುವುದು ಸ್ಪಷ್ಟವಾಗಿದೆ. ಮೊಬೈಲ್ ಮತ್ತು ಇಂಟರ್‌ನೆಟ್ ಮೂಲಕ ಜೈಲಲ್ಲಿರುವ ಕೈದಿಗಳಿಗೆ ಮಾಹಿತಿ ನೀಡುವುದರಿಂದ ತಮ್ಮ ಯೋಜನೆ ಸೋರಿಕೆಯಾಗುವ ಆತಂಕದಿಂದ ಐಎಸ್ಐ ಹೊಸ ಮಾರ್ಗ ಹಿಡಿದಂತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇದಕ್ಕಾಗಿ ಐಎಸ್ಐ ಮಹಿಳೆಯರು, ಮಕ್ಕಳನ್ನೇ ಬಳಸಿಕೊಳ್ಳುತ್ತಿರುವುದು ಪತ್ತೆಯಾಗಿದೆ. ಪಂಜಾಬ್‌ನಲ್ಲಿ ಓರ್ವ ಅಪ್ರಾಪ್ತನನ್ನು ಬಂಧಿಸಿದ್ದ ಅಧಿಕಾರಿಗಳಿಗೆ ಪರಿಶೀಲನೆ ವೇಳೆ ಅರೇಬಿಕ್ ಭಾಷೆಯ ಪತ್ರವೊಂದು ಪತ್ತೆಯಾಗಿತ್ತು. ಆದರೆ, ಅದು ಸಾಮಾನ್ಯ ಅರೇಬಿಕ್‌ನಂತೆ ಓದಲು ಸಾಧ್ಯವಾಗಿರಲಿಲ್ಲ ಎಂದಿದ್ದಾರೆ.

ಡ್ರಗ್ಸ್ ಕಳ್ಳಸಾಗಣೆಗೂ ಈ ಒಳನುಸುಳುವಿಕೆಗೂ ಲಿಂಕ್ ಇದೆ. ರಾಜಸ್ಥಾನದ ಬಿಜನೂರ್‌ನಲ್ಲಿ ಬಂಧಿತನಾಗಿದ್ದ ಮಾನಸಿಕ ಅಸ್ವಸ್ಥನಂತೆ ನಟಿಸುತ್ತಿದ್ದ ಪಾಕಿಸ್ತಾನದ ಪ್ರಜೆ, ಇಬ್ಬರು ಮಾದಕ ವಸ್ತು ವ್ಯಾಪಾರಿಗಳು ತನ್ನನ್ನು ಕಳುಹಿಸಿದ್ದರು. ಮಾದಕವಸ್ತು ಕಳ್ಳಸಾಗಣೆಗೆ ಅನುಕೂಲಕರ ವಾತಾವರಣ ಪತ್ತೆ ಮಾಡಲು ಗಡಿಯಲ್ಲಿ ಸೇನೆ ನಿಯೋಜನೆಯ ಮಾಹಿತಿ ತರಲು ಸೂಚಿಸಿದ್ದರು ಎಂದು ಆ ವ್ಯಕ್ತಿ ವಿಚಾರಣೆ ವೇಳೆ ಹೇಳಿದ್ದ ಎಂದು ಅಧಿಕಾರಿ ತಿಳಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಲಾಹೋರ್ ಮೂಲದ ಮೊಹಮ್ಮದ್ ಅಸಾದ್ ಎಂಬಾತ ಮೋಟಾರ್ ಸೈಕಲ್ ಓಡಿಸಿಕೊಂಡು ಗಡಿಯ ಶೂನ್ಯವಲಯಕ್ಕೆ ಬಂದಿದ್ದ. ಅಲ್ಲದೆ, ಅಲ್ಲಿಯೇ ನಿಂತು ಭದ್ರತಾ ಪಡೆ ಬಂಧಿಸಲೆಂದೇ ಆತ ಕಾಯುತ್ತಿದ್ದಂತೆ ಅನುಮಾನ ವ್ಯಕ್ತವಾಗಿತ್ತು. ತನಿಖೆ ವೇಳೆ ಪ್ರೇಯಸಿ ಜೊತೆ ಜಗಳ ಆಡಿಕೊಂಡು ಬಂದಿದ್ದಾಗಿ ಹೇಳಿದ್ದ. ಈಗ ಜೈಲಿನಲ್ಲಿರುವ ಆತ ಐಎಸ್‌ಐನ ಮಾಹಿತಿದಾರನಂತೆ ಕೆಲಸ ಮಾಡಿರುವ ಶಂಕೆ ವ್ಯಕ್ತವಾಗಿದೆ. ಆತನ ಮರುವಿಚಾರಣೆಗೆ ಕೋರಿ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲಾಗಿದೆ.

# ನೂತನ ಗ್ರಂಥಾಲಯ ಕಟ್ಟಡಕ್ಕೆ 5 ಲಕ್ಷ ಅನುದಾನ

## ಜಗಳೂರು : 'ತಪಸ್ಸು ಯಶಸ್ಸು ಗ್ರಂಥಾಲಯ' ಕಟ್ಟಡದ ಭೂಮಿ ಪೂಜೆ ನೆರವೇರಿಸಿದ ಶಾಸಕ ಬಿ. ದೇವೇಂದ್ರಪ್ಪ

ಜಗಳೂರು, ಡಿ. 8- ನೂತನ ಗ್ರಂಥಾಲಯ ಕಟ್ಟಡಕ್ಕೆ 5 ಲಕ್ಷ ರೂಗಳ ಅನುದಾನ ನೀಡುವೆ ಎಂದು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದರು.

ತಾಲ್ಲೂಕಿನ ತಮಲೇಹಳ್ಳಿ ಗ್ರಾಮದಲ್ಲಿ ತಮಲೇಹಳ್ಳಿ ನೌಕರರ ಸಂಘದ ಆಶ್ರಯದಲ್ಲಿ ನಡೆದ 'ತಪಸ್ಸು ಯಶಸ್ಸು ಗ್ರಂಥಾಲಯ' ಕಟ್ಟಡದ ಗುದ್ದಲಿ ಪೂಜೆಯನ್ನು ನೆರವೇರಿಸಿ ಅವರು ಮಾತನಾಡಿದರು.




ಗ್ರಂಥಾಲಯ ಆರಂಭವಾಗಿ ಪ್ರಥಮ ವರ್ಷ ಪೂರೈಸಿದ್ದು, ಗ್ರಾಮದ ದೇವಸ್ಥಾನದ ಹತ್ತಿರ ಸುಸಜ್ಜಿತವಾದ ಸರಸ್ವತಿ ಕಟ್ಟಡ ಆಗುತ್ತಿದೆ. ಬಹಳ ಸಂತೋಷದ ಪುಣ್ಯದ ಕೆಲಸವಾಗಿದೆ ಎಂದು ತಿಳಿಸಿದರು.

ಗ್ರಾಮದವರಾದ ಪೊಲೀಸ್ ಅಧಿಕಾರಿ ಶಿವಕುಮಾರ್ ಸಾಹಿತ್ಯಾ ಸಕ್ತರೂ ಆಗಿದ್ದು ಗ್ರಾಮದಲ್ಲಿ ಟ್ರಸ್ಟ್ ವತಿಯಿಂದ ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಎಂದರು. ವಿದ್ಯಾರ್ಥಿಗಳು ಪುಸ್ತಕವನ್ನು ಹಿಡಿದುಕೊಂಡು ನೀವು ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿದರೆ ಉನ್ನತ ಮಟ್ಟಕ್ಕೆ ಹೋಗುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮಾಜಿ ಶಾಸಕ ಎಚ್.ಪಿ. ರಾಜೇಶ್ ಕಾರ್ಯಕ್ರಮ ಕುರಿತು ಮಾತನಾಡಿದರು. ಈ ಗ್ರಾಮಕ್ಕೆ ಹೊಸ ಗಾಳಿ ಬೀಸುತ್ತಿದೆ. ಸರಸ್ವತಿ ದೇವಸ್ಥಾನಕ್ಕೆ ಒಂದು ಅಡಿಗಲ್ಲು ಹಾಕಲಾಗಿದೆ. ಇದೊಂದು ಒಳ್ಳೆಯ ದೇವಸ್ಥಾನದಂತೆ ಆಗುತ್ತದೆ ಗ್ರಂಥಾಲಯ ಅನ್ನುವುದಕ್ಕಿಂತ ಸರಸ್ವತಿ ದೇವಾಲಯ ಅನ್ನಬೇಕಾಗುತ್ತದೆ. ನಾನೂ ಸಹ ಶಾಸಕ ಆದ ಸಂದರ್ಭದಲ್ಲಿ ಈ ಗ್ರಾಮಕ್ಕೆ ಅನುದಾನ ನೀಡಿ ಗ್ರಾಮ ಅಭಿವೃದ್ಧಿಪಡಿಸಿದ್ದೇನೆ ಎಂದು ತಿಳಿಸಿದ ಅವರು, ಈ ಗ್ರಂಥಾಲಯಕ್ಕೆ ನನ್ನ ವೈಯಕ್ತಿಕ ಒಂದು ಲಕ್ಷ ಹಣವನ್ನು ಕೊಡುತ್ತೇನೆ ಎಂದು ತಿಳಿಸಿದರು.

ರಾಯಚೂರು ಜಿಲ್ಲಾ ಎಎಸ್ಪಿ ಶಿವಕುಮಾರ್ ಮಾತನಾಡಿ, ಶಿಕ್ಷಣ ದಿಂದ ಮಾತ್ರ ನಮ್ಮ ಅಭಿವೃದ್ಧಿ ಸಾಧ್ಯ.ಗ್ರಾಮದ ಮಕ್ಕಳು ಗ್ರಂಥಾಲಯವನ್ನು ಸದುಪಯೋಗ ಪಡಿಸಿಕೊಂಡು ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಕರೆ ನೀಡಿದರು.

ಸಂಘದ ಅಧ್ಯಕ್ಷ ನಾಗೇಂದ್ರಪ್ಪ, ಡಾ. ಪ್ರಕಾಶ್, ತಿಮ್ಮಣ್ಣ, ಹನುಮಂತಪ್ಪ, ರಮೇಶ್ ಶ್ರೀನಿವಾಸ್ ಮುಂತಾದವರು ಇದ್ದರು.

# ಸಂವಿಧಾನ ಮೂಲೆಗುಂಪು ಮಾಡುವ ಕುತಂತ್ರ ನಡೆದಿದೆ

## ಹರಪನಹಳ್ಳಿ ಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಎಂ.ವಿ.ಅಂಜಿನಪ್ಪ

ಹರಪನಹಳ್ಳಿ,ಡಿ. 8 - ದೇಶದಲ್ಲಿ ಸಂವಿಧಾನವನ್ನು ಮೂಲೆ ಗುಂಪು ಮಾಡುವ ಕುತಂತ್ರ ನಡೆಯುತ್ತಿದ್ದು, ಸಂವಿಧಾನ ಉಳಿಸುವ ಕೆಲಸವನ್ನು ಎಲ್ಲರೂ ಮಾಡಬೇಕಿದೆ ಎಂದು ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ ಹೇಳಿದ್ದಾರೆ.

ಪಟ್ಟಣದ ಸ.ಪ.ಪೂ ಕಾಲೇಜಿನಲ್ಲಿ ಜನದನಿ ಸಾಹಿತ್ಯ ವೇದಿಕೆ ಆಯೋಜಿಸಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬದುಕನ್ನು ಕಟ್ಟಿಕೊಳ್ಳಲು ಅಂಬೇಡ್ಕರ್‌ರವರು ಸಂವಿಧಾನ ಕೊಟ್ಟರು, ಸಂವಿಧಾನ ಜಾರಿಯಾದ ನಂತರ ನಿಜವಾದ ಸ್ವಾತಂತ್ರ್ಯ ಸಿಕ್ಕಿದೆ. ಸಂವಿಧಾನ ಇಲ್ಲದಿದ್ದರೆ ನೆಮ್ಮದಿಯಿಂದ ಬದುಕಲು ಆಗುತ್ತಿರಲಿಲ್ಲ. ಹಾಗಾಗಿ ಸಂವಿಧಾನವನ್ನು ಎಲ್ಲರೂ ಗೌರವಿಸಬೇಕು ಎಂದು ತಿಳಿಸಿದರು.



ಧಾರವಾಡದ ಪ್ರಗತಿಪರ ಚಿಂತಕ ಬಸವರಾಜ ಸೂಳಿಬಾವಿ ಮಾತನಾಡಿ, ಶಿಕ್ಷಣ ಒಂದು ವರ್ಗಕ್ಕೆ ಸೀಮಿತವಾದ ಕಾಲದಲ್ಲಿ ಎಲ್ಲರಿಗೂ ಶಿಕ್ಷಣ ಸಿಗಬೇಕು ಎಂದು ಬಲವಾಗಿ ಪ್ರತಿಪಾದಿಸಿದವರು ಡಾ.ಅಂಬೇಡ್ಕರ್. ಸಂವಿಧಾನದ ಮುಂದೆ ಯಾರೂ ಕನಿಷ್ಠರಲ್ಲ, ಯಾರು ಶ್ರೇಷ್ಟರಲ್ಲ, ದೇಶಕ್ಕೆ ಬೇಕಾಗಿರುವುದು ಶಾಲೆಗಳೇ ಹೊರತು ದೇವಾಲಯಗಳಲ್ಲ ಎಂದ ಅಂಬೇಡ್ಕರ್‌ರವರು ಕೇವಲ ಎಸ್ಸಿ, ಎಸ್ಟಿ ಮೀಸಲಾತಿಗಷ್ಟೇ ಸಂಬಂಧಪಟ್ಟವರಲ್ಲ ಎಂದು ತಿಳಿಸಿದರು.

ಸಾಹಿತಿ ಇಸ್ಮಾಯಿಲ್ ಎಲಿಗಾರ್ ಮಾತನಾಡಿ, ಅಂಬೇಡ್ಕರ್‌ರವರ ಜೀವನ ಹಾಗೂ ಪರಂಪರೆ ಸರ್ವರಿಗೂ ಆದರ್ಶಪ್ರಿಯವಾದದು, ಸಾಮಾಜಿಕ ಸಮಾನತೆ, ಅಸ್ಪೃಶ್ಯತೆ ನಿವಾರಣೆಗಾಗಿ ಹೋರಾಡಿದ ಮಹಾನ್‌ವ್ಯಕ್ತಿ. ಅವರು ಎಂದೆಂದಿಗೂ ಪ್ರಸ್ತುತ ಎಂದು ಹೇಳಿದರು.

ಪ್ರಾಚಾರ್ಯ ಸಿ.ಬಿ.ವೆಂಕಟೇಶ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕ ಸಿ.ಗಂಗಾಧರ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಇಇ ಎಲ್.ಕುಬೇಂದ್ರನಾಯ್ಕ, ಸಾಹಿತಿ ಸುಭದ್ರಮ್ಮ ಮಾಡ್ಲಗೇರಿ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಟಿ.ವೆಂಕಟೇಶ, ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಸಂಗಪ್ಪನವರ್, ದೈಹಿಕ ಶಿಕ್ಷಣ ಪರಿವೀಕ್ಷಕ ಷಣ್ಮುಖಪ್ಪ, ರಾಜಶೇಖರ ಬಣಕಾರ, ಹುಲಿಕಟ್ಟಿ ಚಂದ್ರಪ್ಪ, ಮೈದೂರು ರಾಮಣ್ಣ, ಚಿಕ್ಕೇರಿ ಬಸಪ್ಪ, ಉಪನ್ಯಾಸಕ ಹಾಲಪ್ಪ, ಶೇಖರನಾಯ್ಕ, ಸಾಹಿತಿ ಡಿ.ರಾಮನಮಲಿ, ಎಚ್.ಎಂ.ಸಂತೋಷ, ಮಾಲತೇಶ ಮರಿಗೌಡ, ಬಿ.ಎಚ್.ಚಂದ್ರಪ್ಪ, ಅರ್ಜುನ ಪರಸಪ್ಪ, ಎಲ್.ಮಂಜಾನಾಯ್ಕ, ಎನ್. ಶಂಕರ್, ಗುಡಿಹಳ್ಳಿ ಹಾಲೇಶ, ಎನ್.ಜಿ. ಬಸವರಾಜ ಹಾಗೂ ಇತರರು ಉಪಸ್ಥಿತರಿದ್ದರು.

# ಜೈನ್ ಕಾಲೇಜಿನಲ್ಲಿ ಗ್ರ್ಯಾಜುಯೇಷನ್ ಡೇ




ದಾವಣಗೆರೆ, ಡಿ. 8- ಜೈನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಸಕ್ತ ಶೈಕ್ಷಣಿಕ ವರ್ಷದ ಗ್ರ್ಯಾಜುಯೇಷನ್ ಡೇ ಸಮಾರಂಭವನ್ನು ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿತ್ತು. ಡಾ. ಎನ್. ಮಧುಕೇಶ್ವರ ಡೀನ್ ಆಕಾಡೆಮಿಕ್ಸ್ ಸ್ವಾಗತದೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಡಾ. ಸುರೇಶ್ ಹೆಚ್.ಜಂಗಮಶೆಟ್ಟಿ, ಸಂಜೀವ್ ಎಂ. ಬಾಗೇವಾಡಿ ಮಾತನಾಡಿ, 2024ರ ಬ್ಯಾಚ್ ಅನ್ನು ಉದ್ದೇಶಿಸಿ, ಪಾಲಕರು ಮತ್ತು ಅಧ್ಯಾಪಕರನ್ನು ಅಭಿನಂದಿಸಿ, ಕಲಿಕೆಯನ್ನು ನಿಲ್ಲಿಸಬೇಡಿ, ಕಲಿಯುವುದನ್ನು ಮುಂದುವರೆಸಿ ಮತ್ತು ಕೆಲಸ ಮಾಡುವ ಮನೋಭಾವ ಮತ್ತು ಕೌಶಲ್ಯವನ್ನು ಬೆಳೆಸಿಕೊಳ್ಳಿ. ದೇಶದ ಪ್ರಗತಿಯಲ್ಲಿ ಇಂಜಿನಿಯರ್‌ಗಳ ಪಾತ್ರ ಬಹುಮುಖ್ಯವಾಗಿದೆ ಹಾಗು ನೀವು ಬೆಳೆಯುವುದರ ಜೊತೆಗೆ ಕಾಲೇಜು ಮತ್ತು ಪೋಷಕರಿಗೆ ಗೌರವ ತರುವ ನಾಗರಿಕರಾಗಬೇಕೆಂದು ತಿಳಿಸಿದರು.


ಕಾಲೇಜಿನ ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್, ಕಾರ್ಯಕ್ರಮದ ಸಂಚಾಲಕ ಡಾ. ಸಂತೋಷ್ ಎಂ. ನೇಜಕರ್, ಸಂಯೋಜಕ ಡಾ. ನಂದೀಶ್ ಬಿ.ಎಂ. ಮತ್ತು ಡಾ. ಪಿ.ಎಸ್. ಪ್ರೀತಾ ಮತ್ತು ಇತರರು ಉಪಸ್ಥಿತರಿದ್ದರು.

# ಮಹಿಳಾ ವೇಟ್‌ಲಿಫ್ಟರ್‌ಗೆ ಲೈಂಗಿಕ ಕಿರುಕುಳ : ದೂರು

ಪಾಟ್ನಾ, ಡಿ.8- ಮಹಿಳಾ ವೇಟ್ ಲಿಫ್ಟರ್‌ಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಬಿಹಾರ ವೇಟ್ ಲಿಫ್ಟರ್ಸ್ ಅಸೋಸಿಯೇಷನ್‌ನ ಮಾಜಿ ಪದಾಧಿಕಾರಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಪಾಟ್ನಾದ ಪಾಟಲಿಪುತ್ರ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿರುವ ಸಂಘದ ಕಚೇರಿಯಲ್ಲಿ ಶನಿವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಘದ ಕಚೇರಿಯೊಳಗೆ ಮಾಜಿ ಅಧಿಕಾರಿ ತನ್ನ ಮೇಲೆ ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ್ದಾರೆ ಎಂದು ಆರೋಪಿಸಿ, ಮಹಿಳಾ ವೇಟ್‌ಲಿಫ್ಟರ್ ಕಂಕರ್‌ಬಾಗ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸಂತ್ರಸ್ತೆ ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸಲಾಗುತ್ತಿದೆ ಎಂದು ಕಂಕರ್‌ಬಾಗ್‌ನ ಎಸ್‌ಎಚ್‌ಒ ನೀರಜ್ ಕುಮಾರ್ ಠಾಕೂರ್ ತಿಳಿಸಿದ್ದಾರೆ.

## ಹೆಚ್ಡಿಕೆ ಅಭಿನಂದನಾ ಸಮಾರಂಭ ಮುಂದೂಡಿಕೆ



ಮದ್ದೂರು, ಡಿ.8- ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿಯವರ ಜನ್ಮದಿನದ ಅಂಗವಾಗಿ ಮಂಡ್ಯ ನಗರದಲ್ಲಿ ಇದೇ ದಿನಾಂಕ 15ರಂದು ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ತಿಳಿಸಿದರು. ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಮಂಡ್ಯ ನಗರದಲ್ಲಿ ದಿನಾಂಕ 20ರಿಂದ 22ರವರೆಗೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿರುವುದರಿಂದ ದಿನಾಂಕ 15ರಂದು ಅಭಿನಂದನಾ ಸಮಾರಂಭ ನಡೆಸಿದರೆ ಗೊಂದಲ ಉಂಟಾಗುತ್ತದೆ, ಕಾರ್ಯಕ್ರಮವನ್ನು ಮುಂದೂಡಿ ಎಂದು ಸ್ವತಃ ಎಚ್.ಡಿ.ಕುಮಾರಸ್ವಾಮಿಯವರೇ ಸೂಚನೆ ಕೊಟ್ಟ ಮೇರೆಗೆ ಈ ನಿರ್ಧಾರ ಕೈಗೊಂಡಿದ್ದೇವೆ ಎಂದು ತಿಳಿಸಿದರು.

ಸಮಾರಂಭ ಮುಂದೂಡಲು ಬೇರೆ ಯಾವ ಕಾರಣವೂ ಇಲ್ಲ. ಕನ್ನಡ ಸಾಹಿತ್ಯ ಸಮ್ಮೇಳನ ಮುಗಿದ ಬಳಿಕ ಸಮಾರಂಭ ಮಾಡಲಿದ್ದೇವೆ ಎಂದು ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

## ಎಲೆಬೇತೂರಿನಲ್ಲಿ ಇಂದು ಶ್ರೀ ಸವಗದ್ದಿಗೆ ಸಂಗಮೇಶ್ವರ ಮಹಾಸ್ವಾಮಿ ಕಾರ್ತಿಕ

ದಾವಣಗೆರೆ ತಾಲ್ಲೂಕಿನ ಎಲೆಬೇತೂರು ಗ್ರಾಮದ ಶ್ರೀ ಸವಗದ್ದಿಗೆ ಸಂಗಮೇಶ್ವರ ಮಹಾಸ್ವಾಮಿ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ ನಡೆಯಲಿದೆ. ಬೆಳಿಗ್ಗೆ ಶ್ರೀ ಸವಗದ್ದಿಗೆ ಸಂಗಮೇಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಮಂಗಳಾರತಿ ನಡೆಯಲಿದೆ. ಸಂಜೆ 6.30 ಕ್ಕೆ ಮಹಾಮಂಗಳಾರತಿ, ಕಾರ್ತಿಕ ಹಚ್ಚುವುದು, ಫಳಾರ ವಿನಿಯೋಗ ನಡೆಯಲಿದೆ.

## ನಗರದ ಈಶ್ವರ-ವಿನಾಯಕ ದೇವಸ್ಥಾನದಲ್ಲಿ ಇಂದು ಕಾರ್ತಿಕ

ಶಿವಕುಮಾರ ಸ್ವಾಮಿ ಬಡಾವಣೆಯ ಈಶ್ವರ ವಿನಾಯಕ ದೇವಸ್ಥಾನದಲ್ಲಿ ಕಾರ್ತಿಕೋತ್ಸವದ ಪ್ರಯುಕ್ತ ಸಹಸ್ರ ದೀಪೋತ್ಸವ ಇಂದು ನಡೆಯಲಿದೆ.

# ಜ್ಞಾನದ ಬೆಳಕು ನೀಡಿದ ವಿಶ್ವಬಂಧು ಮರುಳಸಿದ್ಧರು

**(3ನೇ ಪುಟದಿಂದ)** ಲೋಕದಲ್ಲಿನ ಸಕಲ ಜೀವಿಗಳ ಕಲ್ಯಾಣಕ್ಕಾಗಿ ಲೋಕಸಂಚಾರ ಮಾಡಿ, ದೇಶ ಪರ್ಯಟನೆಯ ನಂತರ ತನ್ನ ಜನ್ಮ ಭೂಮಿಯಾದ ಕಗ್ಗಲ್ಲುಪುರಕ್ಕೆ ಮರಳಿ ಬಂದು ಲೋಕ ಕಲ್ಯಾಣಕ್ಕೋಸ್ಕರ ಸದ್ಧರ್ಮ ಪೀಠ ಸ್ಥಾಪನೆಗಾಗಿ ತನ್ನ ಸಾಕು ತಂದೆ ಬಾಚಣ್ಣಗೌಡರಲ್ಲಿ ಭೂಮಿ ಕೇಳುತ್ತಾನೆ. ಆಗ ಬಾಚಣ್ಣಗೌಡನು ನಿನಗೆ ಬೇಕಾದ ಭೂಮಿಯನ್ನು ತೆಗೆದುಕೊಳ್ಳಬಹುದೆಂದು ಹೇಳುತ್ತಾನೆ. ಆಗ ಮರುಳಸಿದ್ದನು ಉಜ್ಜಯಿನಿಯಲ್ಲಿ ಒಂಭತ್ತು (9) ಕಡೆ ಪಾದವಿರಿಸಿ, ಈ ಮಧ್ಯದ ಭೂಮಿ ಬೇಕೆಂದು ಪಡೆದುಕೊಂಡು, ಅಲ್ಲಿ ಒಂದು ಪೀಠವನ್ನು ಸ್ಥಾಪನೆ ಮಾಡುತ್ತಾನೆ.

ನಂತರ ವಿಶ್ವಬಂಧು ಮರುಳಸಿದ್ದನು ತೆಲುಗುಬಾಳಿಗೆ ಬಂದು ಅಲ್ಲಿ ವ್ಯವಸಾಯ ಕಾರ್ಯದಲ್ಲಿ ತೊಡಗಿದ್ದ 5 ಜನ ಸಹೋದರರಲ್ಲಿ ಕಿರಿಯನು ಮೂಕನು ಆಗಿದ್ದ ಸಿದ್ದನನ್ನು ಕರೆದು ಮಾತನಾಡಿಸುತ್ತಾನೆ. ಅಲ್ಲಿಯವರೆಗೂ ಮಾತನಾಡದೆ ಮೂಕ ಆಗಿದ್ದ ಸಿದ್ದನು ಆಗ ಮಾತನಾಡುತ್ತಾನೆ. ಆ ತಕ್ಷಣವೇ ತೆಲುಗುಬಾಳು ಸಿದ್ದನಿಗೆ ಶಿವದೀಕ್ಷೆ ಕೊಟ್ಟು, ಸಿದ್ದಯ್ಯ ಎಂದು ನಾಮಕರಣ ಮಾಡಿ, ಉಜ್ಜಯಿನಿಯಲ್ಲಿ ಸ್ಥಾಪಿಸಿದ್ದ ಸದ್ಧರ್ಮ ಪೀಠಕ್ಕೆ ಮಾಘ ಶುದ್ಧ ಹುಣ್ಣಿಮೆಯಂದು ತೆಲುಗುಬಾಳು ಸಿದ್ದಯ್ಯನನ್ನು ಈ ಪೀಠದ ಮೇಲೆ ಕುಳ್ಳಿರಿಸಿ ತರಳಬಾಳು ಎಂದು ಹರಸಿ ಆಶೀರ್ವದಿಸು ತ್ತಾನೆ. ಅಂದಿನಿಂದ ಪ್ರಾರಂಭವಾದ ತರಳಬಾಳು ಗುರು ಪರಂಪರೆಯವರು ಶ್ರೀ ವಿಶ್ವಬಂಧು ಮರುಳಸಿದ್ದನ ತತ್ವಗಳನ್ನು ಪ್ರಚಾರ ಮಾಡುತ್ತಾ ಬರುತ್ತಿದ್ದಾರೆ. ಶ್ರೀ ವಿಶ್ವಬಂಧು ಮರುಳಸಿದ್ದನ ವ್ಯಕ್ತಿತ್ವ, ಹೋರಾಟ, ಒಂದೊಂದು ದಿಟ್ಟ ಹೆಜ್ಜೆಗಳೂ ಒಂದೊಂದು ಧೀರೋದಾತ್ತ ತತ್ವದ ಹಿನ್ನೆಲೆಯನ್ನು ಸಾರುತ್ತವೆ, ಅಪಾರ ಅನುಭವ ರಸಾಯನವನ್ನೇ ತೋರುತ್ತವೆ. ಹೀಗೆ ಸಕಲ ಜೀವರಾಶಿಗಳ ಕಲ್ಯಾಣಕ್ಕಾಗಿ ಹೋರಾಟ ಮಾಡಿ ಮನುಕುಲದ ಗುರುವಾದ ಶ್ರೀ ತರಳಬಾಳು ಪೀಠದ ಮೂಲ ಪುರುಷನಾದ ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರನ ದೇವಸ್ಥಾನವನ್ನು ದಾವಣಗೆರೆಯಲ್ಲಿ ನಿರ್ಮಾಣ ಮಾಡಿ, ಪ್ರತೀ ವರ್ಷ ಅದರ ಕಾರ್ತಿಕೋತ್ಸವವನ್ನು ಆಚರಿಸುತ್ತಾ, ಜನತೆಗೆ ಶ್ರೀ ವಿಶ್ವಬಂಧು ಮರುಳಸಿದ್ದನ ಜೀವನ ಚರಿತ್ರೆಯನ್ನು, ತತ್ವಗಳನ್ನು, ವಿಚಾರಗಳನ್ನು ಉಣಬಡಿಸುತ್ತಾ ಬಂದಿರುವ ದಾವಣಗೆರೆಯ ಸದ್ಭಕ್ತರಾದ ಕರೇಶಿವಪ್ಪರ ಸಿದ್ದಣ್ಣ, ಮಾಗನೂರು ಸಂಗಮೇಶ್ವರ ಗೌಡರು, ಕೆ.ಜಿ.ಡಿ. ಹಾಲಪ್ಪ, ಡಿ. ಸುರೇಂದ್ರಣ್ಣ, ರಾಮಗೊಂಡನಹಳ್ಳಿ ಜಯಣ್ಣ, ಎಂ. ಬಸವರಾಜಪ್ಪ, ಮುದೇಗೌಡ್ರ ಬಸವರಾಜಣ್ಣ, ಬೇತೂರು ಮಧುಸೂದನಣ್ಣ, ಕಲ್ಪನಹಳ್ಳಿ ನಾಗರಾಜಣ್ಣ, ಮಂಜುಳ ಬಸವಲಿಂಗಪ್ಪ, ಎಂ. ಚಂದ್ರಶೇಖರಯ್ಯ, ಕೆ. ಆರ್. ಜಯದೇವಪ್ಪ, ಶಾಮನೂರು ರಾಮಚಂದ್ರಣ್ಣ, ಆನೆಕೊಂಡದ ಗೌಡ್ರ ರೇವಣಸಿದ್ದಣ್ಣ, ಬೊಮ್ಮೇನಹಳ್ಳಿ ಲಿಂಗರಾಜಣ್ಣ, ಐಗೂರು ಚಂದ್ರಶೇಖರಣ್ಣ, ಬಾಡಾ ಸೋಮಶೇಖರಣ್ಣ, ಶ್ಯಾಗಲೆ ಪುಷ್ಪಾ ಮಲ್ಲಿಕಾರ್ಜುನಪ್ಪ, ವಿ. ಶಿವಮೂರ್ತಯ್ಯ, ಎಂ. ಬಸವರಾಜಪ್ಪ, ಬಿ. ಎಸ್. ರಮೇಶಣ್ಣ, ಕಾಕನೂರು ಪ್ರಭಣ್ಣ, ನಾಗರಕಟ್ಟೆ ಪ್ರಕಾಶಣ್ಣ, ಶಿವನಳ್ಳಿ ರೇವಣ್ಣ, ಬುಳ್ಳಾಪುರದ ಸಿದ್ದೇಶಣ್ಣ, ಇನ್ನು ಮುಂತಾದ ಸದ್ಭಕ್ತರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ..

ಶ್ರೀ ವಿಶ್ವಬಂಧು ಮರುಳಸಿದ್ದನ 17ನೇ ಕಾರ್ತಿಕೋತ್ಸವದ ಪ್ರಯುಕ್ತ ಎಲ್ಲಾ ಸದ್ಭಕ್ತರ ಪರವಾಗಿ ಭಕ್ತಿಪೂರ್ವಕ ನಮನಗಳು.

# ವಿಕಲಚೇತನರಿಗೆ ತ್ರಿಚಕ್ರ ವಾಹನ ವಿತರಣೆ



ದಾವಣಗೆರೆ, ಡಿ.8- ವಿಕಲಚೇತನರಿಗೆ ಸರ್ಕಾರಿ ಸೌಲಭ್ಯ ಒದಗಿಸುವ ಸಂದರ್ಭದಲ್ಲಿ ಹಣ ವಸೂಲಿ ಮಾಡುವುದು ಮತ್ತು ಸೌಲಭ್ಯ ತಲುಪಿಸಲು ವಿಳಂಬ ಮಾಡುವುದು ನನ್ನ ಗಮನಕ್ಕೆ ಬಂದರೆ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೇಲಾಧಿಕಾರಿಗಳಿಗೆ ಸೂಚಿಸುತ್ತೇನೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಅಂಗವಿಕಲರಿಗೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ವತಿಯಿಂದ ನಗರದ ಹಳೇ ಪ್ರವಾಸಿ ಮಂದಿರದಲ್ಲಿ ಭಾನುವಾರ ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ 23 ಅರ್ಹ ಫಲಾನುಭವಿಗಳಿಗೆ ತ್ರಿಚಕ್ರ ವಾಹನ ವಿತರಿಸಿ ಅವರು ಮಾತನಾಡಿದರು.

ವಿವಿಧ ಯೋಜನೆಗಳ ಮೂಲಕ ಸರ್ಕಾರ ಕೋಟ್ಯಂತರ ರೂ.ಗಳನ್ನು ನಾಗರಿಕರಿಗಾಗಿ ವ್ಯಯ ಮಾಡುತ್ತದೆ. ಈ ನಿಟ್ಟಿನಲ್ಲಿ ವಿಕಲಚೇತನರಿಗೆ ಪಿಂಚಣಿ, ವೃದ್ಧರಿಗೆ ವೃದ್ಧಾಪ್ಯ ವೇತನ, ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಹಾಗೂ ಸಾಲ ಸೌಲಭ್ಯ ಸೇರಿದಂತೆ ಇತರೆ ಸರ್ಕಾರಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಅನುಕೂಲ ಮಾಡುವಂತೆ ಸೂಚಿಸಿದರು.

ಸರ್ಕಾರಿ ಸೌಲಭ್ಯ ಕಲ್ಪಿಸಲು ಫಲಾನುಭವಿಗಳಿಂದ ಹಣ ವಸೂಲಿ ಮಾಡಲಾಗುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿವೆ. ಈ ರೀತಿ ಆಗದಂತೆ ಅಧಿಕಾರಿಗಳು ಸೌಲಭ್ಯ ಕಲ್ಪಿಸಬೇಕೆಂದು ತಾಕೀತು ಮಾಡಿದರು.

ಈ ವೇಳೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಡಾ.ಕೆ.ಕೆ.ಪ್ರಕಾಶ್, ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ. ನಾಗರಾಜ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಡಿ. ತಿಪ್ಪಣ್ಣ ಕತ್ತಲಗೆರೆ, ಆನಗೋಡು ಕರಿಬಸಪ್ಪ, ದಾಗಿನಕಟ್ಟೆ ಚಂದ್ರಣ್ಣ, ಮರಿಯಮ್ಮನಹಳ್ಳಿ ಅಂಜಿನಪ್ಪ, ಕಾಂಗ್ರೆಸ್ ಮುಖಂಡರು ಹಾಗೂ ಫಲಾನುಭವಿಗಳಿದ್ದರು.

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ 120 ಅಡಿ ರಸ್ತೆ ಹಿಂಭಾಗ 40x60 ಸೌತ್ 40 ಅಡಿ ರಸ್ತೆಗೆ
ಓನರ್ : 96633 35235
ಮಧ್ಯವರ್ತಿಗಳಿಗೆ ಅವಕಾಶ ಇಲ್ಲ

**WANTED**
Banking Sector Tele Caller (Female Only)
Qualification : Any Degree
81508 12961
Interview Time : 11AM

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯ ಪಕ್ಕ, ಗೀತಂ ಕಾಲೇಜ್ ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x40 ಪೂರ್ವ, 28x30 ಪಶ್ಚಿಮ ಅಕ್ಕ-ಪಕ್ಕ 60 ಅಡಿ ರಸ್ತೆಗೆ 30x40 ಪಶ್ಚಿಮ, 30x50 ಪಶ್ಚಿಮ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಸೈಟ್ ಮಾರಾಟಕ್ಕಿದೆ**
50x80 ಪಶ್ಚಿಮಾಭಿಮುಖ ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ.
99008 92750
98441 16813

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಮನೆಗಳು ಲೀಸ್‌ಗೆ ಇವೆ**
ದಾವಣಗೆರೆ ಹೊಸ ಕೋರ್ಟ್ ಹತ್ತಿರ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್‌ನಲ್ಲಿ ಒಂದು ಬೆಡ್ ರೂಂನ 2 ಮನೆಗಳು ಲೀಸ್‌ಗೆ ಲಭ್ಯವಿದೆ. ಸಂಪರ್ಕಿಸಿ:
63660 20922

**TUITIONS**
CBSE / ICSE Boards Class 8th, 9th, 10th
CRASH COURSES FOR NEET / CET / IIT - JEE PUC I / PUC II / PCMB
NEET Long Term / Supplementary Exams
97398 65711, 94822 44114

**WANTED**
SS Distributors
Mineral Water and Beverages
Male candidate for sales and marketing. Male and Female candidate for accounts. Minimum 2 years of expierience. Davanagere.
94496 02786, 99808 96782

**5 BHK ಮನೆ ಬಾಡಿಗೆಗಿದೆ**
# 466/9 ರವಿ ನಿಲಯ, 4ನೇ ಮೇನ್, 7ನೇ ಕ್ರಾಸ್, ಎಸ್.ಎಸ್.ಲೇಔಟ್ 'ಬಿ' ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ, ದಾವಣಗೆರೆ.
ಜಿ.ಕೆ. ಉಮಾದೇವಿ
90082 79535, 97421 68237

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ Nurse. ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**SITE FOR SALE**
30x40 North Facing, Near Daivik Moti Layout, Jangama Layout, Dvg.
K.M. Chandraiah
83101 56049

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಗುಮಾಸ್ತರು ಬೇಕು**
ಬೆಳ್ಳಿ - ಬಂಗಾರದ ಅಂಗಡಿಗೆ ಗುಮಾಸ್ತರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ :
98444 44772

**ಮನೆಗೊಂದು ಮರ ಊರಿಗೊಂದು ವನ**

**ಬೇಕಾಗಿದ್ದಾರೆ**
ಹೊಸದಾಗಿ ಪ್ರಾರಂಭವಾಗುತ್ತಿರುವ ಹೋಂ ಅಪ್ಲೈಯನ್ಸಸ್ ಶಾಪ್‌ಗೆ ಕೆಲಸ ಮಾಡಲು
* ಸೇಲ್ಸ್ ಗರ್ಲ್ಸ್ & ಬಾಯ್ಸ್
* ಅಕೌಂಟ್ಸ್ * ಟೆಲಿಕಾಲರ್ಸ್
ಅನುಭವವುಳ್ಳವರಿಗೆ ಪ್ರಥಮ ಆದ್ಯತೆ
ಸ್ಥಳ : ಹರಿಹರ.
77603 10603
99648 75861

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**REQUIRED**
Accountant for Construction office
minimum 4 to 5 years experience in GST & Tally
8050222047, 8951938228

**BOYS REQUIRED**
Rs 15000 per month
CLEANING WORK
Contact : 9620283870
94488 86026,94495 80761

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**ಗೀರ್ ಹಸುಗಳು ಮಾರಾಟಕ್ಕಿವೆ**
ಸ್ಥಳ: ಶ್ರೀ ನಿಧಿ ಫಾರ್ಮ್ ಹೌಸ್ ಸಿದ್ದಾಪುರ, ಹಲವಾಗಲು
ಸಂಪರ್ಕಿಸಿ:
89707 77554

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888

**FLAT FOR LEASE**
3 BHK, Sqft : 1888
AM Apartment
Nainika Prime Rose
Vidyanagar Last city bus stop Davangere.
89519 38228, 80502 22181

**ARTIFICIAL INTELLIGENCE COURSE (AI)**
Class 6 Std to 10 Std
Bruit Solutions
Nijalingappa Badavane
96201 53806

**SITE FOR SALE**
Banashankari Badavane 30x50 North Facing 40x43 North-East Corner, Vajapayee Badavane 40x43 North west Corner, Jayanagara 32x66 East near 50 Ft Road.
Guruprasad 85536 19616


**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿರಿ :
94484 39639

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**ಬೇಕಾಗಿದ್ದಾರೆ**
ಗೋಲ್ಡ್ ಅಂಗಡಿಗೆ ಮಹಿಳಾ ಮ್ಯಾನೇಜರ್ ಮತ್ತು ಮಹಿಳಾ PA ಬೇಕಾಗಿದ್ದಾರೆ
90351 50000

# ನಗರದ ವಿಶ್ವಬಂಧು ಮರುಳಸಿದ್ಧೇಶ್ವರ ದೇವಸ್ಥಾನದಲ್ಲಿ ಇಂದು ಸಹಸ್ರ ದೀಪೋತ್ಸವ





ತರಳಬಾಳು ಬಡಾವಣೆಯ ಶ್ರೀ ಶಿವಕುಮಾರ ಸ್ವಾಮಿ ಮಹಾಮಂಟಪದಲ್ಲಿರುವ ಶ್ರೀ ವಿಶ್ವಬಂಧು ಮರಳಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಇಂದು ಸಂಜೆ 6 ಗಂಟೆಗೆ ಸಿರಿಗೆರೆಯ ತರಳಬಾಳು ಬೃಹನ್ಮಠದ ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ನಂದಾದೀಪ ಬೆಳಗಿಸುವುದರ ಮೂಲಕ ಕಾರ್ತಿಕೋತ್ಸವದ ಉದ್ಘಾಟನೆ ನೆರವೇರಿಸಲಿದ್ದಾರೆ. ನಂತರ, ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದ ಆವರಣದಲ್ಲಿರುವ ಶ್ರೀ ವಿಶ್ವಬಂಧು ಮರುಳಸಿದ್ಧೇಶ್ವರ ದೇವಸ್ಥಾನದಲ್ಲಿ ಇಂದು ಸಂಜೆ 6.30ಕ್ಕೆ 17 ನೇ ವರ್ಷದ ಕಾರ್ತಿಕೋತ್ಸವದ ಪ್ರಯುಕ್ತ ಸಹಸ್ರ ದೀಪೋತ್ಸವ ಹಾಗೂ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ. ಸಂಜೆ 6 ಕ್ಕೆ ತರಳಬಾಳು ಬಡಾವಣೆಯ ಶಿವಕುಮಾರಸ್ವಾಮಿ ಮಹಾಮಂಟಪದಲ್ಲಿರುವ ಶ್ರೀ ಮರುಳಸಿದ್ದೇಶ್ವರ ದೀಪೋತ್ಸವ ಕಾರ್ಯಕ್ರಮಕ್ಕೆ ಜಗದ್ಗುರುಗಳು ಚಾಲನೆ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣವರ, ಜಿಲ್ಲಾಧಿಕಾರಿ ಡಾ. ಜಿ.ಎಂ.ಗಂಗಾಧರ ಸ್ವಾಮಿ, ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್.ಆರ್. ಬಸವ ರಾಜಪ್ಪ ಉಪಸ್ಥಿತರಿರುವರು.

ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನ ಕಾರ್ತಿಕ ಸಮಿತಿ ಅಧ್ಯಕ್ಷ ಹೆಚ್. ಜಯಣ್ಣ ರಾಮಗೊಂಡನಹಳ್ಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ನಂತರ ಕಲ್ಯಾಣ ಮಂಟಪದಲ್ಲಿ ಸಿರಿಗೆರೆ ತರಳಬಾಳು ಕಲಾ ಸಂಘದಿಂದ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸಿದ್ದವೀರಪ್ಪ ಬಡಾವಣೆಯ ತುಳಸಿ ಮಹಿಳಾ ಸಂಘದಿಂದ ಗೋವಿನಹಾಡು (ನೃತ್ಯರೂಪಕ), ಭರತನಾಟ್ಯ, ಮಲ್ಲಕಂಬ, ಮಲ್ಲಿಹಗ್ಗ, ಜಡೆ ಕೋಲಾಟ, ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ.

## ರಾಜ್ಯದಲ್ಲಿ ಆರ್ಥಿಕ ಸಂಕಷ್ಟವಿಲ್ಲ : ಸಿಎಂ ಸಿದ್ದರಾಮಯ್ಯ

ಹುಬ್ಬಳ್ಳಿ, ಡಿ.8- ರಾಜ್ಯದಲ್ಲಿ ಯಾವುದೇ ರೀತಿಯ ಆರ್ಥಿಕ ಸಂಕಷ್ಟವಿಲ್ಲ. ಪ್ರತಿಪಕ್ಷ ಬಿಜೆಪಿ ಸುಳ್ಳು ಹೇಳುವ ಮೂಲಕ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಭಾನುವಾರ ನಗರದ ವಿಮಾನ ನಿಲ್ದಾಣದಲ್ಲಿ ಮಾತನಾಡಿದ ಅವರು, ಈವರೆಗೆ ಸರ್ಕಾರ ಘೋಷಿಸಿರುವ ಯಾವುದೇ ಯೋಜನೆಗಳು ನಿಂತಿಲ್ಲ ಎಂದು ಸ್ಪಷ್ಟಪಡಿಸಿದರು. ಎಲ್ಲವೂ ಸುಸೂತ್ರವಾಗಿ ನಡೆಯುತ್ತಿವೆ.

ಒಂದೆಡೆ ಬಿಜೆಪಿ ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸಿದರೆ, ಇನ್ನೊಂದೆಡೆ ಬೇರೆ ರಾಜ್ಯಗಳಲ್ಲಿ ತಾನೇ ಗ್ಯಾರಂಟಿ ಯೋಜನೆಗಳನ್ನು ಘೋಷಿಸುತ್ತಿದೆ' ಎಂದು ಲೇವಡಿ ಮಾಡಿದರು.

## ಉ.ಕ ಚರ್ಚೆಗೆ ಪ್ರಾಶಸ್ತ್ಯ

**(1ನೇ ಪುಟದಿಂದ)** ಸಭೆಯಲ್ಲಿ ಅಧಿವೇಶನದ ರೂಪು ರೇಷಗಳ ಕುರಿತಾಗಿ ಸಮಗ್ರವಾಗಿ ಚರ್ಚಿಸಿ ತೀರ್ಮಾನಕ್ಕೆ ಬರುತ್ತೇವೆ ಎಂದರು.

ಕಲಾಪಕ್ಕೆ ಗೈರು ಹಾಜರಾಗುವ ಸದಸ್ಯರಿಗೆ ದಂಡ ವಿಧಿಸುತ್ತೀರಾ' ? ಎಂಬ ಪ್ರಶ್ನೆಗೆ, 'ಈ ಬಗ್ಗೆ ಚಿಂತನೆ ಮಾಡಿಲ್ಲ. ಮುಂದೆ ನೋಡೋಣ' ಎಂದರು. ಈ ಅಧಿವೇಶನದಲ್ಲಿ 8,500 ಮಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಪೈಕಿ 6 ಸಾವಿರ ಪೊಲೀಸರೇ ಇದ್ದಾರೆ. ಜಿಲ್ಲಾಧಿಕಾರಿ ನೇತೃತ್ವದಲ್ಲಿ ರಚಿಸಿರುವ 10 ಸಮಿತಿಗಳು ಅಧಿವೇಶನ ಕರ್ತವ್ಯಕ್ಕೆ ಬಂದವರಿಗೆ ವಸತಿ, ಊಟ, ಸಾರಿಗೆ ವ್ಯವಸ್ಥೆ ಕಲ್ಪಿಸುತ್ತಿವೆ. ಪ್ರತಿಭಟನೆ ಮಾಡುವವರಿಗೆ ಎರಡು ಕಡೆ ವ್ಯವಸ್ಥೆ ಮಾಡಿದ್ದೇವೆ. ಮುಖ್ಯದ್ವಾರದಿಂದ ಸೌಧದ ಕಟ್ಟಡದವರೆಗೆ ಬಸ್‌ಗಳ ವ್ಯವಸ್ಥೆಯನ್ನೂ ಕಲ್ಪಿಸಿದ್ದೇವೆ ಎಂದು ತಿಳಿಸಿದರು.

ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಇದ್ದರು.

# ವಾಲ್ಮೀಕಿ ಜಾತ್ರೆ ಯಶಸ್ಸಿಗೆ ಕೈಜೋಡಿಸಲು ಕರೆ

## ಜಗಳೂರಿನಲ್ಲಿ ವಾಲ್ಮೀಕಿ ಪೀಠದ ಶ್ರೀ ಪ್ರಸನ್ನಾನಂದ ಮಹಾಸ್ವಾಮೀಜಿ



ಜಗಳೂರು, ಡಿ. 8 - ರಾಜನಹಳ್ಳಿ ಮಠದಲ್ಲಿ ಫೆ. 8 ಮತ್ತು 9 ರಂದು ನಡೆಯಲಿರುವ 7ನೇ ಮಹರ್ಷಿ ವಾಲ್ಮೀಕಿ ಜಾತ್ರೆಗೆ ತಾಲ್ಲೂಕಿನಿಂದ ಸಮಾಜದ ಬಂಧುಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸುವಂತೆ ರಾಜನಹಳ್ಳಿ ವಾಲ್ಮೀಕಿ ಪೀಠದ ಶ್ರೀ ಪ್ರಸನ್ನಾನಂದ ಮಹಾಸ್ವಾಮೀಜಿ ಕರೆ ನೀಡಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ 7ನೇ ವಾಲ್ಮೀಕಿ ಜಾತ್ರೆಯ ಅಂಗವಾಗಿ ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಒಕ್ಕಲಿಗ, ಲಿಂಗಾಯತ ಸೇರಿದಂತೆ ಸಹೋದರ ಸಮುದಾಯಗಳ ಒಗ್ಗಟ್ಟು, ಸ್ವಾಭಿಮಾನ, ಶೋಷಿತ ವರ್ಗಗಳಿಗೆ ಮಾದರಿಯಾಗಬೇಕು. ಅಂಬೇಡ್ಕರ್ ಅವರ ಸಂವಿಧಾನ ಬದ್ಧ ಹಕ್ಕುಗಳಿಗೆ ಸಂಘಟಿತ ಹೋರಾಟ ಅನಿವಾರ್ಯವಾಗಿದೆ. ಆದ್ದರಿಂದ ವಾಲ್ಮೀಕಿ ಜಾತ್ರೆಯನ್ನು ಸಾಂಸ್ಕೃತಿಕ ಹಬ್ಬವನ್ನಾಗಿಸಿ, ವೈಚಾರಿಕ, ಜನಜಾಗೃತಿ ಮೂಡಿಸುವ ಮೂಲಕ ಪಕ್ಷಾತೀತವಾಗಿ ಒಗ್ಗಟ್ಟು ಪ್ರದರ್ಶಿಸಬೇಕು ಎಂದರು.

ಅಧಿವೇಶನದಲ್ಲಿ ಬೇಡಿಕೆಗಳನ್ನು ಈಡೇರಿಸಲು ಹಕ್ಕೊತ್ತಾಯಿಸಲಾಗುವುದು. ಎಸ್.ಟಿ. ಮೀಸಲು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆಯುವವರಿಗೆ ಕಡಿವಾಣ ಹಾಕಬೇಕಿದೆ ಎಂದು ಹೇಳಿದರು.

ಚುನಾವಣೆಯಲ್ಲಿ ಮತ ಬ್ಯಾಂಕ್‌ಗಾಗಿ ಬಳಕೆ, ನಮ್ಮನ್ನಾಳುವ ಆಡಳಿತ ಸರ್ಕಾರಗಳು ಶೋಷಿತ ಸಮುದಾಯಗಳ ಹೋರಾಟಕ್ಕೆ ವಿಳಂಬ ನೀತಿ ಅನುಸರಿಸುತ್ತಿರುವುದಲ್ಲದೆ. ಕೇವಲ ಚುನಾವಣೆ ಸಂದರ್ಭದಲ್ಲಿ ನಮ್ಮನ್ನು ಎಲ್ಲಾ ಪಕ್ಷಗಳು ಕೇವಲ ಮತ ಬ್ಯಾಂಕ್‌ಗಾಗಿ ಬಳಕೆ ಮಾಡಿಕೊಳ್ಳುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ,'ರಾಜನಹಳ್ಳಿ ಮಠದಲ್ಲಿ ನಡೆದ 4ನೇ ವಾಲ್ಮೀಕಿ ಜಾತ್ರೆ ಅಧ್ಯಕ್ಷನಾಗಿ ಯಶಸ್ಸಿಗೆ ಕಾರಣವಾಗಿರುವೆ. ನನ್ನ ಆಡಳಿತಾವಧಿಯಲ್ಲಿಯೂ ಸದಾ ಸಹಕರಿಸಿರುವೆ. ಕ್ಷೇತ್ರದಲ್ಲಿ ಬಡತನವಿದ್ದರೂ ತಮ್ಮಿಂದ ಸಾಧ್ಯವಿರುವಷ್ಟು ದೇಣಿಗೆಯೊಂದಿಗೆ ಜಾತ್ರೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸುವ ಹೃದಯ ಶ್ರೀಮಂತಿಕೆಯಿದೆ.ತರಳಬಾಳು ಹುಣ್ಣಿಮೆ ಕಾರ್ಯಕ್ರಮ ಮಾದರಿಯಾಗಬೇಕು ಎಂದು ಹೇಳಿದರು.

ಇದೇ ವೇಳೆ ವಾಲ್ಮೀಕಿ ಜಾತ್ರೆಯ ಭಿತ್ತಿ ಚಿತ್ರ ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯ ಕೆ.ಪಿ. ಪಾಲಯ್ಯ , ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ಬಡಯ್ಯ, ಕಾರ್ಯದರ್ಶಿ ವಕೀಲ ತಿಪ್ಪೇಸ್ವಾಮಿ, ವಕೀಲರ ಸಂಘದ ತಾಲ್ಲೂಕು ಅಧ್ಯಕ್ಷ ಮರೇನಹಳ್ಳಿ ಬಸವರಾಜ್, ಮುಖಂಡ ಬಿ. ಲೋಕೇಶ್, ಬಿಸ್ತುವಳ್ಳಿ ಬಾಬು, ರೇವಣ್ಣ, ತಿಮ್ಮಣ್ಣ, ನಿಜಲಿಂಗಪ್ಪ, ಸಿದ್ದಪ್ಪ, ನಾಗರಾಜ್, ಸಾವಿತ್ರಮ್ಮ, ಮಲ್ಲಿಕಾರ್ಜುನ್, ಪಾಪಲಿಂಗಪ್ಪ , ಕೃಷ್ಣಪ್ಪ ಇದ್ದರು.

## ಹರಿಹರದಲ್ಲಿ ಧಾರಕಾರ ಮಳೆ

ಹರಿಹರ, ಡಿ.8- ರಾತ್ರಿ ಹನ್ನೊಂದು ಮೂವತ್ತಕ್ಕೆ ಗುಡುಗು - ಸಿಡಿಲು ಮಿಂಚಿನಿಂದ ನಿಧಾನವಾಗಿ ಆರಂಭವಾದ ಮಳೆ, ನಂತರ ಆರ್ಭಟಿಸಿ ಸುರಿದಿದ್ದು, ಹಲವಾರು ಗಂಟೆಗಳ ಕಾಲ ಧಾರಾಕಾರವಾಗಿ ಸುರಿದಿದೆ. ಇದರಿಂದಾಗಿ ಕೆಲವೊಂದು ತಗ್ಗು ಪ್ರದೇಶಗಳಲ್ಲಿ ವಾಸಿಸುತ್ತಿರುವ ಮನೆಗಳಿಗೆ ನೀರು ನುಗ್ಗಿದ ಪರಿಣಾಮ ಸಾರ್ವಜನಿಕರು ಮಳೆಯ ನೀರನ್ನು ಹೊರಗಡೆ ಹಾಕುವುದಕ್ಕೆ ಶ್ರಮಪಟ್ಟ ಘಟನೆ ನಡೆದಿದೆ.

ಹರಿಹರ ನಗರ, ಗುತ್ತೂರು, ದೀಟೂರು, ಗಂಗನಹರಸಿ, ಹರ್ಲಾಪುರ, ಸಾರಥಿ, ಕುರಬರಹಳ್ಳಿ, ಕರ್ಲಹಳ್ಳಿ, ಪಾಮೇನಹಳ್ಳಿ, ಚಿಕ್ಕಬಿದರಿ, ಕೋಡಿಯಾಲ ಹೊಸಪೇಟೆ ಸೇರಿದಂತೆ, ಇತರೆ ಗ್ರಾಮದಲ್ಲಿ ಇಟ್ಟಿಗೆ ಭಟ್ಟಿಯ ಮಾಲೀಕರು ಇಟ್ಟಿಗೆ ತಯಾರಿಸಲು ಕಣವನ್ನು ಸ್ವಚ್ಛತೆ ಮಾಡಿಸಿಕೊಂಡು ಇಟ್ಟಿಗೆ ತಯಾರಿಸಲು ಮುಂದಾಗಿದ್ದರು. ಆದರೆ, ಸುರಿದ ಮಳೆಯಿಂದಾಗಿ ಮತ್ತೆ ಪೂನಃ ಕಣವನ್ನು ಸ್ವಚ್ಚತೆಯನ್ನು ಮಾಡಿಸಿಕೊಳ್ಳುವಂತಾಗಿದೆ. ಇನ್ನೂ ಕೆಲವು ಇಟ್ಟಿಗೆ ಬಟ್ಟೆಯಲ್ಲಿ ಈಗಾಗಲೇ ಸಿದ್ದತೆ ಮಾಡಿದ್ದ ಇಟ್ಟಿಗೆಗಳು ನೀರಿನಲ್ಲಿ ಕರಗಬಲ್ಲ ಸಾಧ್ಯತೆ ಕೂಡ ಇದ್ದು, ಇದರಿಂದ ಲಕ್ಷಾಂತರ ರೂಪಾಯಿ ನಷ್ಟವನ್ನು ಅನುಭವಿಸುವಂತಾಗಿದೆ.

## 'ಇಂಡಿಯಾ' ನಾಯಕತ್ವದ ಮಮತಾ ಹೇಳಿಕೆ ಬೆಂಬಲಿಸಿದ ಪವಾರ್



ಮುಂಬೈ, ಡಿ.8- ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟದ ನಾಯಕತ್ವವನ್ನು ವಹಿಸಿಕೊಳ್ಳಲು ತಾವು ಸಿದ್ಧವಿರುವುದಾಗಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿರುವುದನ್ನು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಬೆಂಬಲಿಸಿದ್ದಾರೆ.

ಕೊಲ್ಹಾಪುರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಪವಾರ್ ಅವರು, ಟಿಎಂಸಿ ನಾಯಕಿಯು ಸಾಮರ್ಥ್ಯ ಹೊಂದಿದ್ದಾರೆ, ವಿರೋಧ ಪಕ್ಷಗಳ ಮೈತ್ರಿಕೂಟವನ್ನು ಮುನ್ನಡೆಸುವ ತಮ್ಮ ಬಯಕೆಯನ್ನು ವ್ಯಕ್ತಪಡಿಸುವ ಹಕ್ಕು ಅವರಿಗೆ ಇದೆ ಎಂದು ಹೇಳಿದ್ದಾರೆ. ಮುಖ್ಯಮಂತ್ರಿ ಸ್ಥಾನದಲ್ಲಿ ಇದ್ದುಕೊಂಡೇ, ವಿರೋಧ ಪಕ್ಷಗಳ ಮೈತ್ರಿಕೂಟದ ನಾಯಕಿ ಸ್ಥಾನವನ್ನು ನಿಭಾಯಿಸುವ ಸಾಮರ್ಥ್ಯ ತಮಗೆ ಇದೆ ಎಂದು ಮಮತಾ ಕಳೆದ ವಾರ ಹೇಳಿದ್ದರು.

## ಮಾದಿಗ, ಛಲವಾದಿ ಸಮಾಜದ ಪೂರ್ವಭಾವಿ ಸಭೆ ಯಶಸ್ವಿ



ದಾವಣಗೆರೆ, ಡಿ.8- ಇಲ್ಲಿನ ಗಾಂಧಿನಗರದ ಅಂಬೇಡ್ಕರ್ ಭವನದಲ್ಲಿ ಭಾನುವಾರ ಬೆಳಗ್ಗೆ ಡಿಸೆಂಬರ್ 15ರಂದು ನಡೆಯುವ ಜಿಲ್ಲಾ ಮಾದಿಗ ಮತ್ತು ಛಲವಾದಿ ಸಮಾಜದ ಸಮಾವೇಶ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮದ ಪೂರ್ವಭಾವಿ ಸಭೆ ನಡೆಯಿತು.

ಸದಾಶಿವ ಆಯೋಗದ ವರದಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಹಮ್ಮಿಕೊಂಡ ಸಮಾವೇಶ ಹಾಗೂ ಗುರು ರಾಮದಾಸ ಸ್ವಾಮಿ ಅಧ್ಯಾತ್ಮಿಕ ಸೇವಾ ಟ್ರಸ್ಟ್ ವತಿಯಿಂದ ಜರುಗುವ ಸಾಮೂಹಿಕ ವಿವಾಹ ಕಾರ್ಯಕ್ರಮದ ಬಗ್ಗೆ ಸಮಾಜದ ಮುಖಂಡರು ಚರ್ಚೆ ನಡೆಸಿ, ಹಲವು ತೀರ್ಮಾನ ಕೈಗೊಂಡರು ಎಂದು ಸಂಘದ ಅಧ್ಯಕ್ಷ ಬಿ.ಹೆಚ್ ವೀರಭದ್ರಪ್ಪ ಸಭೆಯಲ್ಲಿ ತಿಳಿಸಿದರು.

ಈ ವೇಳೆ ಸಮಾಜದ ಹಿರಿಯ ಮುಖಂಡ ನಿವೃತ್ತ ಎಸ್ಪಿ ರವಿ ನಾರಾಯಣ್, ಪೌರಕಾರ್ಮಿಕರ ಸಂಘದ ಕಾರ್ಯಾಧ್ಯಕ್ಷ ಎಲ್.ಎಂ. ಹನುಮಂತಪ್ಪ, ಹಿರಿಯ ಪತ್ರಕರ್ತ ಏಕಾಂತಪ್ಪ, ಮಾಜಿ ನಗರ ಸಭೆ ಸದಸ್ಯ ದೋಣಿ ನಿಂಗಪ್ಪ, ಪಾಲಿಕೆ ಸದಸ್ಯ ಎಲ್.ಡಿ ಗೋಣೆಪ್ಪ, ಎಸ್, ಮಲ್ಲಿಕಾರ್ಜುನ್, ಹನುಮಂತಪ್ಪ, ಗುಡಪ್ಪ, ಕುಂದುವಾಡ ಮಂಜುನಾಥ್, ಎಂ. ಗುರುಮೂರ್ತಿ, ಎಲ್.ಹೆಚ್. ಸಾಗರ್ ಸೇರಿದಂತೆ ಸಮಾಜದ ಮುಖಂಡರು ಇದ್ದರು.

# ಮೀಸಲಾತಿಗಾಗಿ ಸುವರ್ಣ ಸೌಧಕ್ಕೆ ಮುತ್ತಿಗೆ ಪಂಚಮಸಾಲಿ ವಕೀಲರ ಪರಿಷತ್ ಬೆಂಬಲ

ದಾವಣಗೆರೆ, ಡಿ.8- ಪಂಚಮಸಾಲಿ ಸಮುದಾಯ ಮಕ್ಕಳ ಭವಿಷ್ಯಕ್ಕಾಗಿ 2ಎ ಮೀಸಲಾತಿಗಾಗಿ, ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಶ್ರೀಗಳ ನೇತೃತ್ವದಲ್ಲಿ ನಾಡಿದ್ದು ದಿನಾಂಕ 10ರಂದು ನಡೆಯುವ ಬೆಳಗಾವಿ ಸುವರ್ಣ ಸೌಧಕ್ಕೆ ಟ್ರ್ಯಾಕ್ಟರ್ ಸಮೇತ ಮುತ್ತಿಗೆಗೆ ಕರ್ನಾಟಕ ಲಿಂಗಾಯತ ಪಂಚಮಸಾಲಿ ವಕೀಲರ ಪರಿಷತ್ ಬೆಂಬಲ ಸೂಚಿಸಿದೆ.

ಬೆಳಗಾವಿಯಲ್ಲಿ ನಮ್ಮ ಪರಿಷತ್ ನಡೆಸಿದ ಸಮಾವೇಶದ ವೇಳೆ ಖುದ್ದು ಸಿಎಂ ಸಿದ್ದರಾಮಯ್ಯನವರು ಸ್ವಾಮೀಜಿ ಅವರೊಂದಿಗೆ ಮಾತನಾಡಿ, ಕಾಲಾವಕಾಶ ತೆಗೆದುಕೊಂಡು ಅವರ ಬೆಂಗಳೂರಿನ ಗೃಹ ಕಚೇರಿಯಲ್ಲಿ ಸಭೆ ಕರೆದಿದ್ದರು. ಆದರೆ, ನೀತಿ ಸಂಹಿತೆ ಕಾರಣ ನೀಡಿ ನಮ್ಮ ಬೇಡಿಕೆಗೆ ಸರಿಯಾಗಿ ಸ್ಪಂದಿಸಲಿಲ್ಲ ಎಂದು ಪರಿಷತ್‌ನ ಜಿಲ್ಲಾಧ್ಯಕ್ಷ ಹೆಚ್.ಎಸ್. ಯೋಗೇಶ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

ಈ ಸಮಾಜಕ್ಕೆ ಮೀಸಲಾತಿ ಸಿಗುವವರೆಗೆ ಹೋರಾಟ ನಿರಂತರವಾಗಿರಲಿದೆ ಹಾಗಾಗಿ ಡಿ.10ರಂದು ಶ್ರೀಗಳ ಸಮ್ಮುಖದಲ್ಲಿ 'ಬೆಳಗಾವಿ ಸುರ್ವಣ ಸೌಧಕ್ಕೆ ಟ್ರ್ಯಾಕ್ಟರ್ ಸಮೇತ ಮುತ್ತಿಗೆ ಹಮ್ಮಿಕೊಂಡಿದ್ದು, ಅಂದಿನ ಹೋರಾಟಕ್ಕೆ ಪಂಚಮಸಾಲಿ ಸಮುದಾಯದ 150ಕ್ಕೂ ಅಧಿಕ ವಕೀಲರು ಜಿಲ್ಲೆಯಿಂದ ತೆರಳಲಿದ್ದೇವೆ ಎಂದು ತಿಳಿಸಿದರು.

ಬಿಜೆಪಿ ಸರ್ಕಾರದ ವೇಳೆ 2ಎ ಮೀಸಲಾತಿ ಹೋರಾಟ ಬೆಂಬಲಿಸಿದ್ದ ಲಕ್ಷೀ ಹೆಬ್ಬಾಳ್ಕರ್, ವಿನಯ್ ಕುಲಕರ್ಣಿ, ವಿಜಯಾನಂದ ಕಾಶ್ಯಪ್ಪನವರ್ ಈಗ ಸಿಎಂ ಸಿದ್ದರಾಮಯ್ಯ ಅವರನ್ನು ಮೆಚ್ಚಿಸಲು, ಸಮಾಜದ ಹೋರಾಟ ಹತ್ತಿಕ್ಕುವ ಕೆಲಸ ಮಾಡುತ್ತಿದ್ದಾರೆ. ಇದನ್ನು ನೋಡಿದರೆ, ಇವರಿಗೆಲ್ಲಾ ಅಧಿಕಾರ ಮುಖ್ಯವಾಗಿದೆಯೇ ವಿನಃ ಸಮಾಜದ ಉದ್ಧಾರವಲ್ಲ ಎಂದು ಕಿಡಿಕಾರಿದರು.

ಸಮುದಾಯದ ಮಕ್ಕಳ ಭವಿಷ್ಯಕ್ಕಾಗಿ ಪಂಚಮಸಾಲಿ ಸಮುದಾಯದ ಎಲ್ಲಾ ರಾಜಕಾರಣಿಗಳು ಪಕ್ಷಾತೀತವಾಗಿ ಹೋರಾಟ ನಡೆಸಬೇಕು ಎಂದು ಅವರು ಮನವಿ ಮಾಡಿದರು.

ಈ ವೇಳೆ ಪರಿಷತ್‌ನ ಟಿ.ಆರ್. ರವಿಶಂಕರ್, ಹೆಚ್. ಜಿ. ಬಸವರಾಜ, ವಿನಯಕುಮಾರ್ ಸಾಹುಕಾರ್, ರುದ್ರಗೌಡ ಪಾಟೀಲ್, ಗುರುಮೂರ್ತಿ ಕಾಶೀಪುರ, ಕೊಟ್ರೇಶ್ ಮತ್ತಿಹಳ್ಳಿ, ವನಮಾಲ, ಕತ್ತಲಗೆರೆ ನಾಗರಾಜ್ ಸುದ್ದಿಗೋಷ್ಠಿಯಲ್ಲಿದ್ದರು.

## ಶಾಲಾ ಬಸ್ ಅಪಘಾತ : ವಿದ್ಯಾರ್ಥಿಗಳಿಗೆ ಗಾಯ

ಕಾರವಾರ, ಡಿ.8- ಚಾಲಕನ ನಿಯಂತ್ರಣ ತಪ್ಪಿ ಶಾಲಾ ಪ್ರವಾಸದ ಬಸ್ ಪಲ್ಟಿಯಾಗಿ 50 ವಿದ್ಯಾರ್ಥಿಗಳ ಪೈಕಿ 40ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಗಾಯಗಳಾಗಿರುವಂತಹ ಘಟನೆ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ಗಣೇಶ ಗುಡಿ ಬಳಿ ಘಟನೆ ನಡೆದಿದೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಸೇಂಟ್ ಅಂತೋನಿ ಪೌಢ ಶಾಲೆಯ ವಿದ್ಯಾರ್ಥಿಗಳಿಗೆ ಗಾಯಗಳಾಗಿದ್ದು, ದಾಂಡೇಲಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

3 ಖಾಸಗಿ ಬಸ್ ನಲ್ಲಿ ಶಾಲಾ ವಿದ್ಯಾರ್ಥಿಗಳು ಪ್ರವಾಸಕ್ಕೆ ಬಂದಿದ್ದರು. ಮೌಲಂಗಿ ಬಳಿಯ ಹೋಮ್ ಸ್ಟೇನಲ್ಲಿ ವಿದ್ಯಾರ್ಥಿಗಳು ತಂಗಿದ್ದರು. ಬೆಳಗ್ಗೆ ಜಲಸಾಹಸ ಕ್ರಿಡೆ ಆಡಿ ಮರಳಿ ಬರುವಾಗ ಈ ದುರ್ಘಟನೆ ಸಂಭವಿಸಿದೆ. ತಕ್ಷಣವೇ ಸ್ಥಳೀಯ ಗ್ರಾಮಸ್ಥ ರು ಸೇರಿ, ಬಸ್ಸಿನಲ್ಲಿ ಸಿಲುಕಿಕೊಂಡಿದ್ದ ವಿ ದ್ಯಾರ್ಥಿಗಳನ್ನು ಹೊರತೆಗೆದಿದ್ದಾರೆ. ನಂತರ ಗಾಯಗೊಂಡವರ ನ್ನು ಎರಡು ಆಂಬ್ಯುಲೆನ್ಸ್ ಹಾಗೂ ಇನ್ನಿತರೆ ಖಾಸಗಿ ವಾಹನಗಳಲ್ಲಿ ದಾಂಡೇಲಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಮುಂದುವರೆದಿದೆ.

# ಮುಟ್ಟಿನ ಅವಧಿಯ ನೈರ್ಮಲ್ಯ ನೀತಿ ಪರಿಣಾಮಕಾರಿ ಜಾರಿಗೆ ಕ್ರಿಯಾ ಯೋಜನೆ ಸಲ್ಲಿಸಿ

**ರಾಜ್ಯ ಸರ್ಕಾರಗಳಿಗೆ ಕೇಂದ್ರ ಸೂಚನೆ**


ನವದೆಹಲಿ, ಡಿ.8- ಶಾಲೆಗೆ ಹೋಗುವ ಹೆಣ್ಣುಮಕ್ಕಳ 'ಮುಟ್ಟಿನ ಅವಧಿಯ ನೈರ್ಮಲ್ಯ ಕುರಿತ ರಾಷ್ಟ್ರೀಯ ನೀತಿ'ಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಕ್ರಿಯಾಯೋಜನೆ ಸಲ್ಲಿಸುವಂತೆ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ.

ವಿದ್ಯಾರ್ಥಿನಿಯರಿಗೆ ಕಡಿಮೆ ವೆಚ್ಚದ ಶುಚಿತ್ವದ ವಸ್ತುಗಳು ಲಭ್ಯವಾಗುವಂತೆ ಮಾಡುವುದನ್ನು ಹಾಗೂ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಗುಣಮಟ್ಟದ ನೈರ್ಮಲ್ಯ ವ್ಯವಸ್ಥೆ ಇದೆ ಎನ್ನುವುದನ್ನು ಖಾತರಿಪಡಿಸುವಂತೆ ತಿಳಿಸಿದೆ.

ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಸಮಗ್ರ ಕ್ರಿಯಾಯೋಜನೆ ರೂಪಿಸುವ ಅಗತ್ಯವಿದೆ ಎಂದು ನ.12ರಂದು ಸುಪ್ರೀಂ ಕೋರ್ಟ್ ತಿಳಿಸಿತ್ತು. ಇದರ ಬೆನ್ನಲ್ಲೇ, ಕೇಂದ್ರ ಆರೋಗ್ಯ ಸಚಿವಾಲಯವು ಈ ಸಂಬಂಧ ಕ್ರಿಯಾಯೋಜನೆ ಸಲ್ಲಿಸುವಂತೆ ರಾಜ್ಯಗಳಿಗೆ ಪತ್ರ ಬರೆದಿದೆ.

'ಶಾಲೆಗೆ ಹೋಗುವ ಹೆಣ್ಣುಮಕ್ಕಳ ಮುಟ್ಟಿನ ಅವಧಿಯ ನೈರ್ಮಲ್ಯ ಕುರಿತ ನೀತಿ'ಗೆ ಕೇಂದ್ರ ಆರೋಗ್ಯ ಸಚಿವಾಲಯವು ನ.2ರಂದು ಒಪ್ಪಿಗೆ ನೀಡಿರುವುದಾಗಿ ಕಳೆದ ತಿಂಗಳು ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿತ್ತು.

# ಡಿ. ತೀರ್ಥಲಿಂಗಪ್ಪನವರ ಕೃತಿ ಬಿಡುಗಡೆ



ಡಿ. ತೀರ್ಥಲಿಂಗಪ್ಪ ಅವರ ಜೀವನಾಧಾರಿತ ಕೃತಿ 'ನಾನು, ನನ್ನ ಜೀವನ' ಕೃತಿ ಬಿಡುಗಡೆ ಸಮಾರಂಭವು ಸಿರಿಗೆರೆಯ ತರಳಬಾಳು ಬೃಹನ್ಮಠದ ಶ್ರೀ ಗುರುಶಾಂತೇಶ್ವರ ದಾಸೋಹ ಭವನದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ.

ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ ಅವರು ಕೃತಿಯನ್ನು ಬಿಡುಗಡೆ ಮಾಡುವರು. ಹಿರಿಯ ಸಾಹಿತಿ ಡಾ. ನಾ. ಲೋಕೇಶ್ ಒಡೆಯರ್ ಕೃತಿಯನ್ನು ಪರಿಚಯಿಸುವರು.

ಹೊನ್ನಾಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ಬಿ.ಜಿ. ಧನಂಜಯ, ನಿವೃತ್ತ ಉಪನ್ಯಾಸಕ ಎಸ್. ಆರ್. ಬಸವರಾಜಪ್ಪ, ನ್ಯಾಮತಿ ತಾಲ್ಲೂಕಿನ ಸಾಧು ಸದ್ಧರ್ಮ ಸಮಾಜದ ಅಧ್ಯಕ್ಷ ಶಿವಪ್ಪ ಕೋಡಿಕೊಪ್ಪ, ಹೊನ್ನಾಳಿ ತಾಲ್ಲೂಕಿನ ಸಾಧು ಸದ್ಧರ್ಮ ಸಮಾಜದ ಅಧ್ಯಕ್ಷ ಗದಿಗೇಶ್ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿರುವರು.

ಸಾಧು ಸದ್ಧರ್ಮ ಸಮಾಜದ ರಾಜ್ಯಾಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ಸಮಾರಂಭದ ಅಧ್ಯಕ್ಷತೆ ವಹಿಸುವರು.

## ಸಿಎಂ ಆಗಬಾರದು ?

**(1ನೇ ಪುಟದಿಂದ)** ಎಲ್ಲವನ್ನೂ ನೋಡಿದ್ರೂ ಏನೂ ಆಗಲಿಲ್ಲ. ಅದಕ್ಕೆ ಸುಮ್ಮನೆ ಕೂತಿದ್ದಾರೆ ಅಷ್ಟೇ. ನನ್ನ ಮೇಲೆ ಆ ಭಗವಂತನ ಕೃಪೆ ಇದೆ, ಜನರ ಶಕ್ತಿ ನನ್ನೊಂದಿಗೆ ಇದೆ ಎಂದು ಹೇಳಿದರು.

# ನಗರದಲ್ಲಿ ಇಂದು 'ಅನನ್ಯ ಸಂಭ್ರಮ' ಗುರುವಂದನಾ, ಸ್ನೇಹ ಸಮ್ಮಿಲನ

ದಾವಣಗೆರೆ, ಡಿ. 8- ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ವಜ್ರಮಹೋತ್ಸವದ ಪ್ರಯುಕ್ತ ನಾಳೆ ದಿನಾಂಕ 9 ರ ಸೋಮವಾರ ಬೆಳಿಗ್ಗೆ 11 ಗಂಟೆಗೆ 'ಅನನ್ಯ ಸಂಭ್ರಮ-2024' ಗುರುವಂದನಾ, ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ದೃಶ್ಯಕಲಾ ಮಹಾವಿದ್ಯಾಲಯದ ಆರ್ಟ್ ಗ್ಯಾಲರಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬೋಧನಾ ಸಹಾಯಕರಾದ ದತ್ತಾತ್ರೇಯ ಎನ್. ಭಟ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವೇದಿಕೆ ಕಾರ್ಯಕ್ರಮಕ್ಕೂ ಪೂರ್ವದಲ್ಲಿ ಬೆಳಿಗ್ಗೆ 10.15 ಕ್ಕೆ 2007 ನೇ ಸಾಲಿನ ತಂಡದವರಿಂದ ದೃಶ್ಯ ವಿಶ್ವ ಕಲಾ ಗ್ಯಾಲರಿಯಲ್ಲಿ ಆಯೋಜಿಸುತ್ತಿರುವ ಸಮೂಹ ಕಲಾ ಪ್ರದರ್ಶನಕ್ಕೆ ಜಿರಾಫೆ ಅಣುಕು ಶಿಲ್ಪಕಲಾ ಕೃತಿಯ ಉದ್ಘಾಟನೆ ಮಾಡುವ ಮೂಲಕ ಚಾಲನೆ ದೊರೆಯಲಿದೆ.

ನಂತರ 11ಗಂಟೆಗೆ ಗುರುವಂದನಾ ಸಭಾ ಕಾರ್ಯಕ್ರಮ ನಡೆಯಲಿದ್ದು, ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಮತ್ತು ಹಾಲಿ ಸೇವೆ ಸಲ್ಲಿಸುತ್ತಿರುವ ಗುರು ವೃಂದವನ್ನು ಗೌರವಿಸಲಾಗುವುದು. ಅದೇ ದಿನ ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ರವರೆಗೆ 2007 ನೇ ಸಾಲಿನ ವಿದ್ಯಾರ್ಥಿಗಳಲ್ಲಿ ಕೆಲವರಿಂದ ಬ್ರಾಂಡಿಂಗ್, ಡಿಜಿಟಲ್ ಮಾರ್ಕೆಟಿಂಗ್, ಯುಐ, ಯುಎಕ್ಸ್ ಡಿಸೈನಿಂಗ್, ಶಿಲ್ಪಕಲೆ, ವಿಇಎಕ್ಸ್ ಪ್ರೊಡಕ್ಸನ್ ಮೊದಲಾದ ವಿಷಯಗಳ ಕುರಿತು ಪ್ರಾತ್ಯಕ್ಷಿಕೆ ಮತ್ತು ಸಂವಾದ ನಡೆಯಲಿದೆ.

ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ. ಕುಂಬಾರ್ ಗುರುವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಪ್ರಾಚಾರ್ಯ ಡಾ. ಜೈರಾಜ್ ಎಂ. ಚಿಕ್ಕಪಾಟೀಲ್, 2007 ನೇ ಸಾಲಿನ ವಿದ್ಯಾರ್ಥಿಗಳಾದ ಡಿ.ಪಿ. ಪವನ್, ಕೆ.ವಿ. ರಾಕೇಶ್ ಮತ್ತಿತರರು ಪಾಲ್ಗೊಳ್ಳುವರು ಎಂದು ತಿಳಿಸಿದರು.

ಸಂಜೆ 5.30 ಕ್ಕೆ ಸಮಾರೋಪ ಸಮಾರಂಭದಲ್ಲಿ ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜೈರಾಜ್ ಚಿಕ್ಕಪಾಟೀಲ್ ಅಧ್ಯಕ್ಷತೆ ವಹಿಸುವರು. ಡಾ. ಸತೀಶ್ ಕುಮಾರ್ ಪಿ. ವಲ್ಲೇಪುರೆ, 2007 ನೇ ಸಾಲಿನ ವಿದ್ಯಾರ್ಥಿಗಳಾದ ಹೆಚ್.ಕೆ. ಇಂದ್ರಕುಮಾರ್, ಆರ್.ಕೆ. ಅವಿನಾಶ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ದಿನಾಂಕ 9 ರಿಂದ ಇದೇ ದಿನಾಂಕ 15 ರವರೆಗೆ 2007 ನೇ ಸಾಲಿನಲ್ಲಿ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಅನುಸರಿಸಲ್ಪಡುತ್ತಿದ್ದ ದೃಶ್ಯಕಲಾ ಪಠ್ಯಕ್ರಮ ಮತ್ತು ದೃಶ್ಯಕಲಾ ಶೈಲಿಯ ದರ್ಶನ ಪ್ರಜ್ಞಾವಂತ, ಕಲಾಸಕ್ತ ನೋಡುಗರಿಗೆ ಆಗಲಿದೆ. ಪೆನ್ಸಿಲ್, ಪೆನ್, ಇಂಕ್ ಜಲವರ್ಣ, ಪೋಸ್ಟರ್ ವರ್ಣ, ಆಕ್ರಾಲಿಕ್ ಮಾಧ್ಯಮಗಳಲ್ಲಿ ಚಿತ್ರಕಲಾ ಕಾಗದ, ಪೋಸ್ಟರ್ ಕಾಗದ, ಕ್ಯಾನವಾಸ್ ಮೇಲೆ ರಚಿಸಿದ ಚಿತ್ರಗಳಲ್ಲದೇ ಕೆಲವು ಶಿಲ್ಪಗಳೂ ಸಹ ಪ್ರದರ್ಶನದಲ್ಲಿ ಇರಲಿವೆ ಎಂದು ಹೇಳಿದರು.

ಬಹುತೇಕ ಎಲ್ಲವೂ ಶ್ರೀಸಾಮಾನ್ಯರಿಗೆ ಮುದ ನೀಡಬಲ್ಲ ಕಲಾತ್ಮಕ ಕೌಶಲ್ಯದಿಂದ ಕೂಡಿರುವ ಕಲಾಕೃತಿಗಳು ಈ ಪ್ರದರ್ಶನದಲ್ಲಿವೆ.

ಕಲಾವಿದರಾದ ಅನಿಲ್ ಹೆರೂರು, ಆವಿನಾಶ್, ಬಸವರಾಜ್, ಹೆಚ್.ಕೆ. ಇಂದ್ರಕುಮಾರ್, ಹೆಚ್. ಕಿರಣ್, ಮಾರುತಿ ಕಾಮತ್, ಕೆ. ಲಕ್ಷ್ಮಣ್, ಕಿರಣ್ ಕುಮಾರ್, ನಮಿತಾ, ನಾಗರಾಜ್ ಎನ್. ಕಾಮತ್, ಮಲ್ಲಿಕಾರ್ಜುನ್, ಎಲ್. ನವೀನ್, ನಾರಾಯಣ ತೊರವಿ, ನೂರ್ ಫಾತೀಮಾ, ನಿತ್ಯಾನಂದ, ಪವನ, ಕೆ.ವಿ. ರಾಕೇಶ್, ಎನ್. ರಾಕೇಶ, ಜಿ.ಆರ್. ರಶ್ಮಿ, ರಶ್ಮಿ, ರವಿಕಿರಣ ಬಳೋಜಿ, ಎ.ಎನ್.ಶೀಲಾ, ಡಿ.ಸಿ. ಸಿದ್ದೇಶ್, ಸಿ. ಶ್ರೀಕಾಂತ್, ವಿ.ಟಿ. ಶ್ವೇತಾ, ಹೆಚ್.ಎಸ್. ಸುದರ್ಶನ್, ಬಿ.ಎಂ. ಸಂದೀಪ್, ಎಸ್.ವಿ. ವಿನಾಯಕ ಭಾಗವಹಿಸುವರು ಎಂದರು.

ಪ್ರತಿ ದಿನ ಬೆಳಿಗ್ಗೆ 10.30 ರಿಂದ ಸಂಜೆ 6 ರವರೆಗೆ ಕಲಾ ಪ್ರದರ್ಶನ ಏರ್ಪಡಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಹೆಚ್.ಕೆ. ಇಂದ್ರಕುಮಾರ್, ಡಿ.ಪಿ. ಪವನ್, ಕೆ.ವಿ. ರಾಕೇಶ್ ಉಪಸ್ಥಿತರಿದ್ದರು.

# 'ಅಕ್ಕ ಕೆಫೆ' ಸ್ಥಾಪನೆಗೆ ಹರಿಹರದಲ್ಲಿ ಸ್ಥಳ ಪರಿಶೀಲನೆ



ಹರಿಹರ, ಡಿ.7 - ಜಿ.ಪಂ. ಪ್ರಾಜೆಕ್ಟ್ ಡೈರೆಕ್ಟರ್ ರೇಷ್ಮಾ ಕೌಸರ್ ಸ್ಥಳ ಪರಿಶೀಲನೆ ನಡೆಸಿ, ಅಂತಿಮವಾಗಿ ನಗರದ ಡಿ.ಆರ್.ಎಂ. ಪದವಿ ಕಾಲೇಜು ಕ್ಯಾಂಪಸ್ ಆವರಣದಲ್ಲಿ 'ಅಕ್ಕ ಕೆಫೆ' ಸ್ಥಾಪನೆ ಮಾಡುವುದಕ್ಕೆ ಜಿಲ್ಲೆಯ ಹಿರಿಯ ಅಧಿಕಾರಿಗಳ ಗಮನಕ್ಕೆ ತರವುದಾಗಿ ಭರವಸೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಸರ್ಕಾರ ಮಹಿಳಾ ಸಂಘದವರು ಸ್ವಾವಲಂಬನೆ ಜೀವನ ನಡೆಸಲು ಅನುಕೂಲ ಕಲ್ಪಿಸುವ ದೃಷ್ಟಿಯಿಂದ 'ಅಕ್ಕ ಕೆಫೆ' ಎಂಬ ವಿನೂತನ ಯೋಜನೆ ಜಾರಿಗೆ ತರಲಾಗಿದೆ ಎಂದರು.

ಜಿಲ್ಲೆಯ ಎರಡು ಕಡೆಗಳಲ್ಲಿ ಅಕ್ಕ ಕೆಫೆ ಸ್ಥಾಪನೆ ಮಾಡಲು ಮಂಜೂರಾತಿ ಸಿಕ್ಕಿದ್ದು, ದಾವಣಗೆರೆ ನಗರದ ಅರುಣಾ ಟಾಕೀಸ್ ಎದುರು ಪಶುಪಾಲನೆ ಇಲಾಖೆ ಸ್ಥಳದಲ್ಲಿ ಸ್ಥಾಪನೆ ಮಾಡುವುದಕ್ಕೆ ಈಗಾಗಲೇ ಎಲ್ಲಾ ರೀತಿಯ ತಯಾರಿ ನಡೆದಿದೆ. ಶೀಘ್ರದಲ್ಲೇ ಉದ್ಘಾಟನೆ ಕೂಡ ಮಾಡಲಾಗುತ್ತದೆ.

ಹರಿಹರ ಗಿರಿಯಮ್ಮ ಪಿಯುಸಿ, ಪದವಿ ಕಾಲೇಜು, ಅಂಬೇಡ್ಕರ್ ಹೈಸ್ಕೂಲ್ ಮತ್ತು ಕಾಲೇಜು, ಇರುವುದರಿಂದ ಇಲ್ಲಿನ ಸ್ಥಳವನ್ನು ಆಯ್ಕೆ ಮಾಡಿದ್ದು,, ಈ ವಿಚಾರಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಹಿರಿಯ ಅಧಿಕಾರಿಗಳ ಮತ್ತು ಸ್ಥಳೀಯ ಬಿಇಓ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

ಹರಿಹರ ಡಿ.ಆರ್.ಎಂ ಪದವಿ ಕಾಲೇಜು ಪ್ರಾಂಶುಪಾಲ ಪರಮೇಶ್ವರಪ್ಪ ಮಾತನಾಡಿ, ಕಾಲೇಜಿನಲ್ಲಿ 1500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು, ಅದರಲ್ಲಿ ಶೇ. 70 ರಷ್ಟು ಮಹಿಳೆಯರಿದ್ದಾರೆ. ಕಾಲೇಜ್ ಆವರಣದಲ್ಲಿ ಕೆಲವು ವ್ಯಾಪಾರಸ್ಥರು ತಾತ್ಕಾಲಿಕ ಶೆಡ್ ಹಾಕಿಕೊಂಡು ಹೋಟೆಲ್ ವ್ಯಾಪಾರ ಮಾಡುವುದಾಗಿ ಕೇಳಲಿಕ್ಕೆ ಬಂದಿದ್ದರು, ಆದರೆ ಇಂದಿನ ಕಾಲಘಟ್ಟಕ್ಕೆ ತಕ್ಕಂತೆ ಇರುವಂತಹ ವ್ಯವಸ್ಥೆ ಮಾಡಬೇಕಾಗುತ್ತದೆ ಎಂದು ಇಲ್ಲಿಯವರೆಗೂ ಕ್ಯಾಂಟೀನ್ ಸ್ಥಾಪನೆ ಮಾಡಿರಲಿಲ್ಲ. ಈ ಸೌಲಭ್ಯದಿಂದ ಆದರೆ ಇಲ್ಲಿನ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲ ಕಲ್ಪಿಸಿದಂತೆ ಆಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾ.ಪಂ. ಇಓ ಸುಮಲತಾ, ಜಿ.ಪಂ. ಪ್ರೋಗ್ರಾಂ ಮ್ಯಾನೇಜರ್ ಭೋಜರಾಜ್, ರಂಗಸ್ವಾಮಿ, ತಾ.ಪಂ. ಪ್ರೋಗ್ರಾಂ ಮ್ಯಾನೇಜರ್ ನಾಗರಾಜ್, ಶಾಂತಕುಮಾರಿ, ಉಪನ್ಯಾಸಕರಾದ ಯತೀಶ್, ಕುಮಾರ್, ಮಂಜುನಾಥ್, ಅಣ್ಣಪ್ಪ ಇತರರು ಹಾಜರಿದ್ದರು.

## ಬೃಹತ್ ಬೈಕ್ ರ್‍ಯಾಲಿ ಮೂಲಕ ವಿಜಯೇಂದ್ರಗೆ ಸ್ವಾಗತ



ಮಲೇಬೆನ್ನೂರು, ಡಿ.8- ನಂದಿಗುದಿ ಮಠದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಶಿಕಾರಿಪುರದಿಂದ ಆಗಮಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ.ವಿಜಯೇಂದ್ರ ಅವರನ್ನು ಕೊಮಾರನಹಳ್ಳಿ ಬಳಿ ಸ್ವಾಗತ ಮಾಡಿಕೊಂಡು ನಂತರ ಮಲೇಬೆನ್ನೂರಿನಿಂದ ಬಸಾಪುರ, ಬೇವಿನಹಳ್ಳಿ, ಹಳ್ಳಿಹಾಳ್, ಕೊಕ್ಕನೂರು, ಹಿಂಡಸಘಟ್ಟ, ಗೋವಿನಹಾಳ್ ಮಾರ್ಗವಾಗಿ ಬೃಹತ್ ಬೈಕ್ ರ್‍ಯಾಲಿಯ ಮೂಲಕ ನಂದಿಗುಡಿ ಬೃಹನ್ಮಠಕ್ಕೆ ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಅವರ ನೇತೃತ್ವದಲ್ಲಿ ಅದ್ಧೂರಿಯಾಗಿ ಕರೆತರಲಾಯಿತು.

**ಸಾರ್ವಜನಿಕ ಪ್ರಕಟಣೆ**

ನನ್ನ ಕಕ್ಷಿದಾರರಾದ ಶ್ರೀ ಹಾಲೇಶ ಪೂಜಾರ ಬಿನ್ ಲೇಟ್ ಪೂಜಾರ ರುದ್ರಪ್ಪ ಮತ್ತು ಶ್ರೀಮತಿ ವಿಶಾಲ ಪೂಜಾರ ಕೋಂ. ಹಾಲೇಶ ಪೂಜಾರ, ವಾಸ : ಹಿರೇಮೇಗಳಗೆರೆ ಗ್ರಾಮ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ (ಮೊಬೈಲ್ ನಂ. 7795010929) ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:-

ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಆಸ್ತಿಯ ಮಾಲೀಕರಾದ ಶ್ರೀ ಪೂಜಾರ್ ಬಸವರಾಜ ಬಿನ್ ಲೇಟ್ ಪೂಜಾರ್ ಚೌಡಪ್ಪ ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಸದರಿ ಷೆಡ್ಯೂಲ್ ಆಸ್ತಿಯ ಬಗ್ಗೆ ಸಾರ್ವಜನಿಕರು ಯಾರೇ ಆಗಲೀ ತಂಟೆ, ತಕರಾರು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆ ಇದ್ದಲ್ಲಿ, ಈ ಪ್ರಕಟಣೆ ಪ್ರಕಟಗೊಂಡ ಹದಿನೈದು ದಿನದೊಳಗಾಗಿ ಈ ಕೆಳಕಂಡವರನ್ನಾಗಲೀ ಅಥವಾ ನನ್ನ ಕಕ್ಷಿದಾರರನ್ನಾಗಲೀ ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು. ಹದಿನೈದು ದಿನದೊಳಗಾಗಿ ಯಾವುದೇ ರೀತಿಯ ತಂಟೆ, ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಈ ಷೆಡ್ಯೂಲ್ ಆಸ್ತಿಯನ್ನು ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ.

ಷೆಡ್ಯೂಲ್ :

ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಅಡವಿಹಳ್ಳಿ ಗ್ರಾಮದ ರಿ.ಸ.ನಂ. 297/ಎ ವಿಸ್ತೀರ್ಣ 5-95 ಎಕರೆ ತರಂ 2-68 ಜಮೀನಿನ ಚಕ್ಕುಬಂದಿ :- ಪೂರ್ವ : ಎ.ಜಿ. ವಿಶ್ವನಾಥ ಇವರ ಜಮೀನು, ಪಶ್ಚಿಮ : ಅಡವಿಹಳ್ಳಿ ಶಾರದಮ್ಮನ ಜಮೀನು ಹಾಗೂ ದಾರಿ, ಉತ್ತರ : ಬೆಟ್ಟನಗೌಡರ ಜಮೀನು, ದಕ್ಷಿಣ : ಶಿವಮೂರ್ತೆಪ್ಪನ ಜಮೀನು. ಈ ಚಕ್ಕುಬಂದಿ ಮಧ್ಯದಲ್ಲಿರುವ ಪೂರಾ ಜಮೀನು.

ಸಂಪರ್ಕಿಸಬೇಕಾದ ವಿಳಾಸ : ಎಂ. ನಾಗೇಂದ್ರಪ್ಪ ಬಿ.ಎ. ಎಲ್.ಎಲ್.ಬಿ, ವಕೀಲರು, ವಿಳಾಸ : ಜಾನಿಬಾಷ ಕಾಂಪ್ಲೆಕ್ಸ್, ಐ.ಬಿ. ಸರ್ಕಲ್ ಹತ್ತಿರ, ಹೊಸಪೇಟೆ ರಸ್ತೆ, ಹರಪನಹಳ್ಳಿ, ವಿಜಯನಗರ ಜಿಲ್ಲೆ - 583131 ಮೊ : 98457 26838

ಎಂ. ನಾಗೇಂದ್ರಪ್ಪ
ವಕೀಲರು

# ಮಹಾಭಾರತ ನಮ್ಮ ಜೀವನದ ಕೈಪಿಡಿ ; ಹಲವು ಪಾಠಗಳನ್ನು ಹೇಳಿಕೊಡುತ್ತದೆ : ಪಂಡಿತ ವಿದ್ಯಾಧೀಶ ಆಚಾರ್ಯ ಗುತ್ತಲ



ದಾವಣಗೆರೆ, ಡಿ. 8 - ವಿಶ್ವ ಮಧ್ವ ಮಹಾ ಪರಿಷತ್ತಿನ ದಾವಣಗೆರೆ ಕೇಂದ್ರದ ರಜತ ಮಹೋತ್ಸವದ ಅಂಗವಾಗಿ ನಗರದ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಇಂದು ಆಯೋಜಿಸಿದ್ದ ಮಹಾಭಾರತ ಪ್ರವಚನದ ಮಂಗಳ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಾಭಾರತ ಎಂದರೆ ಕೇವಲ ಅಣ್ಣ, ತಮ್ಮಂದಿರ ಜಗಳ, ಜೂಜಾಟ ಎಂದು ಭಾವಿಸುವುದು ಸರಿಯಲ್ಲ. ನಮ್ಮ ಜೀವನವನ್ನು ಹೇಗೆ ಸಾರ್ಥಕ ಗೊಳಿಸಿಕೊಳ್ಳಬೇಕು ಎಂಬುದಕ್ಕೆ ಈ ಗ್ರಂಥದಲ್ಲಿ ಹಲವು ಕಥೆಗಳಿವೆ ಎಂದು ತಿಳಿಸಿದರು.

ಮಹಾಭಾರತದಲ್ಲಿ ಬರುವ ವಿಚಾರ ಗಳನ್ನು ನಮ್ಮ ಜೀವನಕ್ಕೆ ಅನ್ವಯಿಸಿಕೊಳ್ಳ ಬೇಕು. ನಮ್ಮಲ್ಲಿ ಕೆಟ್ಟ ಪ್ರವೃತ್ತಿ ಬಂದರೆ ಕೌರವರು ಗೆದ್ದಂತೆ. ಒಳ್ಳೆಯ ವಿಚಾರಗಳು ಮನದಲ್ಲಿ ಮೂಡಿದರೆ ಪಾಂಡವರು ಜಯಿಸಿದಂತೆ ಎಂದು ಹೇಳಿದರು.

ಈ ಮೇರು ಕೃತಿಯು ವಿಶಿಷ್ಟವಾಗಿದ್ದು 1 ಲಕ್ಷ ಶ್ಲೋಕಗಳಿವೆ. ಮಹತ್ವದ ದೃಷ್ಟಿಯಿಂದ ಇದು ಭಾರವಾದ ಗ್ರಂಥವಾಗಿದೆ. ಇದರಲ್ಲಿನ ವಿಷಯಗಳನ್ನು ಕೇಳಿದರೆ ಪಾಪ ಪರಿಹಾರವಾಗುತ್ತದೆ ಎಂದು ತಿಳಿಸಿದರು.

ಮಹಾಭಾರತವು ಐತಿಹಾಸಿಕ ಗ್ರಂಥವಾಗಿದೆ. ಇತಿಹಾಸದ ವಿಚಾರಗಳನ್ನು ಕೇಳುವುದರಿಂದ ನಮ್ಮಲ್ಲಿ ಬದಲಾವಣೆ ಆಗುತ್ತದೆ. ನಮ್ಮ ಪೂರ್ವಜರು ಸಾಗಿದ ಧರ್ಮ ಮಾರ್ಗದಲ್ಲಿ ನಾವೂ ಸಾಗಲು ಪ್ರೇರಣೆ ದೊರೆಯುತ್ತದೆ ಎಂದು ಹೇಳಿದರು.

ಜನಮೇಜಯನ ಕಥೆಯಿಂದ ಆರಂಭಿಸಿ ಧೌಮ್ಯ ಋಷಿಗಳು, ಶಿಷ್ಯಂದಿರಾದ ಆರಣಿ, ಉಪಮನ್ಯು, ಬೈದ ಮುಂತಾದವರ ಕಥೆಗಳನ್ನು ವಿದ್ಯಾಧೀಶ ಆಚಾರ್ಯರು ವಿವರಿಸಿದರು. ಋಷಿ ಮುನಿಗಳ ಸಾಧನೆ, ಗುರು ಸೇವೆ, ವಿದ್ಯಾರ್ಜನೆ ಹೀಗೆ ಹಲವು ವಿಚಾರಗಳು ಈ ಕೃತಿಯಲ್ಲಿ ಅಡಕವಾಗಿವೆ ಎಂದು ತಿಳಿಸಿದರು.

ವಿಶ್ವ ಮಧ್ವ ಮಹಾ ಪರಿಷತ್ತಿನ ದಾವಣಗೆರೆ ಕೇಂದ್ರದ ಅಧ್ಯಕ್ಷ ಪಂಡಿತ ವೆಂಕಟಗಿರೀಶಾಚಾರ್ ಕಾರ್ಯಕ್ರಮ ನಿರ್ವಹಿಸಿದರು. ಕಂಪ್ಲಿ ಗುರುರಾಜಾಚಾರ್, ಪಾಂಡುರಂಗಾಚಾರ್ ಮಣ್ಣೂರು. ಗೋಪಾಲಾಚಾರ್, ರಾಮ ಗೋಪಾಲ ಕಟ್ಟಿ, ವೆಂಕಟೇಶ ನವರತ್ನ ಇನ್ನಿತರರು ಇದ್ದರು. ಕೃಷ್ಣಾಚಾರ ಮಣ್ಣೂರು ವಂದಿಸಿದರು. ಪರಿಷತ್ತಿನ ಎಲ್ಲ ಸದಸ್ಯರು ಪಾಲ್ಗೊಂಡಿದ್ದರು. ಭಾರತಿ ಭಜನಾ ಮಂಡಳಿಯ ಸದಸ್ಯರು ದೀಪಾಲಂಕಾರದ ವ್ಯವಸ್ಥೆ ಮಾಡಿದ್ದರು.

ವಿಶ್ವ ಮಧ್ವ ಮಹಾ ಪರಿಷತ್ತಿನ ದಾವಣಗೆರೆ ಕೇಂದ್ರದ ರಜತ ಮಹೋತ್ಸವದ ಅಂಗವಾಗಿ ಆದಿಪರ್ವ ಮತ್ತು ಸಭಾ ಪರ್ವ ಪ್ರವಚನ ಮಾಲಿಕೆ ವರ್ಷವಿಡೀ ನಡೆಯಲಿದೆ. ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ಜ್ಞಾನ ಕಾರ್ಯದ ಪ್ರಯೋಜನ ಪಡೆಯಬೇಕು ಎಂದು ವಿದ್ಯಾಧೀಶ ಆಚಾರ್ಯರು ಹೇಳಿದರು.

ಇದೇ ವೇಳೆ ಅವರು, ಯುವಜನರಲ್ಲಿ ಧರ್ಮ ಜಾಗೃತಿ ಮೂಡಿಸುವ ಉದ್ದೇಶದ 'ಯುವಾತ್ಮ' ತಂಡದ ಉದ್ಘಾಟನೆ ನೆರವೇರಿಸಿದರು.

# ಕುಂದುವಾಡ ಕೆರೆ ವಾಯು ವಿಹಾರ ಬಳಗದಿಂದ ದಾವಣಗೆರೆ - ಹರಿಹರ ಕಾಲ್ನಡಿಗೆ ಜಾಥಾ



ದಾವಣಗೆರೆ, ಡಿ. 8- ಕುಂದುವಾಡ ಕೆರೆ ವಾಯು ವಿಹಾರ ಬಳಗದಿಂದ ನಗರದಿಂದ ಹರಿಹರಕ್ಕೆ ಹಮ್ಮಿ ಕೊಂಡಿದ್ದ ಕಾಲ್ನಡಿಗೆ ಜಾಥ ಯಶಸ್ವಿಯಾಗಿ ನಡೆಯಿತು.

500 ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು. ಜಾಥಾವು ದಾವಣಗೆರೆಯಿಂದ ಬೆಳಿಗ್ಗೆ 5.30 ಕ್ಕೆ ಸರಿಯಾಗಿ ಹೊರಟು 7.30 ಕ್ಕೆ ಹರಿಹರಕ್ಕೆ ತಲುಪಿತು.

ದೇವಸ್ಥಾನದ ಆವರಣದಲ್ಲಿ ವಾಯು ವಿಹಾರಿಗಳಿಗೆ ಯೋಗ ಮತ್ತು ಧ್ಯಾನ ಮಾಡಿಸಲಾಯಿತು. ನಂತರ ಉಪಹಾರ ಸೇವಿಸಿ ದಾವಣಗೆರೆಗೆ ಹಿಂತಿರುಗಲಾಯಿತು.

ಬಳಗದ ಮುಖ್ಯಸ್ಥ ಜೆ. ಈಶ್ವರಸಿಂಗ್ ಕವಿತಾಳ್, ಬಿ.ಹೆಚ್. ಶಿವಕುಮಾರ್, ಸೋಮಶೇಖರ ಬಾಬು, ಮುರುಳಿಧರ ಗುಪ್ತ, ಜಯಣ್ಣ ಆಲೂರು, ಜಿ.ಎಸ್. ರಾಜರಾವ್, ವಿಜಯಕುಮಾರ್ ಬಾಳೆಹೊಲ, ರಮೇಶ ಕೆ.ಹೆಚ್. ಪ್ರಕಾಶ್, ಅಧಿಕಾರಿ ಮಹಾಲಿಂಗೇಶ್, ಪ್ರಭು ಜಯಣ್ಣ ಆಲೂರು, ಬಸವರಾಜ ಆಲೂರು, ರಾಕೇಶ್, ಮಲ್ಲಿಕಾರ್ಜುನ ಕಂಬ್ಳಿ, ನಿರಂಜನ ಮೂರ್ತಿ, ಥಾಮೊಸರ, ರಾಮಮೂರ್ತಿ, ಅರುಣ ಸೇರಿದಂತೆ ಇತರರು ಜಾಥದಲ್ಲಿದ್ದರು.

## ದೇವರಹಟ್ಟಿ : ಇಂದು ಬಸವಣ್ಣ ಕಾರ್ತಿಕ

ದಾವಣಗೆರೆ ತಾಲ್ಲೂಕಿನ ದೇವರ ಹಟ್ಟಿ ಗ್ರಾಮದ ಶ್ರೀ ದೇವರಹಟ್ಟಿ ಬಸವಣ್ಣನ ದೇವಸ್ಥಾನದಲ್ಲಿ ಇಂದು ಸೋಮವಾರ ಕಾರ್ತಿಕೋತ್ಸವ ಏರ್ಪ ಡಿಸಲಾಗಿದ್ದು, ರಾತ್ರಿ 7 ಗಂಟೆಯಿಂದ ವಿಶೇಷ ಪೂಜೆ, ಮಹಾ ಮಂಗಳಾರತಿ, ಫಳಾರ ವಿನಿಯೋಗ ನಡೆಯಲಿದೆ.


ತಕ್ಷಣ ಬೇಕಾಗಿದ್ದಾರೆ
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ
ಶಾಂತಲಾ
ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327


## ಪಂಜಾಬ್‌ನಲ್ಲಿ ರಾಷ್ಟ್ರೀಯ, ರಾಜ್ಯ ಹೆದ್ದಾರಿ ತಡೆ ತೆರವಿಗೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ

ನವದೆಹಲಿ, ಡಿ.8 - ಪಂಜಾಬ್‌ನಲ್ಲಿ ರೈತರು ಪ್ರತಿಭಟನೆ ನಡೆಸುತ್ತಿರುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ತಡೆಯನ್ನು ತಕ್ಷಣವೇ ತೆರವುಗೊಳಿಸುವಂತೆ ಕೇಂದ್ರ ಮತ್ತು ಸಂಬಂಧಿಸಿದವರಿಗೆ ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ. ಪಂಜಾಬ್ ಮೂಲದ ಸಾಮಾಜಿಕ ಕಾರ್ಯಕರ್ತರೊಬ್ಬರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಮನವಿಯಲ್ಲಿ ರೈತರ ಪ್ರತಿಭಟನೆಗಳ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಲು ಮತ್ತು ರಾಷ್ಟ್ರೀಯ ಹೆದ್ದಾರಿಗಳು ಮತ್ತು ರೈಲ್ವೇ ಹಳಿಗಳನ್ನು ಆಂದೋಲನ ಮಾಡುವ ರೈತರಿಂದ ನಿರ್ಬಂಧಿಸದಂತೆ ನೋಡಿಕೊಳ್ಳಲು ಕೇಂದ್ರ ಮತ್ತು ಇತರರಿಗೆ ನಿರ್ದೇಶನಗಳನ್ನು ಕೋರಲಾಗಿದೆ.

## ಚರ್ಚಾ ಸ್ಪರ್ಧೆ : ಪಿ.ಎ. ತೇಜಸ್ವಿನಿ ಜಿಲ್ಲಾ ಮಟ್ಟಕ್ಕೆ ಆಯ್ಕೆ



ಜಗಳೂರು, ಡಿ.8- ತಾಲ್ಲೂಕಿನ ಬಿಳಿಚೋಡು ಗ್ರಾಮದ ನಿವಾಸಿ ಪಿ. ಅಜ್ಜಯ್ಯ ಮತ್ತು ಶ್ರೀಮತಿ ರೂಪಾ ದಂಪತಿಯ ಪುತ್ರಿ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಪಿ.ಎ. ತೇಜಸ್ವಿನಿ ಅವರು ಈಚೆಗೆ ನಡೆದ ತಾಲ್ಲೂಕು ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆಯುವ ಮೂಲಕ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

## ದಾನಾಪುರದಲ್ಲಿ ಕಾರ್ತಿಕ

ರಾಣೇಬೆನ್ನೂರು, ಡಿ.8- ಚೌಡಯ್ಯ ದಾನಾಪುರದಲ್ಲಿ ಇದೇ ದಿನಾಂಕ 12ರ ರಾತ್ರಿ 8ಕ್ಕೆ ಶ್ರೀ ವೀರಭದ್ರೇಶ್ವರ ದೇವರ ಕಾರ್ತಿಕೋತ್ಸವ ನಡೆಯಲಿದೆ.




ಶ್ರೀ ಮಲ್ಲಿಕಾರ್ಜುನ ಮೋಟಾರ್ & ಸ್ಕೂಟರ್ ಮಾರ್ಟ್
ಶಂಕರ್ ವಿಹಾರ್ ಬಡಾವಣೆ, ಪಿ.ಬಿ. ರೋಡ್, ದಾವಣಗೆರೆ.
63635 85424, 86183 66017


## ಹರಿಹರದಲ್ಲಿ ಇಂದು ಶಿವಸಂಚಾರ ನಾಟಕ

ಬಸವ ಬಳಗ, ಸಿಟಿ ಫ್ಯಾಮಿಲಿ ಸೆಂಟರ್, ಎಪಿಎಂಸಿ ವಾಯು ವಿಹಾರ ಬಳಗದ ಸಹಯೋಗ ದೊಂದಿಗೆ ವಿದ್ಯಾನಗರ ಆವರಣ ದಲ್ಲಿರುವ ಸಿಟಿ ಫ್ಯಾಮಿಲಿ ಸೆಂಟರ್ ಮುಂಭಾಗದ ಆವರಣದಲ್ಲಿ ಶಿವಸಂಚಾರ ನಾಟಕ ಮಂಡಳಿ ವತಿಯಿಂದ 3 ದಿನಗಳ ಕಾಲ ನಾಟಕಗಳ ಪ್ರದರ್ಶನ ನಡೆಯ ಲಿದೆ ಎಂದು ಸಾಧು ವೀರಶೈವ ಸಮಾಜದ ಮುಖಂಡ ಬೆಳ್ಳೂಡಿ ರಾಮಚಂದ್ರಪ್ಪ ತಿಳಿಸಿದ್ದಾರೆ.

ಇಂದು ರಾತ್ರಿ 8.30ಕ್ಕೆ 'ತುಲಾಭಾರ' ನಾಟಕ, ನಾಳೆ ಮಂಗಳವಾರ ರಾತ್ರಿ 8.30ಕ್ಕೆ 'ಬಂಗಾರದ ಮನುಷ್ಯ' ನಾಟಕ ಹಾಗೂ ನಾಡಿದ್ದು ಬುಧವಾರ ರಾತ್ರಿ 8.30ಕ್ಕೆ 'ಕೋಳೂರು ಕೊಡಗೂಸು' ನಾಟಕ ಪ್ರದರ್ಶನಗೊಳ್ಳಲಿದೆ.

## ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ ಡಿ.8- ಪ್ರಸಕ್ತ ಸಾಲಿನ ಪರಿಶಿಷ್ಟ ಜಾತಿ ಹಾಗೂ ಪಂಗಡ ಉಪಯೋಜನೆ ಅಡಿ ಯಲ್ಲಿ 2023ನೇ ಕ್ಯಾಲೆಂಡರ್ ವರ್ಷದಲ್ಲಿ ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟ ಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟು ಗಳಿಗೆ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಅರ್ಜಿಗಳನ್ನು ಇದೇ ದಿನಾಂಕ 20ರೊಳಗಾಗಿ ಸಹಾ ಯಕ ನಿರ್ದೇಶಕರ ಕಾರ್ಯಾ ಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ಇಲ್ಲಿಗೆ ಸಲ್ಲಿಸಬೇಕು.

ಮಾಹಿತಿಗಾಗಿ 08192-237480 ಸಂಪರ್ಕಿಸಿ.

## ನಗರದಲ್ಲಿ ಇಂದು ಕೆಎಎಸ್ ಪರೀಕ್ಷಾ ಪೂರ್ವ ತರಬೇತಿ

ಜಿಲ್ಲಾ ಉದ್ಯೋಗ ವಿನಿ ಮಯ ಕೇಂದ್ರದ ವತಿಯಿಂದ ರಾಮನಗರದ ಗಾಂಧಿ ಭವನ, ಡಿ.ಹೆಚ್.ಓ ಕಚೇರಿ ಪಕ್ಕ ಹಾಗೂ ಎಸ್.ಓ.ಜಿ ಕಾಲೋನಿಯಲ್ಲಿ ಇಂದಿನಿಂದ ಇದೇ ದಿನಾಂಕ 19ರ ವರೆಗೆ ಕೆ.ಎ.ಎಸ್ ಪರೀಕ್ಷೆಯ ಉಚಿತ ಪರೀಕ್ಷಾ ಪೂರ್ವ ತರಬೇತಿ ನಡೆಯಲಿದೆ.

ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಕೆ.ಎ.ಎಸ್. ಹುದ್ದೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲಿರುವ ಪರೀಕ್ಷಾರ್ಥಿ ಗಳು ಸದುಪಯೋಗ ಪಡೆಯಬಹುದು. ಮಾಹಿತಿಗಾಗಿ 7406323294 ಸಂಪರ್ಕಿಸಿ.


ಶಿವ ಶಿವ
ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನ ಕಾರ್ತಿಕ ಸಮಿತಿ
ಶಾಮನೂರು ಶಿವಶಂಕರಪ್ಪ, ಪಾರ್ವತಮ್ಮ ಸಮುದಾಯ ಭವನದ ಆವರಣ, ಶರಣ ಮಾಗನೂರು ಬಸಪ್ಪ ರಸ್ತೆ, ತರಳಬಾಳು ವೃತ್ತ, ದಾವಣಗೆರೆ.
17ನೇ ವರ್ಷದ ಕಾರ್ತಿಕೋತ್ಸವದ ಪ್ರಯುಕ್ತ ಸಹಸ್ರ ದೀಪೋತ್ಸವ ಮತ್ತು ಸಾಂಸ್ಕೃತಿಕ ವೈಭವ
ದಿನಾಂಕ 09.12.2024ರ ಸೋಮವಾರ ಸಂಜೆ 6.00ಕ್ಕೆ
ದಿವ್ಯ ಸಾನ್ನಿಧ್ಯ : ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಶ್ರೀ ಶ್ರೀ ಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ.
ಮುಖ್ಯ ಅತಿಥಿಗಳು : ಶರಣ ಮಹಾವೀರ ಮ. ಕರೇಣ್ಣವರ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ದಾವಣಗೆರೆ
ಶರಣ ಡಾ. ಜಿ.ಎಂ. ಗಂಗಾಧರಸ್ವಾಮಿ, ಭಾ.ಆ.ಸೇ., ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ.
ಶರಣ ಹೆಚ್.ಆರ್. ಬಸವರಾಜಪ್ಪ, ಅಧ್ಯಕ್ಷರು, ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘ, ದಾವಣಗೆರೆ.
ಅಧ್ಯಕ್ಷತೆ : ಶರಣ ಹೆಚ್. ಜಯಣ್ಣ ರಾಮಗೊಂಡನಹಳ್ಳಿ ಅಧ್ಯಕ್ಷರು, ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನ ಕಾರ್ತಿಕ ಸಮಿತಿ.
ತರಳಬಾಳು ಕಲಾಸಂಘ ಸಿರಿಗೆರೆ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ
ಗೋವಿನಹಾಡು (ನೃತ್ಯ ರೂಪಕ), ಭರತನಾಟ್ಯ, ಮಲ್ಲಕಂಬ, ಮಲ್ಲಿಹಗ್ಗ, ಜಡೆಕೋಲಾಟ, ಸುಗಮ ಸಂಗೀತ : ತುಳಸಿ ಮಹಿಳಾ ಸಂಘ, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಸರ್ವರಿಗೂ ಆದರದ ಸುಸ್ವಾಗತ



22ನೇ ವರ್ಷದ ಪುಣ್ಯಸ್ಮರಣೆ

ಜನನ 10-02-1939
ಮರಣ 09-12-2002
ದಿ|| ಶರಣ ಮಾಗನೂರು ರಾಜಶೇಖರಗೌಡ
ಸದಾ ನಿಮ್ಮ ನೆನಪಿನಲ್ಲಿರುವ
ಶ್ರೀಮತಿ ಸುಲೋಚನ ಮಾಗನೂರು ರಾಜಶೇಖರಗೌಡ
ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು
ಡಾ. ಜಿ.ಎಂ.ಸಿದ್ದೇಶ್ವರ
ಮಾಜಿ ಕೇಂದ್ರ ಸಚಿವರು ಹಾಗೂ ಮಾಜಿ ಲೋಕಸಭಾ ಸದಸ್ಯರು
ಹಾಗೂ ಸಹೋದರರು, ಭೀಮಸಮುದ್ರ
ಶ್ರೀ ಎಂ.ಬಿ.ಚನ್ನಬಸವನಗೌಡ ಮತ್ತು ಸಹೋದರರು
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಹಿತೈಷಿಗಳು
ವಾಣಿ ಹೋಂಡ
ಪ್ರಧಾನ ಕಛೇರಿ ಪಿ.ಬಿ.ರಸ್ತೆ, ದಾವಣಗೆರೆ
ಬಸವೇಶ್ವರ ವಿದ್ಯಾಸಂಸ್ಥೆ ಮಾಗನೂರು ರಾಜಶೇಖರ ಹಿರಿಯ ಪ್ರಾಥಮಿಕ ಶಾಲೆ. ತರಳಬಾಳು ಬಡಾವಣೆ, ದಾವಣಗೆರೆ.
ಎಂ.ಬಿ.ಎಂಟರ್ ಪ್ರೈಸಸ್ ಚನ್ನಗಿರಿ ರಸ್ತೆ, ದಾವಣಗೆರೆ
ಪಾಲುದಾರರು ಹಾಗೂ ಸರ್ವ ಸಂಸ್ಥೆಗಳ ಸಿಬ್ಬಂದಿ ವರ್ಗದವರು.



|| ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ||
ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ಜನನ : 01.07.1935
ನಿಧನ : 02.12.2024
ಹರಪನಹಳ್ಳಿ ತಾಲ್ಲೂಕು ಉಚ್ಚಂಗಿದುರ್ಗ ಗ್ರಾಮದ ವಾಸಿ
ಶ್ರೀಮತಿ ಜಾಹ್ನವಿ ಕೆ. ಶ್ರೀ ರವೀಂದ್ರನಾಥ ಗೌಡ್ರು ಮತ್ತು ಸಹೋದರರು ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 02.12.2024ರ ಸೋಮವಾರ ರಾತ್ರಿ 08.10ಕ್ಕೆ
ನನ್ನ ಅಣ್ಣನವರಾದ ಮತ್ತು ಶ್ರೀಮತಿ ರತ್ನಮ್ಮನವರ ಪೂಜ್ಯ ಪತಿಯವರಾದ
ಶರಣ ಕೆ. ಕೆಂಚನಗೌಡ್ರು
ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 10.12.2024ನೇ ಮಂಗಳವಾರ ಬೆಳಿಗ್ಗೆ 10.30ಕ್ಕೆ ಎಸ್.ಎಸ್. (ಮಿನಿ ಛತ್ರ) ತರಳಬಾಳು ಸಭಾಭವನ ಹದಡಿ ರಸ್ತೆ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶರಣೆ ಶ್ರೀಮತಿ ರತ್ನಮ್ಮ ಕೆಂಚನಗೌಡ್ರು
ಶರಣೆ ಶ್ರೀಮತಿ ಮಂಗಳ ಗೌರಮ್ಮ ಶ್ರೀ ತಿಪ್ಪಣ್ಣ
ಶರಣೆ ಶ್ರೀಮತಿ ಡಾ. ಸಂಗೀತ ಶ್ರೀ ಡಾ. ಮಲ್ಲಿಕಾರ್ಜುನ ಗೌಡ ಕೆ.
ಶರಣೆ ಶ್ರೀಮತಿ ಡಾ. ನಳಿನಿ ಶ್ರೀ ಡಾ. ರವಿ ಸಾಲ್ಮನಿ
ಶ್ರೀಮತಿ ಶರಣೆ ಪ್ರೇಮಾ ಶ್ರೀ ಆನಗೋಡು ಚಂದ್ರಶೇಖರ ಮತ್ತು ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು, ಉಚ್ಚಂಗಿದುರ್ಗದ ಗ್ರಾಮಸ್ಥರು, ಮೊ. : 98442 56942, 97413 97408
ವಿ.ಸೂ. : ಆತ್ಮೀಯರೇ, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas